SAPTHAGIRI(KANNADA)
ILLUSTRATED MONTHLY
Volume:01,Issue:07,Pages:56
February-2022,Price Rs.5/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಫೆಬ್ರವರಿ 2022
ಬೆಲೆ ರೂ. 5/-



## ರಥಸಪ್ತಮಿ
## 08-02-2022

ತಿರುಮಲ ತಿರುಪತಿ ದೇವಸ್ಥಾನಗಳು



# ಶ್ರೀನಿವಾಸಮಂಗಾಪುರಂ
# ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
# ಬ್ರಹ್ಮೋತ್ಸವಗಳು

**2022 ಫೆಬ್ರವರಿ 19 ರಿಂದ 28 ರ ವರೆಗೆ**



**19-02-2022 ಶನಿವಾರ**
ಹಗಲು : .....
ರಾತ್ರಿ : ಸೇನಾಧಿಪತಿ ಉತ್ಸವ,
ಅಂಕುರಾರ್ಪಣೆ

**20-02-2022 ಭಾನುವಾರ**
ಹಗಲು: ತಿರುಚ್ಚಿ ಉತ್ಸವ ,
ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ

**21-02-2022 ಸೋಮವಾರ**
ಹಗಲು: ಚಿಕ್ಕಶೇಷವಾಹನ,
ರಾತ್ರಿ: ಹಂಸವಾಹನ.

**22-02-2022 ಮಂಗಳವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**23-02-2022 ಬುಧವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**24-02-2022 ಗುರುವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**25-02-2022 ಶುಕ್ರವಾರ**
ಹಗಲು: ಹನುಮದ್ವಾಹನ,
ಸಾ॥ ವಸಂತೋತ್ಸವಂ
ರಾತ್ರಿ: ಗಜವಾಹನ

**26-02-2022 ಶನಿವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**27-02-2022 ಭಾನುವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**28-02-2022 ಸೋಮವಾರ**
ಹಗಲು: ಪಲ್ಲಕ್ಕಿ ಉತ್ಸವ, ತಿರುಚ್ಚಿ ಉತ್ಸವ,
ಚಕ್ರಸ್ನಾನ,
ರಾತ್ರಿ: ತಿರುಚ್ಚಿ ಉತ್ಸವ, ಧ್ವಜಾವರೋಹಣ.

# ಭಗವದ್ಗೀತೆ

ಏತಾನ್ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ
ಅಪಿ ತ್ರೈಲೋಕ್ಯ ರಾಜ್ಯಸ್ಯ ಹೇತೋಃ ಕಿಂ ನು ಮಹೀಕೃತೇ ॥

(ಶ್ರೀ ಮದ್ಭಗವದ್ಗೀತೆ - ಅಧ್ಯಾಯ 1, ಶ್ಲೋಕ -34)

ಕೃಷ್ಣ, ಅವರಿಂದ ನಾನು ಹೊಡೆಸಿಕೊಂಡರೂ ಸರಿ, ಮೂರು ಲೋಕಗಳೇ ದೊರೆಯುವುವೆಂದರೂ ಇವರನ್ನು ಹೊಡೆಯಲಾರೆ. ಇನ್ನು ಈ ನೆಲಕ್ಕಾಗಿ ಹೊಡೆದೇನೆ?

ಕಮಲಸಂಭವನಾಸಿಕಾಸಂಭವ ಕಾಯೊ
ನಮಿಸುವೆ ನಿನಗೆ ನಾನು

ಅಂದು ಧರಣಿ ಜಲ ಒಂದಾಗಿ ಕರಗಿರೇ
ನಂದನ ಚಿಂತಿಸೆ ಬಂದ ವರಾಹಮೂರ್ತಿ

ಮಧುಪಾನವನ ಸದದು ಅವನ ಚರ್ಮ
ಹೊದಿಸಿ ಹೆಪ್ಪುಗೊಟ್ಟು ಮೇದಿನೆಂದೆನಿಸಿದೆ

ಕನಕಲೋಚನ ಭೂಮಿಯನು ಕದ್ದು ಒಯ್ಯಲು
ಅನಿಮಿಷರೊಲಿಸೆ ಅವನ ಕೊಂದುದ್ಧರಿಸಿದೆ

ಕರುಣಾಕಟಾಕ್ಷದಿ ಹೊರೆವಲ್ಲಿ ನಾನೆಲ್ಲಿ
ಸರಿಗಾಣೆ ನಿನಗೆ ಅಂತರಬಹಿರದೊಳು


ರಜೋಭಿಮಾನಿಯ ಒಡೆಯಾ ಸುಜನಪಾಲಾ
ಭುಜಗಗಿರಿಯ ವಾಸಾ ವಿಜಯವಿಠಲಾಧೀಶಾ

- ಶ್ರೀ ವಿಜಯದಾಸರು



(ಏಳನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ನಿಷಾದಾನಾಂ ನೇತಾ ಕಪಿಕುಲಪತಿಃ ಕಾಪಿ ಶಬರೀ ಕುಚೇಲಃ ಕುಬ್ಜಾ ಸಾ ವ್ರಜಯುವತಯೋ ಮಾಲ್ಯಕೃದಿತಿ।**

**ಅಮೀಷಾಂ ನಿಮ್ನತ್ವಂ ವೃಷಗಿರಿಪತೇರುನ್ನತಿಮಪಿ ಪ್ರಭೂತೈಃ ಸ್ರೋತೋಭಿಃ ಪ್ರಸಭಮನುಕಂಪೇ ಸಮಯಸಿ ॥೬೫॥**

ಅಪರಾಧಿಗಳ ವಿಷಯದಲ್ಲಿ ದಯಾದೇವಿಯು ಮಾಡುವ ಅನುಕೂಲಗಳು ಇದುವರೆಗೆ ವರ್ಣಿಸಲ್ಪಟ್ಟವು.ಇನ್ನು ಎರಡು ಪದ್ಯಗಳಿಂದ ಅಂತಹ ಅಪರಾಧಿಗಳಲ್ಲದೆ ಭಗವದಾಶ್ರಿತರ ವಿಷಯದಲ್ಲಿನ ದಯಾದೇವಿಯ ಕಾರ್ಯವು ವರ್ಣಿಸಲ್ಪಡುವುದು. ಶ್ರೀರಾಮಾವತಾರದಲ್ಲಿಯೂ ಶ್ರೀ ಕೃಷ್ಣಾವತಾರದಲ್ಲಿಯೂ ಕೆಲವು ಉದಾಹರಣೆಗಳನ್ನು ತೋರಿಸಿ ಈ ಪದ್ಯದಲ್ಲಿ ಅದನ್ನು (ದಯಾಕಾರ್ಯವನ್ನು) ಪ್ರಕಾಶಪಡಿಸುತ್ತಾರೆ.

ಜಾತಿ, ಆಕಾರವೇ ಮೊದಲಾದವುಗಳಿಂದ ಅಲ್ಪರಾದವರ ವಿಷಯದಲ್ಲಿಯೂ ದಯಾದೇವಿಯು ತನ್ನ ಪರಿವಾರವಾದ ಸೌಶೀಲ್ಯವೆಂಬ ಭಗವಂತನ ಗುಣವನ್ನು ಬಳಸಿ ಅವಳು ನಡೆದುಕೊಳ್ಳುವ ರೀತಿಯು ಇಲ್ಲಿ ಬಹು ಸುಂದರವಾಗಿ ಚಿತ್ರಿಸಲ್ಪಡುವುದು. ಆದ್ದರಿಂದ ಆಶ್ರಿತರ ವಿಷಯದಲ್ಲಿ ದಯಾದೇವಿಯ ಅನುಗ್ರಹವನ್ನು ಇಲ್ಲಿಯವರೆಗೆ ಹೇಳಿ ಅವಳ ಪರಿವಾರವಾದ ಭಗವಂತನ ಇತರ ಗುಣಗಳೂ ವರ್ತಿಸುವ ರೀತಿಯನ್ನು ಇನ್ನು ಮುಂದೆ ತಿಳಿಸುವರೆಂದೂ ಸಂಗತಿಯನ್ನು ಹೇಳಬಹುದು.

ಗುಹ, ಸುಗ್ರೀವ, ಶಬರಿ, ಕುಚೇಲ, ತ್ರಿವಕ್ರೆ,ಗೋಪಯುವತಿಯರು, ಮಾಲಾಕಾರನೇ ಮೊದಲಾದ ಪರಮ ಭಾಗವತರ ವಿಷಯದಲ್ಲಿ ಭಗವಂತನು ಸರ್ವಸ್ವದಾನವೆಂಬ ತನ್ನ ಗಾಢಾಲಿಂಗನವನ್ನೂ ಕೊಟ್ಟು ಅವರೊಡನೆ ಕಲೆತು ವರ್ತಿಸಿದ ರೀತಿಯ ಶ್ರೀಮದ್ರಾಮಾಯಣ, ಭಾಗವತವೇ ಮೊದಲಾದ ಗ್ರಂಥಗಳಲ್ಲಿ ಆಯಾಯ ಪ್ರಕರಣಗಳನ್ನು ಅಧ್ಯಯನ ಮಾಡಿದರೆ ಚೆನ್ನಾಗಿ ತಿಳಿಯುತ್ತದೆ. ಅವರು ಜಾತ್ಯಾದಿಗಳಿಂದ ಅತ್ಯಲ್ಪರೇ ಆಗಿದ್ದರೂ ಕೂಡ ಭಗವಂತನ ವಿಷಯದಲ್ಲಿ ಅವರಿಗಿದ್ದ ಅರಿವು ಹೇಳಲಸಾಧ್ಯವಾದುದು. ಇದನ್ನು ಗಮನಿಸಿಯೇ ಭಗವಂತನೂ ಕೂಡ "ತಸ್ಯೈಷ ಆತ್ಮಾವಿವೃಣುತೇ ತನೂಂ ಸ್ವಾಮ್" ಎಂಬಂತೆಯೂ "ಸಂಶ್ಲಿಷ್ಯಸಿ ತ್ವಮಿಹ ತೇನ ಸಮಾನಧರ್ಮಾ ಎಂದು ಹಿರಿಯರು ಹೇಳಿರುವಂತೆಯೂ ಅವರೊಡನೆ ಸಮಾನವಾಗಿ ಕಲೆತಿರುವನು. ಈ ಗುಣವನ್ನೇ "ಮಹತೋ ಮಂದೈಸ್ಸಹ ನೀರಂಧ್ರೇಣ ಸಂಶ್ಲೇಷಃ ಎಂದರೆ - ಅತ್ಯಂತ ಶ್ರೇಷ್ಠನಾದವನು ಅತ್ಯಲ್ಪರಾದವರೊಡನೆ ಭೇದವಿಲ್ಲದಂತೆ ಕಲೆತಿರುವಿಕೆಯೆಂಬ "ಸೌಶೀಲ್ಯ" ವೆಂದು ಹಿರಿಯರು ಹೇಳುವರು. ಈ ಸೌಶೀಲ್ಯಗುಣವು ದಯಾದೇವಿಯ ಜೀವ ದಯೆಯಿಂದಲೇ ಅಲ್ಲವೆ ಭಗವಂತನು ಅವರಲ್ಲಿ ಈ ರೀತಿ ನಡೆದುಕೊಳ್ಳುವುದು.

ದೊಡ್ಡದಾದ ಒಂದು ಪ್ರವಾಹವು ಮೇಡು ಪ್ರದೇಶವನ್ನು ಕಿತ್ತು ಹಳ್ಳವನ್ನಾಗಿಯೂ , ಹಳ್ಳವನ್ನು ಮೇಡು ಪ್ರದೇಶವನ್ನಾಗಿಯೂ ಮಾಡುವುದನ್ನು ನಾವು ನೋಡುತ್ತೇವಲ್ಲವೆ ಹಾಗೆಯೇ ಆಶ್ರಿತರ ವಿಷಯದಲ್ಲಿ ಹಲವು ಮುಖಗಳಾಗಿ ಪ್ರವಹಿಸುವ ದಯಾಪ್ರವಾಹವು ಪರಮ ಪುರುಷನಾದ ಪ್ರಭುವಿನ ಶ್ರೇಷ್ಠತೆಯನ್ನು ತಗ್ಗಿಸಿಯೂ, ಅತ್ಯಲ್ಪರಾದವರ ಅಲ್ಪತೆಯನ್ನು ಮೇಲೆತ್ತಿಯೂ ಸಮಾನವಾಗಿ ಮಾಡುವುದು ಅತ್ಯಂತ ದೊಡ್ಡದಾದ ಪ್ರವಾಹಕ್ಕೆ ಮಾತ್ರವೇ ತಳ್ಳಿ ಎತ್ತಿ ಸಮಾನತೆಯನ್ನು ತರುವಂತಹ ವಿಶೇಷ ಗುಣವು ಇರುವುದರಿಂದ ಆಶ್ರಿತರ ವಿಷಯದಲ್ಲಿ ದಯೆಯು ಸೌಶೀಲ್ಯವೇ ಮೊದಲಾದ ಗುಣಗಳೆಂಬ ಅನೇಕವಿಧವಾದ ಪ್ರವಾಹಗಳನ್ನು ಪ್ರವಹಿಸುವಂತೆ ಮಾಡುವಳೆಂಬುದು ಇಲ್ಲಿನ ತಾತ್ಪರ್ಯ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀಪ್ಲವನಾಮ ಸಂವತ್ಸರ ಪುಷ್ಯ - ಮಾಘ ಮಾಸ ಸಂಚಿಕೆ

ಸಂಪುಟ - 01 ಫೆಬ್ರವರಿ 2022 ಸಂಚಿಕೆ -07



**ಗೌರವ ಸಂಪಾದಕರು**
ಡಾ || ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ||ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 6 |
| ಗರುಡ ಜಯಂತಿ | -ಡಾ|| ಗುರುರಾಜ ಪೋಶೆಟ್ಟಿಹಳ್ಳಿ | 7 |
| ತಿರುಚಾನೂರಿನ ಸರ್ವಸ್ವತಂತ್ರ ವೀರಲಕ್ಷ್ಮೀ | -ಶ್ರೀಮತಿ. ಎನ್. ಪಾರ್ವತಿ | 10 |
| ಸೂರ್ಯನ ಆರಾಧನೆಯ ರಥಸಪ್ತಮಿ | -ಗಿರಿಜಾ. ಎಸ್.ದೇಶಪಾಂಡೆ | 13 |
| ಸ್ನಾನಮತ್ತುದಾನಕ್ಕೂಪುಣ್ಯಮಾಸವೇ ಮಾಘಮಾಸ | -ಹನುಮಂತ.ಮ. ದೇಶಕುಲಕರ್ಣಿ | 15 |
| ಆಚಾರ್ಯ ಮಧ್ವರ ತತ್ವವಾದದ ಹಿರಿಮೆ | -ಪ್ರಣವ | 17 |
| ಉಪ್ಪಿಲಿಯಪ್ಪನ್ ಒಪ್ಪಿಲಾವೈಭವಂ | -ಡಾ|| ಸಿ.ಎಸ್.ಊರ್ಮಿಳಾ | 20 |
| ಹಲ್ಲೇಕೆರೆಯ ಕೇಶವ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀವೆಂಕಟೇಶ್ವರಸ್ವಾಮಿ ಆಲಯ | -ದಿ|| ಬಿ.ಎನ್.ಶ್ರೀನಿವಾಸನ್ | 23 |
| ಪದಬಂಧ | -ಪಿ. ಜೆ. ಶ್ರೀನಿವಾಸನ್ | 26 |
| ದೇವವ್ರತ | -ಡಾ|| ಎಸ್. ನಂಜುಂಡಸ್ವಾಮಿ | 31 |
| ವಿಜಯಪುರಿನಐತಿಹಾಸಿಕಪ್ರಸನ್ನೇಶ್ವರ ದೇವಾಲಯ | -ಶ್ರೀರಂಗ ಪುರಾಣಿಕ | 34 |
| ಮದನೂರಿನ ಮಾಣಿಕ್ಯ ಶ್ರೀವಿಷ್ಣುತೀರ್ಥರು | -ಡಾ|| ರಾಮಚಂದ್ರದಾಸ್ ಸಿ.ಜೆ. | 35 |
| ಎಂಥಾಬಲವಂತನೋಕುಂತಿಯ ಸಂಜಾತನೋ... | -ಶ್ರೀಮತಿ. ಪ್ರಿಯಪ್ರಾಣೇಶ ಹರಿದಾಸ | 38 |
| ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ | -ಡಾ|| ಸುಭಾಸ ಕಾಖಂಡಕಿ | 41 |
| ಆಯುರ್ವೇದಮತ್ತುನಾವು | - ಡಾ|| ಪ್ರದೀಪ್‌ಕುಮಾರ್ ಹೆಬ್ರಿ | 42 |
| ತಿರುಮಲೆ- ಕಾಲಮಾನಾಚರಣೆಗಳು | - ಶ್ರೀಮತಿ | 43 |
| ವಿದ್ಯಾಸರಸ್ವತಿಯವಂಸತ ಪಂಚಮಿ | - ಮೀರಾ. ಎಸ್. ಜೋಷಿ | 45 |
| ಸನಾತನಧರ್ಮದಲ್ಲಿಜ್ಯೋತಿಷ್ಯಶಾಸ್ತ್ರ | - ಆರ್. ಶ್ರೀನಿಧಿ | 46 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆ ರ್. ನರಸಿಂಹನ್ | 48 |
| ನೀತಿ ಕಥೆ - ನಾಳೀಜಂಘ | - ಡಾ|| ಎಸ್. ಆರ್. ಲೀಲಾ | 51 |
| ಚಿತ್ರಕಥೆ - ಕಲ್ಯಾಣ ವೇಕಂಟೇಶ್ವರ ಸ್ವಾಮಿ | - ಡಿ. ಶ್ರೀನಿವಾಸ ದೀಕ್ಷಿತರು | 52 |
| ಕ್ವಿಜ್ | | 54 |

ಮುಖಚಿತ್ರ - ಸೂರ್ಯಪ್ರಭವಾಹನದಲ್ಲಿ ಶ್ರೀಮಲೆಯಪ್ಪ ಸ್ವಾಮಿ, ತಿರುಮಲೆ
ಹಿಂಬದಿಚಿತ್ರ - ಶ್ರೀ ಕಲ್ಯಾಣವೆಂಕಟೇಶ್ವರಸ್ವಾಮಿ,ಶ್ರೀನಿವಾಸ ಮಂಗಾಪುರಂ

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.

| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ



# ರಥಸಪ್ತಮಿ

ಸೂರ್ಯ ಜಯಂತಿ ಅಥವಾ ಮಾಘ ಸಪ್ತಮಿಯನ್ನು ರಥ ಸಪ್ತಮಿ ಎಂಬ ಹೆಸರಿನಲ್ಲಿ ಆಚರಿಸುವುದು ವಾಡಿಕೆಯಲ್ಲಿದೆ. ಜೊತೆಗೆ ಸೂರ್ಯನನ್ನು ಆರೋಗ್ಯಕಾರಕನೆಂದು ಆರಾಧಿಸುವುದೂ ಜೊತೆಗೆ ಪ್ರತ್ಯಕ್ಷ ದೇವರೆಂದೂ ಹಿಂದೂ ಸಂಪ್ರದಾಯದ ನಂಬಿಕೆ.

ಸಾಮಾನ್ಯವಾಗಿ ಜ್ಯೋತಿಷ್ಯ ಶಾಸ್ತ್ರದಲ್ಲೂ ಕೂಡ ಯಾರಿಗಾದರೂ ಆರೋಗ್ಯದ ಸಮಸ್ಯೆ ಇದ್ದಲ್ಲಿ ಸೂರ್ಯಾರಾಧನೆ ಮಾಡುವ ಸಲಹೆ ನೀಡುತ್ತಾರೆ. ಸೂರ್ಯನನ್ನು ಭಕ್ತಿಯಿಂದ ಆರಾಧಿಸುವವರಿಗೆ ಆಧಿವ್ಯಾಧಿಗಳು, ಬಡತನ ನೋವು ಎಲ್ಲವೂ ಮಾಯವಾಗುತ್ತವೆ. ಕ್ರಮ ತಪ್ಪದೇ ಸೂರ್ಯನನ್ನು ಆರಾಧಿಸುವವರಿಗೆ ತೊಂದರೆಗಳು ದೂರವಾಗಿ ಅವರ ಕೋರಿಕೆಗಳೆಲ್ಲಾ ನೆರವೇರುತ್ತವೆ.

ಸೂರ್ಯನು ತನ್ನ ಸಪ್ತಾಶ್ವಗಳಾದ ಗಾಯತ್ರಿ,ತ್ರಿಷ್ಟವ,ಅನುಷ್ಟಾ,ಜಗತಿ,ಪಂಕ್ತಿ,ಬೃಹತಿ ಹಾಗೂ ಉಷ್ಣೀಕಗಳ ಮೇಲೆ, ಅರುಣನನ್ನು ಸಾರಥಿಯನ್ನಾಗಿಸಿಕೊಂಡು ಲೋಕಗಳನ್ನೆಲ್ಲಾ ಬೆಳಗಲು ಹೊರಡುತ್ತಾನೆ. ಹಾಗೆಯೇ ಸ್ವರ್ಗ-ಲೋಕದಲ್ಲಿನ ದೇವಗಣಗಳೆಲ್ಲಾ ಸೂರ್ಯನ ಹಿಂದೆಯೇ ಇರುತ್ತವೆ. ಒಂದೊಂದು ಮಾಸದಲ್ಲಿ ಒಂದೊಂದು ದೇವಗಣಗಳು ಸೂರ್ಯನೊಂದಿಗಿದ್ದು,ಪ್ರಪಂಚಕ್ಕೆಲ್ಲಾ ಬೆಳಕನ್ನು ಹರಡುತ್ತಾ ಸಾಗುತ್ತಿರುತ್ತವೆ. ಸೂರ್ಯನು ಕಶ್ಯಪ-ಅದಿತಿಯರಲ್ಲಿ ಜನಿಸಿದ ಹನ್ನೆರಡು ಜನ ಆದಿತ್ಯರಲ್ಲಿ ಮೊದಲಿಗನೆಂದು ಕರೆಯಲ್ಪಡುತ್ತಾನೆ. ಈ ಮೊಟ್ಟಮೊದಲು ಆದಿತ್ಯನ ಹೆಸರು ವಿವಸನ,ಈತನನ್ನೇ ನಾವು ಸೂರ್ಯಭಗವಾನ್, ಸೂರ್ಯನಾರಾಯಣ ಎಂದು ಪ್ರತಿದಿನವೂ ಪೂಜಿಸುತ್ತೇವೆ.

ಅವರೆಲ್ಲಾ ರಥಸಪ್ತಮಿಯಂದು ಪ್ರತೀಮನೆಯ ಮುಂದೆ ರಥದ ಮೇಲೆ ಸೂರ್ಯನಿರುವಂತೆ ರಂಗೋಲಿಯನ್ನು ಬಿಡಿಸಿ, ಸೂರ್ಯಾರಾಧನೆ ಮಾಡುವುದು ಬಹುಮುಖ್ಯವಾದ ಸಂಪ್ರದಾಯವಾಗಿದೆ. ತಿರುಮಲೆಯಲ್ಲೂ ಕೂಡ ಅಂದು ಶ್ರೀಮಲೆಯಪ್ಪಸ್ವಾಮಿಯನ್ನು ಸೂರ್ಯಪ್ರಭವಾಹನದಲ್ಲಿ ಮೆರವಣಿಗೆ ಮಾಡುತ್ತಾರೆ. ಅಂದು ಬೆಳಗ್ಗೆ ಸೂರ್ಯನ ಕಿರಣಭಗವಂತನ ಪಾದಗಳನ್ನು ಸೋಕಿದ ನಂತರವೇ ಮೆರವಣಿಗೆ ಯನ್ನು ಮುಂದುವರೆಸುತ್ತಾರೆ. ರಥಸಪ್ತಮಿಯಂದು ಸ್ನಾನಕ್ಕೆ ವಿಶೇಷ ಸ್ಥಾನವಿದೆ. ಸೂರ್ಯನ ವೃಕ್ಷವೆಂದೇ ಪ್ರಸಿದ್ಧವಾದ ಎಕ್ಕದ ಎಲೆಗಳನ್ನು ತಲೆಯ ಮತ್ತು ಭುಜಗಳ ಮೇಲಿಟ್ಟುಕೊಂಡು ಸ್ನಾನ ಮಾಡಬೇಕು.

"ಸಪ್ತ ಸಪ್ತ ಮಹಾಸಪ್ತ ಸಪ್ತ ದ್ವಿಪಾ ವಸುಂಧರಾ
ಸಪ್ತಾರ್ಕ ವರ್ಣ ಮಾದಾಯ ಸಪ್ತಮೀ ರಥಸ್ತಮೀ"

ಎಂದು ಹೇಳುತ್ತಾ ಸ್ನಾನವಾಚರಿಸಬೇಕು. ಸೂರ್ಯನಿಗೆ ಅರ್ಘ್ಯ ನೀಡಿದರೆ ಕೋಟಿ ಯಜ್ಞಫಲ ಸಿಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಪ್ರಪಂಚದೆಲ್ಲೆಡೆ ತಾಂಡವವಾಡುತ್ತಿರುವ ಎಲ್ಲಾ ರೀತಿಯ ಅನಾರೋಗ್ಯಗಳಿಂದ ನಮ್ಮನ್ನೆಲ್ಲಾ ಕಾಪಾಡಿ, ಎಲ್ಲರಿಗೂ ಆರೋಗ್ಯವನ್ನು ಪ್ರಸಾದಿಸಲಿ ಎಂದು ಸೂರ್ಯನಾರಾಯಣನನ್ನು ಬೇಡಿಕೊಳ್ಳುತ್ತಾ ಈ ಬಾರಿಯ ರಥಸಪ್ತಮಿಯನ್ನು ಆಚರಿಸಿ ಸೂರ್ಯಭಗವಾನನಿಗೆ ಶರಣು ಹೋಗೋಣ.

**ಗೋವಿಂದ! ಗೋವಿಂದ! ಗೋವಿಂದ!!!**

# ಗರುಡ ಜಯಂತಿ



– ಡಾ|| ಗುರುರಾಜಪ್ರೋಶೆಟ್ಟಿ ಹಳ್ಳಿ

90356 18076

ಗರುಡನ ಮಹಿಮೆ ಅಚಿಂತ್ಯ. ಗರುಡವಾಹನನಾದ ಶ್ರೀಹರಿಯ ಮಹಿಮೆ ಅನಂತ. ಇಂಥ ಗರುಡದೇವರು ಗುರುಹಿರಿಯರ, ತಂದೆ-ತಾಯಿಯರ ಕರುಣೆಗೆ ಪಾತ್ರರಾದರು.ತನ್ಮೂಲಕ ಸ್ವರ್ಗಲೋಕಕ್ಕೆ ತೆರಳಿ ಅಮೃತವನ್ನೂ ಕೂಡ ಪಡೆದರು. ಇವರ ಮಾರ್ಗದರ್ಶನದಂತೆ ಗುರು- ಹಿರಿಯರ, ತಂದೆ - ತಾಯಿಯರ ಕರುಣೆಗೆ ಪಾತ್ರರಾಗುವುದೇ ಜೀವನದ ಮುಖ್ಯ ಉದ್ದೇಶ ಎಂಬ ನೀತಿಯನ್ನು ತಿಳಿಯಬೇಕು.

ಭೂಮಿಗೆ ಭಾರರಾದ ಹತ್ತಾರು ಮಕ್ಕಳನ್ನು ಪಡೆಯುವುದಕ್ಕಿಂತ ಗರುಡನಂಥ ಒಬ್ಬ ಸಾತ್ವಿಕ ಮಗನನ್ನು ಪಡೆಯುವುದೇ ಸಾರ್ಥಕ ಎಂಬ ನೀತಿಯನ್ನು ಗರುಡನ ಚರಿತ್ರೆಯಿಂದ ಮಹಾಭಾರತವು ತಿಳಿಸಿದೆ.

ಗರುಡನು ವಿನತೆಯ ಮಗ, ವಿನತೆಯ ಕದ್ರುವಿನ ದಾಸಿಯಾದ ಮೇಲೆ ತಾಯಿಯು ಇಲ್ಲದ ಸಂದರ್ಭದಲ್ಲಿ ಮಹಾತೇಜಸ್ವಿಯಾದ ಗರುಡನು ಮೊಟ್ಟೆಯನ್ನು ಒಡೆದುಕೊಂಡು ಹೊರಗೆ ಬಂದನು. ಒಂದು ಸಾವಿರ ವರ್ಷಗಳ ಕಾಲ ಮೊಟ್ಟೆಯ ಒಳಗಿದ್ದುಕೊಂಡು ದಿವ್ಯವಾದ ಶರೀರವನ್ನು ಪಡೆದ ಇವನ ಪರಾಕ್ರಮ, ಇವನ ತೇಜಸ್ಸು ಮೂರು ಲೋಕಗಳನ್ನೇ ಗೆಲ್ಲುವಂತಿತ್ತು ಹುಟ್ಟಿದ ಕೂಡಲೇ ಅತ್ಯಂತ ದೊಡ್ಡದಾದ ದೇಹವನ್ನು ಧರಿಸಿ ಪಕ್ಷಿಯಾಗಿ ಆಕಾಶಕ್ಕೆ ಹಾರುತ್ತಾನೆ. ಅಗ್ನಿಯ ರಾಶಿಯೇ ಆಕಾಶದಲ್ಲಿ ಹಾರುವಂತೆ ಎಲ್ಲಾ ಪ್ರಜೆಗಳಿಗೆ ಕಾಣಿಸುತ್ತದೆ. ಕುಪಿತನಾದ ಅಗ್ನಿಯು ಸಮಸ್ತ ಲೋಕವನ್ನೇ ಸುಡಲು ಹೀಗೆ ಮಾಡುತ್ತಿ ದ್ದಾನೆಂದು ಎಲ್ಲರೂ ಭ್ರಾಂತರಾಗುತ್ತಾರೆ. ಕೂಡಲೇ ಅಗ್ನಿಯನ್ನು ಕುರಿತು ಶರಣಾಗತರಾಗಿ ನೀನು ಹೀಗೆ ಅಭಿ ವೃದ್ಧಿಯನ್ನು ಹೊಂದಬಾರದು. ನಮ್ಮನ್ನೆಲ್ಲಾ ದಹಿಸಬಾರದು ಎಂದು ಎಲ್ಲರೂ ಪ್ರಾರ್ಥನೆ ಮಾಡುತ್ತಾರೆ.

ಅಗ್ನಿಯು ನಗುತ್ತಾ ಉತ್ತರಿಸುತ್ತಾನೆ.ಆಕಾಶ ಮಾರ್ಗದಲ್ಲಿ ಅಂತಹ ಕಾಂತಿಯಿಂದ ಹಾರುತ್ತಿರುವವನು ನಾನಲ್ಲ. ನನಗಿಂತ ಉತ್ತಮವಾದ ಗರುಡನು ಇವನು. ಕಶ್ಯಪರ ಮಗನಾಗಿ ಇವನು ಜನಿಸಿದ್ದಾನೆ. ದೇವತೆಗಳಿಗೆ ಅತ್ಯಂತ ಹಿತ ವನ್ನೇ ಉಂಟುಮಾಡುವ ಇವನು ದೈತ್ಯರನ್ನು ರಾಕ್ಷಸರನ್ನು ಸದೆಬಡಿಯುತ್ತಾನೆ. ಎಲ್ಲಾ ಸರ್ಪಗಳನ್ನೂ ನಾಶ ಮಾಡುತ್ತಾನೆ. ಇವನ ಪರಾಕ್ರಮಕ್ಕೆ ಸರಿ ಸಾಟಿಯಾದ ಮತ್ತೊಬ್ಬ ವ್ಯಕ್ತಿ ಲೋಕದಲ್ಲೇ ಇರುವುದಿಲ್ಲ. ಅವನನ್ನೇ ಕುರಿತು ನಾವೆಲ್ಲರೂ ಪ್ರಾರ್ಥನೆ ಮಾಡೋಣ ಎಂದು ಅಗ್ನಿಯು ಹೇಳುತ್ತಾನೆ.

ದೇವತೆಗಳು, ಸಮಸ್ತ ಋಷಿಗಳು, ಪ್ರಜೆಗಳು ಎಲ್ಲರೂ ಗರುಡನ ಸಮೀಪಕ್ಕೆ ಹೋಗಿ ವಿಧವಿಧವಾಗಿ ಗರುಡನನ್ನು ಸ್ತುತಿಸುತ್ತಾರೆ. ದೇವತೆಗಳ ಪ್ರಾರ್ಥನೆಯನ್ನು ಕೇಳಿ ಸಂತೋಷವನ್ನು ಹೊಂದಿದ ಗರುಡನು ತನ್ನ ದೇಹವನ್ನು ತಾನೇ ನೋಡಿಕೊಳ್ಳುತ್ತಾನೆ. ಎಲ್ಲರಿಗೂ ಇದರಿಂದ ಭಯವಾಗುತ್ತದೆ ಎಂದು ತಿಳಿದು ಸಂಕೋಚ ಮಾಡಿಕೊಳ್ಳುತ್ತಾನೆ. ತನ್ನ ಪ್ರಖರವಾದ ತೇಜಸ್ಸನ್ನು ಉಪ ಸಂಹಾರ ಮಾಡುತ್ತಾರೆ.

ಮಹಾಪರಾಕ್ರಮಿಯಾದ ಗರುಡನು ಅಂತರಿಕ್ಷಕ್ಕೆ ಹಾರಿ ತಮ್ಮನಾದ ಅರುಣನನ್ನು ಸಂದರ್ಶಿಸಿದನು. ಅವನನ್ನು ತನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ತನ್ನ ತಂದೆಯಾದ ಕಶ್ಯಪರನ್ನು ಭೇಟಿಮಾಡಿ ನಮಸ್ಕರಿಸಿದನು. ಅಲ್ಲಿಂದ ಸಮುದ್ರದ ಮತ್ತೊಂದು ತೀರದಲ್ಲಿ ಕದ್ರುವಿನ ದಾಸಿಯಾಗಿ ನೆಲೆಸಿರುವ ತನ್ನ

ತಾಯಿಯಾದ ವಿನತೆಯನ್ನು ಸಂಪರ್ಕಿಸಿ ನಮಸ್ಕರಿಸಿದನು.ಪುತ್ರನಾದ ಗರುಡನ ಆಗಮನವನ್ನು ನೋಡಿ ತಾಯಿಯಾದ ವಿನತೆಯು ಆನಂದಬಾಷ್ಪವನ್ನು ಸುರಿಸಿದಳು.

ಒಮ್ಮೆ ಗರುಡನು ತಾಯಿಯಾದ ವಿನತೆಯ ಜೊತೆಯಲ್ಲಿ ಇರಬೇಕಾದರೆ ಕದ್ರುವು ವಿನತೆಯನ್ನು ಕರೆದು ಹೀಗೆ ಹೇಳುತ್ತಾಳೆ.

ಎಲೈ ಭದ್ರಯೇ ! ಸಮುದ್ರದ ಮಧ್ಯಪ್ರದೇಶದಲ್ಲಿ ಒಂದು ನಾಗಾಲಯವಿದೆ. ಅದು ಅತ್ಯಂತ ರಮಣೀಯವಾಗಿದೆ. ನನ್ನನ್ನು ಮಕ್ಕಳ ಸಹಿತವಾಗಿ ಅಲ್ಲಿಗೆ ಕರೆದುಕೊಂಡು ಹೋಗು.

ಅವಳ ಮಾತಿನಂತೆ ವಿನತೆಯು ಕದ್ರುವನ್ನು ಎತ್ತಿಕೊಂಡು ಹೊರಟಳು. ತಾಯಿಯ ಮಾತಿನಂತೆ ಗರುಡನು ಕದ್ರುವಿನ ಮಕ್ಕಳಾದ ಎಲ್ಲಾ ಸರ್ಪಗಳನ್ನು ತನ್ನ ಮೇಲೆ ಕುಳ್ಳಿರಿಸಿಕೊಂಡು ಹೊರಟನು. ಹಾರುವಾಗ ಅತ್ಯಂತ ಎತ್ತರದಲ್ಲಿ ಸೂರ್ಯನಿಗೆ ಅಭಿಮುಖವಾಗಿ ಗರುಡನು ಹೋಗುತ್ತಿದ್ದನು.ಸೂರ್ಯನ ಪ್ರತಾಪವನ್ನು ತಾಳಲಾರದೇ ಎಲ್ಲಾ ಸರ್ಪಗಳು ಮೂರ್ಛಿತವಾಗುತ್ತವೆ. ಕದ್ರುವಿಗೆ ತನ್ನ ಮಕ್ಕಳ ಪರಿಸ್ಥಿತಿಯನ್ನು ನೋಡಿ ಬಹಳ ಕನಿಕರವುಂಟಾಗುತ್ತದೆ.

ಇಂದ್ರನನ್ನು ಕುರಿತು ಕದ್ರುದೇವಿಯು ಸ್ತೋತ್ರ ಮಾಡುತ್ತಾಳೆ. ನನ್ನ ಮಕ್ಕಳೆಲ್ಲರೂ ಸೂರ್ಯನ ತಾಪಕ್ಕೆ ಒಳಗಾಗಿ ಭಸ್ಮವಾಗುತ್ತಿದ್ದಾರೆ. ನೀನು ತಂಪಾದ ನೀರನ್ನು ಸುರಿಸಿ ಅವರನ್ನು ಕಷ್ಟದಿಂದ ಪಾರುಮಾಡು.

ಕದ್ರುವಿನ ಪ್ರಾರ್ಥನೆಯಂತೆ ದೇವೇಂದ್ರನು ಮಳೆಯನ್ನು ಸುರಿಸುತ್ತಾನೆ. ಮುಹೂರ್ತ ಕಾಲದ ತನಕ ಮಿಂಚಿನಿಂದ ಕೂಡಿದ ಧಾರಾಕಾರವಾದ ಮಳೆ ಸುರಿದಾಗ ಎಲ್ಲಾ ಸರ್ಪಗಳು ಸಂತೋಷವನ್ನು ಹೊಂದುತ್ತವೆ.

ಗರುಡನ ಮೇಲೆ ಕುಳಿತ ಎಲ್ಲಾ ಸರ್ಪಗಳು ಸಾಗರದ ಮಧ್ಯದಲ್ಲಿರುವ ಆ ನಾಗಲೋಕವನ್ನು ತಲುಪುತ್ತದೆ. ಅತ್ಯಂತ ಸುಂದರವಾಗಿ ಫಲಪುಷ್ಪಗಳಿಂದ ಆ ಪ್ರದೇಶವು ಕಂಗೊಳಿಸುತ್ತಿದೆ. ಬಹಳಷ್ಟು ಸಮಯ ಅಲ್ಲಿಯೇ ಎಲ್ಲಾ ಸರ್ಪಗಳು ವಿಹರಿಸಿ, ಪುನಃ ಗರುಡನನ್ನು ಕುರಿತು ಹೀಗೆ ಆಜ್ಞೆ ಮಾಡುತ್ತವೆ.

ಗರುಡನೇ ! ನಾವು ಇಲ್ಲಿ ವಿಹಾರ ಮಾಡಿದ್ದು ಮುಗಿಯಿತು. ಮತ್ತೊಂದು ದ್ವೀಪಕ್ಕೆ ನಮ್ಮನ್ನು ನೀನು ಎತ್ತಿಕೊಂಡು ಹೋಗು. ಕ್ಷುಲ್ಲಕವಾದ ಸರ್ಪಗಳು ಶ್ರೇಷ್ಠನಾದ ಗರುಡನಿಗೆ ಆಜ್ಞೆಯನ್ನು ಮಾಡಿದಾಗ ಗರುಡನು ಚಿಂತಾಕ್ರಾಂತನಾಗುತ್ತಾನೆ.

ಅಮ್ಮಾ! ಕದ್ರುವಿನ ಮಕ್ಕಳಾದ ಸರ್ಪಗಳು ನನ್ನನ್ನು ಕುರಿತು ಏಕೆ ಆಜ್ಞೆ ಮಾಡುತ್ತಿವೆ? ಅವುಗಳು ಹೇಳಿದಂತೆ ನಾನೇಕೆ ಕೇಳಬೇಕು? ಎಂದು ಕೇಳುತ್ತಾನೆ. ಆಗ ತಾಯಿ ಮಗುವೇ! ನಾನು ಒಮ್ಮೆ ಪಣವನ್ನು ಒಡ್ಡಿ ಕದ್ರು ಮಾಡಿದ ವಂಚನೆಯಿಂದ ಅವಳ ದಾಸಿಯಾಗಿದ್ದೇನೆ. ನಾನು ಅವಳ ದಾಸಿಯಾಗಿರುವುದರಿಂದ ನೀನೂ ಕೂಡ ಇಂದು ದಾಸನಾಗಿರುವೆ ಎಂದು ಹೇಳಿದಳು. ತಾಯಿಯ ಮಾತುಗಳನ್ನು ಕೇಳಿದ ಗರುಡನು ದುಃಖಿತನಾಗಿ ಸರ್ಪಗಳ ಬಳಿ ತೆರಳಿ ಮಾತನಾಡುತ್ತಾನೆ.

ನನ್ನ ತಾಯಿಯು ದಾಸ್ಯತ್ವದಿಂದ ವಿಮುಕ್ತಳಾಗಬೇಕೆಂದರೆ ನಿಮಗೆ ಯಾವ ಕೆಲಸವನ್ನು ನಾನು ಮಾಡಿಕೊಡಬೇಕು ಸತ್ಯವನ್ನು ಹೇಳಿರಿ. ಗರುಡನ



ಮಾತನ್ನು ಕೇಳಿ ಅತ್ಯಂತ ಹರ್ಷದಿಂದ ಎಲ್ಲಾ ಸರ್ಪಗಳು ಏಕಕಂಠದಿಂದ ಹೇಳುತ್ತವೆ - "ಅಮೃತವನ್ನು ತೆಗೆದುಕೊಂಡು ಬಾ.ಆಗ ನಿನ್ನ ತಾಯಿಗೆ ದಾಸ್ಯ ದಿಂದ ವಿಮೋಚನೆಯಾಗುತ್ತದೆ".

ಸರ್ಪಗಳ ಮಾತುಗಳನ್ನು ಕೇಳಿ ಕ್ಷಣಮಾತ್ರದಲ್ಲಿ ಗರುಡನು ಅಮೃತವನ್ನು ತರಲು ಹೊರಟೇ ಬಿಟ್ಟನು. ಮೊದಲು ತಾಯಿಗೆ ನಮಸ್ಕರಿಸಿ ಅಮ್ಮಾ ! ಅಮೃತವನ್ನು ತರಲು ಹೋಗುತ್ತಿದ್ದೇನೆ. ನನಗೆ ಬಹಳ ಹಸಿವಾಗುತ್ತಿದೆ, ಏನನ್ನಾದರೂ ತಿನ್ನಲು ಕೊಡು.

ಮಗುವೇ! ನಿನಗೆ ಹೊಟ್ಟೆ ತುಂಬಿಸಲು ಯಾರಿಗೂ ಸಾಧ್ಯವಿಲ್ಲ. ಅದಕ್ಕಾಗಿ ಸಮುದ್ರದ ಮಧ್ಯದಲ್ಲಿ ಒಂದು ನಿಷಾದರ ಪ್ರದೇಶವಿದೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಅಲ್ಲಿ ನಿಷಾದರು ವಾಸ ಮಾಡಿಕೊಂಡು ಇದ್ದಾರೆ. ಅವರನ್ನೆಲ್ಲಾ ಸಂಪೂರ್ಣವಾಗಿ ತಿಂದು ನೀನು ಬಲಶಾಲಿಯಾಗು. ಆದರೆ ಎಲ್ಲರನ್ನು ತಿನ್ನುವಾಗ ಬ್ರಾಹ್ಮಣರನ್ನು ಮಾತ್ರ ಸರ್ವಥಾ ತಿನ್ನಬೇಡ. ಅವನು ಅಗ್ನಿಗೆ ಸಮಾನನಾಗಿರುತ್ತಾನೆ. ಒಂದು ವೇಳೆ ಬ್ರಾಹ್ಮಣನನ್ನು ನೀನು ತಿಂದರೆ ಅವನು ವಿಷವಾಗುತ್ತಾನೆ. ಎಲ್ಲಾ ವರ್ಣಗಳಲ್ಲಿಯೂ ಶ್ರೇಷ್ಠನಾದವನು ಬ್ರಾಹ್ಮಣನೇ ಆಗಿರುವ ಕಾರಣ, ಎಲ್ಲರಿಗೂ ಗುರುಸ್ಥಾನದಲ್ಲಿರುತ್ತಾನೆ. ಆದ್ದರಿಂದ ಬ್ರಾಹ್ಮಣರನ್ನು ಮಾತ್ರ ನೀನು ಕೊಲ್ಲಲೇಬಾರದು.

ತಾಯಿಯೇ! ಬ್ರಾಹ್ಮಣನ ಲಕ್ಷಣಗಳೇನು? ಅವನು ಹೇಗಿರುತ್ತಾನೆ? ಅವನನ್ನು ನಾನು ಹೇಗೆ ಗುರುತಿಸಲಿ?

ಮಗನೇ! ಯಾರನ್ನು ನೀನು ತಿನ್ನುವಾಗ ನಿನ್ನ ಕಂಠದೇಶವು ಅಗ್ನಿಯಂತೆ ಸುಡುತ್ತದೋ, ಅವನನ್ನೇ ಬ್ರಾಹ್ಮಣಶ್ರೇಷ್ಠನೆಂದು ತಿಳಿ. ಮಗನ ಅಪಾರ ಪರಾಕ್ರಮವನ್ನು ತಿಳಿದಿದ್ದರೂ ಕೂಡ ತಾಯಿಯಾದ ವಿನತೆಯು ಆಶೀರ್ವಾದ ಮಾಡಿ ಮಂಗಳದ ಮಾತುಗಳನ್ನು ಹೇಳಿ ಕಳುಹಿಸಿ ಕೊಡುತ್ತಾಳೆ.

ಪಕ್ಷೌ ತೇ ಪಾತು ಭಗವಾನ್ ಚಂದ್ರಃ ಪೃಷ್ಠಂತು ಪುತ್ರಕ
ಶಿರಸ್ತು ಪಾತು ತೇ ವಹ್ನಿರ್ಮಾರುತಃ ಪ್ರಾಣಮೇವ ಚ॥

ಭಗವಂತನಾದ ನಾರಾಯಣನು ನಿನ್ನ ಪಕ್ಷಗಳನ್ನು ರಕ್ಷಿಸಲಿ. ಪ್ರೀತಿ ಪಾತ್ರನಾದ ಪುತ್ರನೇ, ಚಂದ್ರನು ನಿನ್ನ ಪೃಷ್ಠವನ್ನು ರಕ್ಷಿಸಲಿ, ವಹ್ನಿಯು ನಿನ್ನ ಶಿರಸ್ಸನ್ನು ರಕ್ಷಿಸಲಿ. ಮಾರುತನು ನಿನ್ನ ಪ್ರಾಣವನ್ನು ರಕ್ಷಿಸಲಿ.

ಅಹಂ ಚ ತೇ ಸದಾ ಪುತ್ರ ಶಾಂತಿಸ್ವಸ್ತಿಪರಾಯಣಾ।
ಇಹಾಸೀನಾ ಭವಿಷ್ಯಾಮಿ ಸ್ವಸ್ತಿಕಾರೇ ರತಾ ಸದಾ।
ಅರಿಷ್ಟಂ ವ್ರಜ ಪಂಥಾನಂ ವತ್ಸ ಕಾರ್ಯಾರ್ಥಸಿದ್ಧಯೇ॥

ಎಲೈ ಪುತ್ರನೇ ನಾನು ಯಾವಾಗಲೂ ನಿನ್ನ ಶಾಂತಿ ಮತ್ತು ಕ್ಷೇಮ ವನ್ನು ಆಶಂಸಿಸುತ್ತಾ ಇಲ್ಲಿಯೇ ಸ್ವಸ್ತಿಕಾಸನದಲ್ಲಿ ಕುಳಿತುಕೊಳ್ಳುತ್ತೇನೆ. ವತ್ಸನೇ, ನಿರ್ವಿಘ್ನವಾಗಿ ಹೋಗಿ ಬಾ. ನಿನ್ನ ಕಾರ್ಯವು ಸಿದ್ಧಿಸಲಿ.

'ಗ' ಎಂದರೆ ಗತಿ. ಗತಿ ಪದಕ್ಕೆ ಗಮನ, ಸಂಚಾರ, ಉಪಾಯ, ಯುಕ್ತಿ ಎಂಬೆಲ್ಲ ಅರ್ಥಗಳುಂಟು. ಗರುಡ ಗಗನದಲ್ಲಿ ಸುಮಾರು 200 ಮೀಟರಿಗಿಂತಲೂ ಹೆಚ್ಚು ಎತ್ತರದಲ್ಲಿ ಹಾರುತ್ತ ಮಿಂಚಿನ ವೇಗದಲ್ಲಿ ತಾನು ಗುರಿಯಾಗಿಸಿಕೊಂಡ ಭೂಮಿಯ ಮೇಲಿರುವ ವಸ್ತುವನ್ನು ತೀಕ್ಷ್ಣದೃಷ್ಟಿ ಯಿಂದ ಗ್ರಹಿಸಬಲ್ಲ, ಗ್ರಹಿಸಿ ಹಿಡಿಯ ಬಲ್ಲ ಸಾಮರ್ಥ್ಯ ಸಾಧನೆಗೆ ಗರುಡ ನಿಗೆ ಗರುಡನೇ ಸಾಟಿ. ಆತ ಛಲದಂಕ ಮಲ್ಲ ಹಿಡಿದಿರುವ ಕಾರ್ಯವನ್ನು ಸಾಧಿಸದೇ ಬಿಡಲಾರದ ಹಟವಾದಿ, ಇದಕ್ಕೆ ಪೌರಾಣಿಕ ಕಥೆಯೇ ಸಾಕ್ಷಿ.

ಕದ್ರು ಹಾಗೂ ವಿನತೆ ಅಕ್ಕತಂಗಿಯರು. ಕಶ್ಯಪ ಋಷಿಯ ಪತ್ನಿ ಯರು. ಕದ್ರು ನಾಗಗಳ ಮಾತೆ. ಗರುಡ ಹಾಗೂ ಅರುಣ ವಿನತೆಯ ಮಕ್ಕಳು. ಕದ್ರುವಿಗೆ ಸಹೋದರಿಯ ಮಾತ್ಸರ್ಯ. ಅಕ್ಕತಂಗಿಯರ ಮಧ್ಯೆ ಏರ್ಪಟ್ಟ ಪಣವೊಂದರಲ್ಲಿ ಅಕ್ಕನ ಮೋಸದಿಂದ ಸೋತ ವಿನತೆ ಆಕೆಗೆ ದಾಸಿಯಾಗುತ್ತಾಳೆ. ಗರುಡ ಅದನ್ನು ಸಹಿಸದೇ ತಾಯಿಯ ದಾಸ್ಯ ಕಳೆಯುವುದಕ್ಕಾಗಿ ಆಕೆಯ ಸ್ವಾತಂತ್ರ್ಯ ರಕ್ಷಿಸುವುದಕ್ಕಾಗಿ ಮಲತಾಯಿಯ ಆಸೆಯಂತೆ ದಾಯಾದಿ ನಾಗಗಳಿಗೆ ಎಲ್ಲಾ ಅಡೆ ತಡೆಗಳನ್ನು ಎದುರಿಸಿ ಛಲದಿಂದ ಕಾರ್ಯಸಿದ್ಧಿ ಅತ್ಯಂತ ದುರ್ಲಭವಾದ ಅಮೃತವನ್ನು ದೇವಲೋಕದಿಂದ ತಂದ ಮಹಾಪ್ರತಾಪಿ. ಆಗ ಆತನ ಗುರಿ ಒಂದೇ ಆಗಿತ್ತು ತಾಯಿಯ ದಾಸ್ಯತ್ವ ಕೊನೆಗಾಣಿಸಬೇಕೆಂಬುದು. ದೇವೇಂದ್ರ ಅಡ್ಡ ಬಂದರೂ, ಆತನ ವಜ್ರಾಯುಧ ಕೂಡ ಗರುಡನನ್ನು ಬಾಧಿಸಲಿಲ್ಲ. ವಜ್ರಾಯುಧ ದಧೀಚಿ ಮಹರ್ಷಿಗಳ ಬೆನ್ನೆಲುಬಿನಿಂದಾದುದೆಂದು ಗೌರವ ಸೂಚಿಸಲು ತನ್ನ ಒಂದು ರೆಕ್ಕೆ ಬೀಳಿಸಿದ ವಿನೀತನೀತ ಈ ವೈನತೇಯ. ಆತನ ಶಕ್ತಿ ಧೈರ್ಯಗಳನ್ನು ಕಂಡು ಬೆರಗಾದ ಇಂದ್ರ ತನ್ನ ಸ್ನೇಹಿತನನ್ನಾಗಿ ಮಾಡಿಕೊಂಡನು.ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಲು ಉಪಾಯವೊಂದನ್ನು ಹೇಳಿಕೊಟ್ಟನು. ಇಂದ್ರನ ಮಾತಿನಂತೆ ನಡೆದು ದಾಯಾದಿಗಳೊಡನೆ ಕಲಹವಿಲ್ಲದೇ ಸುರಲೋಕ ವನ್ನೇ ಜಯಿಸಿ ಅಮೃತ ತಂದು ತಾಯಿಯ ದಾಸ್ಯ ಬಿಡಿಸಿದ ಮಾತೃಭಕ್ತ.

'ನಃ ಮಾತು ಪರದೈವತಮ್' ಎಂಬ ನಮ್ಮ ಸಂಸ್ಕೃತಿಯ ಮೂಲಾ ಧಾರವಾದ ಮಾತೃಭಕ್ತಿಯ ಪ್ರತೀಕ ಗರುಡ. ಅಮೃತ ಕುಂಭವೇ ಆತನ ಕೈಯಲ್ಲಿದ್ದರೂ ಅದನ್ನು ಸೇವಿಸಿದ ನಿಷ್ಠಾವಂತ, ಪ್ರಾಮಾಣಿಕ ವ್ಯಕ್ತಿ. ಅದಕ್ಕೆ ಆಸೆ ಪಡಲಿಲ್ಲ.ಆತನ ನಿಷ್ಠೆಯನ್ನು ಮೆಚ್ಚಿ ಮಹಾವಿಷ್ಣು ತನ್ನ ವಾಹನವನ್ನಾಗಿ ಮಾಡಿಕೊಂಡ.

ಭಗವದ್ಗೀತೆಯ ಹತ್ತನೆಯ ಅಧ್ಯಾಯದ 30 ನೇ ಶ್ಲೋಕದಲ್ಲಿ "ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಮ್। ಮೃಗಾಣಾಂ ಚ ಮೃಗೇಂದ್ರೋಹಂ ವೈನತೇಯಶ್ಚ ಪಕ್ಷಿಣಾಮ್" ಎಂದು ಸಾರಿ ಹೇಳಿರುವುದು ಗರುಡನ ಹಿರಿಮೆಗೆ ಸಾಕ್ಷಿ.ಗರುಡನ ಸಾಮರ್ಥ್ಯವನ್ನು ಕಂಡು ವಿಷ್ಣುವು ಈತನಿಗೆ ಸುಪರ್ಣನೆಂಬ ಹೆಸರು ಕೊಟ್ಟು ತನ್ನ ವಾಹನವನ್ನಾಗಿ ಮಾಡಿ ಕೊಂಡನು. ಅವನನ್ನು ಧ್ವಜದಲ್ಲಿಟ್ಟುಕೊಂಡು ಗರುಡಧ್ವಜನಾದನು.ವೇದಗಳಲ್ಲಿ ಸೈನ್ಯ ನೆಂದು ಉಲ್ಲೇಖಿಸಲಾಗಿದೆ. ಗಗನೇಶ್ವರ, ಕಾಮಾಯುಷ, ಕಶ್ಯಪಿ, ಖಗೇಶ್ವರ, ನಾಗಾಂತಕ, ನಿತಾನನ, ಸುಧಾಹರ, ಸುಪರ್ಣ, ವೈನತೇಯ, ವಿಷ್ಣು ರಥ, ತಾರ್ಕ್ಷ್ಯ, ಗರುತ್ಮಾನ್, ಅಜಿತ,ಮುಂತಾದ ಹೆಸರುಗಳಿಂದ ವೇದ, ಉಪ ನಿಷತ್ತು, ಪುರಾಣ, ರಾಮಾಯಣ, ಮಹಾಭಾರತ, ಭಗವದ್ಗೀತೆ, ಯೋಗ ಸೂತ್ರಗಳಲ್ಲಿ ಬಣ್ಣಿಸಲ್ಪಟ್ಟಿದ್ದಾನೆ.

ಕೃಷ್ಣಾವತಾರದಲ್ಲಿ ಕೃಷ್ಣ ಸತ್ಯಭಾಮೆಯೊಡನೆ ಗರುಡ ವಾಹನನಾಗಿ ಬಂದು ನರಕಾಸುರನನ್ನು ಕೊಂದದ್ದು ಹಾಗೂ ಶ್ರೀಹರಿ ಗಜೇಂದ್ರನನ್ನು ರಕ್ಷಿಸಲು ಗರುಡವಾಹನನಾಗಿ ಬಂದನೆಂಬುದು ಜಗಜ್ಜನಿತ. ಮಹಾಭಾರತ ದಾದ್ಯಂತ ಉಗ್ರ ಶಕ್ತಿ. ವಾಯುವೇಗ ಮಿಂಚಿನ ತೇಜಸ್ಸು ಮುಂತಾದ ಗುಣಗಳ ಸಂಕೇತವಾಗಿ ಗರುಡ ಗುರುತಿಸಲ್ಪಟ್ಟಿದ್ದಾನೆ.

ಕುರುಕ್ಷೇತ್ರ ಯುದ್ಧದಲ್ಲಿ ಸೇನಾಧಿಪತಿಗಳಾಗಿದ್ದ ಭೀಷ್ಮ ದ್ರೋಣರು ತಮ್ಮ ಸೇನಾದಳವನ್ನು ಗರುಡವ್ಯೂಹದಲ್ಲಿ ರಚಿಸಿದ್ದಾರೆಂಬ ವಿಷಯ ತಿಳಿ ದದ್ದೇ, ತಿರುಮಲ ಬೆಟ್ಟದ ಇನ್ನೊಂದು ಹೆಸರು ಗರುಡಾಚಲ. ಹೀಗೆ ಗರುಡನ ಜನಪ್ರಿಯತೆ ಸಾಗುತ್ತದೆ.

ಗರುಡನ ಅದ್ಭುತ ಜನನ ಹಾಗೂ ಸಾಧನದ ವಿವರಗಳ ಆಕರ ಮಹಾಭಾರತದ ಆದಿಪರ್ವ. ಭಗವಂತನ ವಿಭೂತಿರೂಪ,ವಿಶೇಷ, ಆವೇಶ, ಜೀವರಲ್ಲಿ ಉತ್ತಮತ್ವ ಇವು ಗರುಡನ ಹೆಗ್ಗಳಿಕೆ.

ಗರುಡನ ಸ್ಮರಣೆಯನ್ನು ಪ್ರತಿನಿತ್ಯ ಮಾಡಲೇಬೇಕು. ಆದರಿಂದ ಆಹಾರದಲ್ಲಿರುವ ವಿಷಬಾಧೆಗಳು ಪರಿಹಾರವಾಗುತ್ತದೆ. ಗರುಡ ಧ್ಯಾನದಿಂದ ವಿಷನಿವೃತ್ತಿ ಉಂಟಾಗುತ್ತದೆಂಬುದನ್ನು ಶಾಸ್ತ್ರಗಳಲ್ಲಿ ಹೇಳಿದ್ದಾರೆ. ಅನೇಕರ ಜಾತಕದಲ್ಲಿ ಸರ್ಪದೋಷ ಇರುತ್ತದೆ.ಪರಿಹಾರಕ್ಕೂ ಗರುಡನ ಆರಾಧನೆ ಯನ್ನೇ ಮಾಡಬೇಕು. ಗರುಡನ ಸ್ಮರಣೆಯಿಂದ ಸರ್ಪದೋಷವು ಪರಿಹಾರ ವಾಗುವುದಷ್ಟೇ ಅಲ್ಲದೇ ಸರ್ಪಗಳ ಬಾಧೆಯೂ ಇರುವುದಿಲ್ಲ.



# ತಿರುಚಾನೂರಿನ ಸರ್ವಸ್ವತಂತ್ರ ವೀರಲಕ್ಷ್ಮೀ


ಇಂಗ್ಲೀಷ್ ಮೂಲ: ಟಿ.ಕೆ. ಕೃಷ್ಣಸ್ವಾಮಿ ತಾತಾಚಾರ್ಯ

ಕನ್ನಡ ಅನುವಾದ: ಶ್ರೀಮತಿ. ಎನ್. ಪಾರ್ವತಿ


**ಅಹಮಸ್ಯ ಅಪರಾಧ ಚಕ್ರವರ್ತೀ।**
**ಕರನೇ ತ್ವಂಚ ಗುಣೇಶು ಸಾರ್ವಭೌಮಿ।**
**ವಿದುಷೀ ಸ್ಥಿತಿ ಇದ್ರು ಸ್ಥಿಶ್ವಯಮಾಮ್।**
**ವೃಷಶೈಲೇಶ್ವರ ಪಾದ ಸತ್ಕುರುತ್ವಮ್॥**

**ತಪ್ಪುಗಳನ್ನು ಮಾಡುವುದರಲ್ಲಿ ನಾನು ರಾಜ. ದಯೆ ತೋರುವುದರಲ್ಲಿ ನೀನು ರಾಣಿ. ಓ ! ವಿದುಷಿ, ನನ್ನ ಸ್ಥಿತಿಯನ್ನು ನೋಡು ಮತ್ತು ವೃಷಶೈಲೇಶ್ವರನ (ಶ್ರೀನಿವಾಸ ದೇವರು) ಪಾದಗಳಿಗೆ ನನ್ನನ್ನು ಕರೆದುಕೊಂಡು ಹೋಗು.**

**- ವೇದಾಂತ ದೇಶಿಕೆಯ ದಯಾಶತಕಮಂ**

ಶ್ರೀಪದ್ಮಾವತಿ ಅಮ್ಮನವರು ಅಥವಾ ಅಲಮೇಲುಮಂಗಮ್ಮ ಕರುಣೆಯ ದೇವತೆ ಮತ್ತು ಬ್ರಹ್ಮಾಂಡದ ಎಲ್ಲ ಪ್ರದೇಶಗಳಿಗೆ ಆರಾಧ್ಯ ದೈವ ವೆಂಕಟೇಶ್ವರನ ದೈವಿಕ ಸಂಗಾತಿ. ಶ್ರೀನಿವಾಸ ದೇವರೊಂದಿಗೆ ಅವಳ ಸಂಬಂಧವು ಚಂದ್ರನೊಂದಿಗಿನ ಬೆಳದಿಂಗಳ ಸಂಬಂಧದಂತೆ ಅವಿನಾಭಾವವಾಗಿದೆ. ಶ್ರೀವೈಷ್ಣವ ಸಿದ್ಧಾಂತದ ಪ್ರಕಾರ ಇಬ್ಬರೂ "ಅವಿಭಕ್ತ". ತನ್ನ ದಯಾಶತಕದಲ್ಲಿ ಸ್ವಾಮಿ ವೇದಾಂತ ದೇಶಿಕರು ಆಕೆಯನ್ನು ದಯಾದೇವಿ ಎಂದು ಕರೆದಿದ್ದಾರೆ. ಪಾಪಿಗಳಿಗೆ ಶಿಕ್ಷೆಯಾಗದಂತೆ ಭಗವಂತನನ್ನು ತಂಪಾಗಿರಿಸುವ ಉದ್ದೇಶದಿಂದ ಶ್ರೀನಿವಾಸ ದೇವರ ಎದೆಯನ್ನು ಅಲಂಕರಿಸಿದ್ದಾಳೆ. ಆದ್ದರಿಂದ ಇಲ್ಲಿ ನೆಲೆಸಿರುವ ತಿರುಚುಕನೂರ್ ಅಥವಾ ತಿರುಚಾನೂರ್ ಅನ್ನು ಶ್ರೀವೈಕುಂಠದ ಪಕ್ಕದಲ್ಲಿರುವ ಅತ್ಯಂತ ಶ್ರೇಷ್ಠ ಪವಿತ್ರ ಸ್ಥಳವೆಂದು ಪರಿಗಣಿಸಲಾಗಿದೆ. ಲಕ್ಷಾಂತರ ಭಕ್ತರು ತಮ್ಮ ಸ್ವ ಅನುಭವಗಳಿಂದಾಗಿ ತಾಯಿ ಪದ್ಮಾವತಿ ದೇವಿಯು ಸದಾ ಒದಗಿಸುತ್ತಿರುವ ದಯೆಯಿಂದ ಸಂತುಷ್ಟರಾಗುತ್ತಾರೆ. ನೂಕು ನುಗ್ಗಲನ್ನು ತಡೆದು ಸುಲಭ ದರ್ಶನಕ್ಕೆ ಅನುಕೂಲ ಮಾಡಿಕೊಡುವಲ್ಲಿ ತಿರುಮಲೆ ತಿರುಪತಿ ದೇವಸ್ಥಾನದವರು ತೊಡಗಿದ್ದಾರೆ. ತಿರುಚಾನೂರ್ ಅಥವಾ ತಿರುಚುಕನೂರ್ ಪವಿತ್ರ ಸ್ಥಳವು, ದೇವಾಲಯ ಪಟ್ಟಣ ತಿರುಪತಿಯಿಂದ ಐದು ಕಿಲೋಮೀಟರ್ ದೂರದಲ್ಲಿದೆ.

ಋಷಿ ಶುಕ ಮಹರ್ಷಿಯು ಇಲ್ಲಿಯೇ ಇದ್ದು ಸ್ವರ್ಣಮುಖಿ ನದಿಯ ದಡದಲ್ಲಿ ತಪಸ್ಸು ಮಾಡುತ್ತಿದ್ದರು. ಶ್ರೀ ಶುಕಮಹರ್ಷಿಗಳು ಇಲ್ಲಿ ನೆಲೆಸಿದ್ದರಿಂದ ಈ ಸ್ಥಳವನ್ನು ತಿರುಚುಗನೂರು ಎಂದು ಕರೆಯಲಾಯಿತು.

ಶ್ರೀ ಪದ್ಮಾವತಿ ಅಮ್ಮನವರು ವೆಂಕಟೇಶ್ವರನ ದೇವಸ್ಥಾನಕ್ಕೆ ಬರುವ ಯಾತ್ರಾರ್ಥಿಗಳೆಲ್ಲರನ್ನೂ ಆಕರ್ಷಿಸುತ್ತಿದ್ದಾರೆ. ಶ್ರೀಮತಿ ಮತ್ತು ಶ್ರೀಮಾನ್‌ರನ್ನು ಪೂಜಿಸಬೇಕು ಮತ್ತು ಶ್ರೀಪದ್ಮಾವತಿಗೆ ಸಮಾನ ಸ್ಥಾನವನ್ನು ನೀಡಲಾಗಿದೆ. ನಮ್ಮ ತಪ್ಪುಗಳನ್ನು ಭಗವಂತನ ಮುಂದೆ ವಾದಿಸಲು ಮತ್ತು ಆತನ ಕೋಪದಿಂದ ನಮ್ಮನ್ನು ಮುಕ್ತಗೊಳಿಸಲು ದೇವಿಯು ಪುರುಷ್ಕರರೆಂದು ಶ್ರೀವೈಷ್ಣವರು ಸ್ಪಷ್ಟವಾಗಿ ಹೇಳುತ್ತಾರೆ. ದೇವಾಲಯಗಳಲ್ಲಿ ದೇವತೆಗಳ ಆರಾಧನೆಯು ಆಗಮ ಆಚರಣೆಗಳನ್ನು ಆಧರಿಸಿದೆ. ಆಗಮಗಳಲ್ಲಿ ಮೂರು ವಿಧಗಳಿವೆ. 1. ವೈಖಾನಸ ಆಗಮ 2. ಪಂಚರಾತ್ರ ಆಗಮ ಮತ್ತು 3. ಶೈವ ಆಗಮ. ವಿಷ್ಣು ದೇವಾಲಯಗಳಲ್ಲಿ ವೈಖಾನಸ ಆಗಮ ಮತ್ತು ಪಾಂಚರಾತ್ರ ಆಗಮವನ್ನು ಅನುಸರಿಸಲಾಗುತ್ತದೆ ಮತ್ತು ಶಕ್ತಿ ಮತ್ತು ಶೈವ ದೇವಾಲಯಗಳಲ್ಲಿ ಶೈವ ಆಗಮವನ್ನು ಅನುಸರಿಸಲಾಗುತ್ತದೆ. ದಕ್ಷಿಣ ಭಾರತದ ಬಹುತೇಕ ದೇವಾಲಯಗಳ ವೈಖಾನಸ ಆಗಮವನ್ನು ಅನುಸರಿಸಲಾಗುತ್ತದೆ ಮತ್ತು ಶ್ರೀವೆಂಕಟೇಶ್ವರಸ್ವಾಮಿ ದೇವಾಲಯ ತಿರುಮಲೆ ಮತ್ತು ತಿರುಚಾನೂರಿನ ಶ್ರೀಪದ್ಮಾವತಿ ಅಮ್ಮನವರ ದೇವಾಲಯವನ್ನು ಹೊರತು ಪಡಿಸಿ ಇತರ ದೇವಾಲಯಗಳಲ್ಲಿ ಇದನ್ನು ಕಟ್ಟುನಿಟ್ಟಾಗಿ ಅನುಸರಿಸ ಲಾಗುತ್ತದೆ. ಈ ದೇವಾಲಯದಲ್ಲಿ ಹಲವು ದಶಕಗಳಿಂದ ಪಾಂಚರಾತ್ರ ಆಗಮವನ್ನು ಅನುಸರಿಸಲಾಗುತ್ತದೆ. ಶತಪಥ ಬ್ರಾಹ್ಮಣ, ಚಂದ್ರಯೋಗ ಉಪನಿಷತ್ತು. ಪಾಣಿನಿ ಅಷ್ಟಯೋಗ ಮುಂತಾದ ಅನೇಕ ಉಪನಿಷತ್ತುಗಳಲ್ಲಿ ಪಾಂಚರಾತ್ರ ಆಗಮವನ್ನು ಉಲ್ಲೇಖಿಸ









ಲಾಗಿದೆ. ಐದು ದೇವರುಗಳಾದ ಲಕ್ಷ್ಮಿ, ಅನಂತ, ಗರುಡ,ವಿಶ್ವಕ್ಸೇನ ಮತ್ತು ಬ್ರಹ್ಮರಿಗೆ
ಶ್ರೀಮನ್ನಾರಾಯಣನು ಉಪದೇಶ ಮಾಡಿದ್ದರಿಂದ ಪಾಂಚರಾತ್ರ ಎಂಬ ಹೆಸರು
ನಾರಾಯಣನು ಆ ಗಮವನ್ನು ಪ್ರತಿಯೊಬ್ಬರಿಗೂ ಐದು ರಾತ್ರಿಗಳಲ್ಲಿ ಸ್ವತಃ ಬೋಧಿ
ಸಿದನು. ಆದ್ದರಿಂದ ಇದನ್ನು ಪಾಂಚರಾತ್ರ ಎಂದು ಕರೆಯಲಾಗುತ್ತದೆ. ಈ ಪಾಂಚ
ರಾತ್ರ ಆಗಮದಲ್ಲಿ ಒಂದೊವರೆ ಕೋಟಿ ಶ್ಲೋಕಗಳಿಗವೆ. ಪವಿತ್ರೋತ್ಸವಂ, ಧ್ವಜಾ
ರೋಹಣ, ಧ್ವಜಾವರೋಹಣಂ ಮತ್ತು ಅಂಕುರಾರ್ಪಣೆಗಳಂತಹ ಎಲ್ಲಾ ಆಚರಣೆ
ಗಳು ಮತ್ತು ಧಾರ್ಮಿಕ ಚಟುವಟಿಕೆಗಳನ್ನು ಅಮ್ಮನವರ ದೇವಸ್ಥಾನದಲ್ಲಿ ವಿಸ್ತಾರ
ವಾದ ರೀತಿಯಲ್ಲಿ ನಡೆಸಲಾಗುತ್ತದೆ.

ತಿ.ತಿ.ದೇ., ಯು ಶ್ರೀಪದ್ಮಾವತಿ ಅಮ್ಮನವರ ದೇವಸ್ಥಾನದಲ್ಲಿ ಭಕ್ತರ ಕೋರಿಕೆಯ
ಮೇರೆಗೆ ವಿವಿಧ ಆರ್ಜಿತ ಸೇವೆಗಳನ್ನು ಅಳವಡಿಸಿದೆ. ಇತ್ತೀಚೆಗೆ ತುಲಾಭಾರವನ್ನು
(ವ್ಯಕ್ತಿಯ ತೂಕ ಮಾಡುವುದು)ಪರಿಚಯಿಸಲಾಯಿತು. ಅನೇಕ ಭಕ್ತರು ತಮ್ಮ
ಕುಟುಂಬದಲ್ಲಿ ತಲೆಮಾರುಗಳವರೆಗೆ ಹೆಣ್ಣು ಮಗು ಇಲ್ಲದಿರುವುದರಿಂದ ವಿಶೇಷ
ವಾಗಿ ಹೆಣ್ಣು ಮಗು ಬೇಕು ಎಂದು ದೇವಿಯನ್ನು ಪ್ರಾರ್ಥಿಸುತ್ತಾರೆ ಮತ್ತು ಕೆಲವು
ಭಕ್ತರು ಅವರ ಸಮೃದ್ಧಿ ಮತ್ತು ಉತ್ತಮ ಆರೋಗ್ಯಕ್ಕಾಗಿ ದೇವಿಯನ್ನು ಪ್ರಾರ್ಥಿ
ಸುತ್ತಾರೆ. ಇಲ್ಲಿ ತುಲಾಭಾರದಲ್ಲಿ (ತೂಕ) ತೂಗ ಬಯಸುವ ಭಕ್ತರು ತಮ್ಮ ಪ್ರಾರ್ಥ
ನೆಯ ಪ್ರಕಾರ ಬೆಲ್ಲ, ತೆಂಗಿನಕಾಯಿ, ಸಕ್ಕರೆ ಮಿಠಾಯಿ ಇತ್ಯಾದಿಗಳಿಂದ ತುಲಾಭಾರ
ಮಾಡಬೇಕೆಂದು ಮುಂಚಿತವಾಗಿಯೇ ತಿಳಿಸಬೇಕು. ಭಕ್ತರು ತಮಗೆ ಬೇಕಾದ
ಸಾಮಾಗ್ರಿಗಳೊಂದಿಗೆ ತುಲಾಭಾರ ನಡೆಸಿದಾಗ, ತೂಕದ ವಸ್ತುಗಳಿಗೆ ಸಮನಾದ
ಮೊತ್ತವನ್ನು ನಗದು ರೂಪದಲ್ಲಿ ತಿ.ತಿ.ದೇ., ಯವರಿಗೆ ಪಾವತಿಸಬೇಕು.ಅವರು
ಪಾವತಿಸಿದ ಮೊತ್ತಕ್ಕೆ ರಶೀದಿ ನೀಡುತ್ತಾರೆ. ಆನ್‌ಲೈನ್ ಕಾಯ್ದಿರಿಸುವಿಕೆಯ ಲಭ್ಯತೆ
ಯಿಲ್ಲದ ಕಾರಣ ತಿರುಮಲೆದಲ್ಲಿ ಏನೂ ಮಾಡಲು ಸಾಧ್ಯವಾಗದ ಭಕ್ತರು ಹೆಚ್ಚು
ಇದನ್ನು ಉತ್ತಮ ಅವಕಾಶವಾಗಿ ಬಳಿಸಿಕೊಳ್ಳುತ್ತಾರೆ ಮತ್ತು ಶ್ರೀಪದ್ಮಾವತಿ ಅಮ್ಮ
ನವರು ತಮ್ಮ ಪರವಾಗಿ ಭಗವಂತನಲ್ಲಿ ತಮ್ಮ ಕೋರಿಕೆ ತಿಳಿಸುತ್ತಾರೆ ಎಂದು
ಸಂತೋಷಪಡುತ್ತಾರೆ. ಸೋಮವಾರ ಅಷ್ಟದಳ ಪದ್ಮ ಪಾದ ಆರಾಧನೆ, ಬುಧವಾರ
ಶತಕಲಶಾಭಿಷೇಕ, ಗುರುವಾರ ತಿರುಪ್ಪವಾಡ, ಶುಕ್ರವಾರದಂದು ಅಭಿಷೇಕ ಮತ್ತು
ಸಂಜೆ ಸಹಸ್ರದೀಪಾಲಂಕಾರ ಸೇವೆ, ಆಕೆಯು ಸಾಮವೇದವನ್ನು ಇಷ್ಟ ಪಡುವುದ
ರಿಂದ ಶನಿವಾರ ಸಾಮವೇದ ಪುಷ್ಪಾಂಜಲಿ ಸೇವೆಯಂತಹ ಇತರ ಸೇವೆಗಳಿವೆ.
ದಿಟ್ಟೆ ಪ್ರಸಾದದ ಬದಲು ಬೇಸಿನ್ ಲಡ್ಡು ಮತ್ತು ವಡೆವನ್ನು ಪ್ರಸಾದವಾಗಿ ಪರಿಚ
ಯಿಸಲಾಯಿತು. ಈ ಲಡ್ಡನ್ನು "ಅಮೃತ ಕಲಸಂ" ಎಂದು ಕರೆಯುತ್ತಾರೆ. ಕಲ್ಯಾಣೋ
ತ್ಸವ ಮಾಡುವವರಿಗೆ ಈ ಲಡ್ಡು ನೀಡಲಾಗುವುದು ಕೂಡ ಭಕ್ತರು ಹಣ ಪಾವತಿಸಿ
ಈ ಲಡ್ಡು ಮತ್ತು ವಡೆಗಳನ್ನು ಪಡೆಯುವ ವ್ಯವಸ್ಥೆಯೂ ಲಭ್ಯವಿದೆ. ತಿರುಪ್ಪಾವಡ
ದಿನ ಅಮ್ಮನವರಿಗೆ ಪುಳಿಯೋಗರೆಯೊಂದಿಗೆ ಜಿಲೇಬಿಯನ್ನು ಅರ್ಪಿಸಲಾಗುತ್ತದೆ.
ವೆಂಕಟೇಶ್ವರನೊಂದಿಗೆ ಎಲ್ಲಾ ಉತ್ತವಗಳನ್ನು ಆಕೆಯ ಪೂರ್ಣಗೊಳಿಸುತ್ತಿದ್ದಂತೆ,
ಬ್ರಹ್ಮೋತ್ಸವದ ಆರನೇ ದಿನದಂದು ಹಾಗೂ ವಸಂತೋತ್ಸವದ ಕೊನೆಯ ದಿನವಾದ

**ಪ್ರತಿದಿನ ಏಕಾಂತ ಸೇವೆಯ ಸಮಯದಲ್ಲಿ, ವೆಂಕಟೇಶ್ವರನ ವಿಗ್ರಹವನ್ನು ತೊಟ್ಟಿಲಿನ ಮೇಲೆ ಇರಿಸಲಾಗುತ್ತದೆ ಮತ್ತು ಶ್ರೀ ಪದ್ಮಾವತಿ ಅಮ್ಮನವರನ್ನು ಅವರ ಪಾದಗಳ ಮೇಲೆ ಇರಿಸಲಾಗುತ್ತದೆ. ಇದು ಭಗವಂತನ ಮೇಲಿನ ಭಕ್ತಿಯನ್ನು ತೋರಿಸುತ್ತದೆ. ಆ ಸಮಯದಲ್ಲಿ, ಅವಳು ತನ್ನ ಭಕ್ತರ ಕಷ್ಟವನ್ನು ನಿಧಾನವಾಗಿ ಪರಿಚಯಿಸುತ್ತಾಳೆ, ಇದರಿಂದ ಭಗವಂತ ಕರುಣಾಮಯಿಯಾಗುತ್ತಾನೆ ಮತ್ತು ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಾನೆ.**



ವರಲಕ್ಷ್ಮಿ ವ್ರತದ ದಿನದಂದು ಚಿನ್ನದ ರಥವನ್ನು ನಿರ್ಮಿಸಿ ಉತ್ಸವ ನಡೆಸಲಾಗುವುದು.

ಶ್ರೀಪದ್ಮಾವತಿ ಅಮ್ಮನವರ ದೇವಾಲಯದ ಒಳಗಿನ ದೇವಾಲಯಗಳಲ್ಲಿ ಶ್ರೀಕೃಷ್ಣ ಮತ್ತು ಬಲರಾಮನ ದೇವಾಲಯಗಳು ಪ್ರಸಿದ್ಧವಾಗಿವೆ, ಈ ದೇವಾಲಯಗಳು ಒಂದು ಕಾಲದಲ್ಲಿ ಪೂರ್ವಾಭಿಮುಖವಾಗಿರುವ

**ಆಹಾರವನ್ನು ಪವಿತ್ರವೆಂದು ಪರಿಗಣಿಸಲಾಗುತ್ತದೆ ಮತ್ತು ಅನ್ನಪ್ರಸಾದ ದಾನವು ಭಕ್ತರಿಗೆ ಅತ್ಯಂತ ದೈವಿಕ ಕೊಡುಗೆಯಾಗಿದೆ ಎಂದು ವೇದಗಳು ವೈಭವೀಕರಿಸುತ್ತವೆ ಮತ್ತು ತಿರುಮಲೆಯಲ್ಲಿ ದೇವಾಲಯದ ಹೊರಗೆ ಎಲ್ಲಾ ಭಕ್ತರಿಗೆ ಅನ್ನಪ್ರಸಾದವನ್ನು ಮಾತೃ ಶ್ರೀತರಿಗೊಂಡ ವೆಂಗಮಾಂಬ ಅನ್ನಪ್ರಸಾದ ಹೆಸರಿನಲ್ಲಿ ನೀಡಲಾಗುತ್ತದೆ. ಶ್ರೀಪದ್ಮಾವತಿ ಅಮ್ಮನವರೇ ಧಾನ್ಯಲಕ್ಷ್ಮೀಯಾಗಿದ್ದು ಅನ್ನಪ್ರಸಾದವು ಅವರ ಹೆಸರಿಗೆ ಸರಿ ಹೊಂದುತ್ತದೆ.**



ಪ್ರಮುಖ ದೇವಾಲಯಗಳಾಗಿತ್ತು ಮತ್ತು ರಾಜಗೋಪುರಗಳಾಗಿದ್ದವು. ಕೌರವರು ಮತ್ತು ಪಾಂಡವರ ನಡುವಿನ ಯುದ್ಧದ ನಂತರ ಶ್ರೀಕೃಷ್ಣನು ತೀರ್ಥಯಾತ್ರೆಗೆ ಹೋದ ತನ್ನ ಸಹೋದರ ಬಲರಾಮನನ್ನು ಹುಡುಕಿಕೊಂಡು ಶುಕಬ್ರಹ್ಮಋಷಿಗಳ ಆಶ್ರಮಕ್ಕೆ ಬಂದನು ಮತ್ತು ಅಲ್ಲಿ ಅವನ ಸಹೋದರನು ಹಿಂದಿರುಗುತ್ತಿರುವುದನ್ನು ತಿಳಿದನು. ಶ್ರೀಕೃಷ್ಣನು ತನ್ನ ಸಹೋದರನ ಆಗಮನದವರಿಗೆ ಅಲ್ಲಿಯೇ ಇದ್ದನು ಮತ್ತು ಸಹೋದರರಿಬ್ಬರೂ ಆಶ್ರಮದಲ್ಲಿ ಭೇಟಿಯಾದರು. ಶ್ರೀಬಲರಾಮನು ಈ ಸ್ಥಳವನ್ನು ಶ್ಲಾಘಿಸಿದನು ಮತ್ತು ಇದು ಪವಿತ್ರ ಸ್ಥಳವಾಗಿದೆ ಎಂದು ಹೇಳಿದನು. ವೃಷಶೈಲೇಶ್ವರ ದೇವಾಲಯದಲ್ಲಿ ಶ್ರೀಕೃಷ್ಣ ಮತ್ತು ಬಲರಾಮನ ಪ್ರತಿಮೆಯನ್ನು ಚಪ್ಪಲಿಯೊಂದಿಗೆ ಕಾಣಬಹುದು ಅಮ್ಮನವರ ವಿಮಾನವನ್ನು ಶಾಂತಿ ವಿಮಾನ ಎಂದು ಕರೆಯಲಾಗುತ್ತದೆ.ತಿರುಮಯಲ್ಲಿ ರುವಂತೆ,ತಿರುಚಾನೂರು ದೇವಸ್ಥಾನದಲ್ಲಿ ಶ್ರೀಪದ್ಮಾವತಿ ಅಮ್ಮನವರ ವಿಮಾನವನ್ನು ನೋಡ ಬಹುದು. ವಿಮಾನ ಅಮ್ಮನವರ ಹಾಗೂ ಅಷ್ಟಲಕ್ಷ್ಮೀಯರ ದರ್ಶನದಿಂದ ಭಕ್ತರ ಇಷ್ಟಾರ್ಥಗಳು ಈಡೇರುತ್ತವೆ. ಚಿನ್ನದ ವಿಮಾನದ ಸುತ್ತಲೂ ಅಷ್ಟ ಲಕ್ಷ್ಮಿಯವರ ಚಿತ್ರಗಳಿವೆ. ಪದ್ಮಾವತಿ ಅಮ್ಮನವರ ಪ್ರವೇಶ ರಕ್ಷಕರು 'ವನ ಮಾಲಿನಿ' ಮತ್ತು 'ಬಾಲಾಕಿನಿ' ಎಂದು ಕರೆಯಲ್ಪಡುವ ಮಹಿಳಾ ಕಾವಲು ದಾರರು, ಅವರು ತುಂಬಾ ಕರುಣಾಮಯಿಯಾಗಿದ್ದು ಪದ್ಮಾವತಿ ದೇವಿಗೆ ನಮ್ಮ ಆಗಮನ ಮತ್ತು ಪ್ರಾರ್ಥನೆಯ ಬಗ್ಗೆ ತಿಳಿಸುತ್ತಾರೆ.

ಶ್ರೀ ರಾಮಾನುಜರು, ನಮ್ಮಾಳ್ವಾರ್ ಮತ್ತು ತಿರುಮಂಗೈ ಆಳ್ವಾರರ ಪ್ರತಿಮೆಯನ್ನು ಒಳ ಮಂಟಪದ ಬಲಭಾಗದಲ್ಲಿ ಮತ್ತು ವಿಶ್ವಕ್ಸೇನನ ಪ್ರತಿಮೆಯನ್ನು ಎಡಭಾಗದಲ್ಲಿಯೂ ಕಾಣಬಹುದು. ಶ್ರೀಸುಂದರರಾಜ ಸ್ವಾಮಿ ದೇವಾಲಯವು ಶ್ರೀಕೃಷ್ಣನ ದೇವಾಲಯದ ಬಲಭಾಗದಲ್ಲಿದೆ. ಈ ದೇವಾಲಯವನ್ನು ಮಹಂತ್ ಪ್ರಯಾಗ್‌ದಾಸ್ ನವೀಕರಿಸಿದರು. ಈ ದೇವಾಲಯದ ಮುಖ ಮಂಟಪದಲ್ಲಿ ತುಲಾಭಾರವನ್ನು ಭಕರ್ತರ ಸಲುವಾಗಿ ಇತ್ತೀಚೆಗೆ ಇರಿಸಲಾಗಿದೆ. ಶ್ರೀ ಪದ್ಮಾವತಿ ಅಮ್ಮನವರು ಸುಧಾ, ಸತ್ವಸ್ವರೂಪರು ಮತ್ತು ಸರ್ವಸ್ವತಂತ್ರ ವೀರಲಕ್ಷ್ಮಿಯಾಗಿದ್ದಾರೆ. ಅಮ್ಮನವರು ಎಲ್ಲರಿಗೂ ಕರುಣಿಸಲಿ.

# ಸೂರ್ಯನ ಆರಾಧನೆಯ ರಥಸಪ್ತಮಿ



ಸಪ್ತ ಕುದುರೆಗಳ ರಥವೇರಿದ ಸೂರ್ಯ ತನ್ನ ಪಥವನ್ನು ಉತ್ತರದತ್ತ ತಿರುಗಿಸಿ ಹೊರಡುವ ಪರ್ವಕಾಲವೇ ರಥಸಪ್ತಮಿ ಹಬ್ಬದ ಕೇಂದ್ರಬಿಂದು. ಸೂರ್ಯನ ಆರಾಧನೆ ವೈದಿಕ ಧರ್ಮದಲ್ಲಿ ಅತ್ಯಂತ ಪ್ರಾಮುಖ್ಯತೆ ನೀಡಲಾಗಿತ್ತು, ಅವನ ಆರಾಧನೆಯಿಂದ ಸೌರ ಪಂಥ ಹುಟ್ಟಿದ್ದು ಸೌರಮಾನ ಎಣಿಕೆ ಇಂದಿಗೂ ಇದೆ. ಗಾಯತ್ರಿ ಮಂತ್ರದಲ್ಲಿರುವ ಪ್ರತಿಶಬ್ದ ಸೂರ್ಯವಿಷ್ಣುವೆಂದು. ಮುಂಜಾನೆಯ ಸೂರ್ಯ-ಬ್ರಹ್ಮನೆಂದೂ, ಮಧ್ಯಾಹ್ನದ ಸೂರ್ಯ-ವಿಷ್ಣುವೆಂದು,ಸಾಯಂಕಾಲದ ಸೂರ್ಯ-ರುದ್ರನೆಂದೂ ಭಾವಿಸಿ ಸೌರಪಂಥದವರು ಪೂಜಿಸುತ್ತಾರೆ. ನಮ್ಮ ದೈನಂದಿನ ಕಾರ್ಯದಲ್ಲಿ ಚಟುವಟಿಕೆಗಳಿಗೆ ಸ್ಫೂರ್ತಿ ಕೊಡುವ ಮಹಾಮಹಿಮೆ ಸೂರ್ಯನಾಗಿದ್ದಾನೆ. ವಿಘ್ನ ನಿವಾರಣೆಗಾಗಿ ಗಣೇಶ, ವಿದ್ಯಾರ್ಜನೆಗೆ ಸರಸ್ವತಿ, ಧನಸಂಪಾದನೆಗಾಗಿ ಲಕ್ಷ್ಮೀ, ಮಳೆ ಪಡೆಯಲು ವರುಣದೇವ, ಆರೋಗ್ಯ ಭಾಗ್ಯಕ್ಕಾಗಿ ರಥಸಪ್ತಮಿ ಆಚರಿಸಲಾಗುತ್ತದೆ. ಈ ವರ್ಷ ಫೆಬ್ರವರಿ 8 ರಂದು ರಥಸಪ್ತಮಿ ಆಚರಿಸಲಾಗುತ್ತದೆ. ರಥಸಪ್ತಮಿಯಂದು ಸೂರ್ಯದೇವನು ಚಾಂದ್ರಮಾನ ಸಂವತ್ಸರದ ಹನ್ನೊಂದನೇಯ ಮಾಸದ ಮಾಘ ಶುಕ್ಲ ಸಪ್ತಮಿ ತಿಥಿ ದಿವಸ ಸಪ್ತಾಶ್ವಗಳಿಂದ ಕೂಡಿದ ರಥವನ್ನೇರುವ ದಿವಸ. ಇದನ್ನು ಮಾಘ ಸಪ್ತಮಿ ಎಂದೂ ಕರೆಯುತ್ತಾರೆ. "ಸಪ್ತಜನ್ಮನಿ ಕೃತೇ ಪಾಪಂ ಮುಕ್ತಿ ರ್ಭವತಿ ತತ್‌ಕ್ಷಣಾತ್" ಎಂಬಂತೆ ಗಂಗಾ ಸ್ನಾನ ಶುದ್ಧವಾದಂತೆ ಸಪ್ತಮಿ ತಿಥಿಯಂದು ಸೂರ್ಯನನ್ನು ಭಕ್ತಿಯಿಂದ ಪೂಜಿಸಿದರೆ ಏಳು ಜನ್ಮದಲ್ಲಿ ಮಾಡಿದ ಪಾಪಗಳು ಕ್ಷಯವಾಗಿ ಆಯುಸ್ಸು, ಆರೋಗ್ಯ, ಸಂಪತ್ತು ಲಭಿಸುತ್ತದೆ. ಸೂರ್ಯೋಪಾಸನೆಯಿಂದಲೇ ಯಾಜ್ಞವಲ್ಕ್ಯ ಮಹರ್ಷಿಗಳು ಯಜುರ್ವೇದವನ್ನು ಸಂಪಾದಿಸಿದರು. ನಿತ್ಯವೂ ಸೂರ್ಯೋಪಾಸನೆ,ಸೂರ್ಯನಮಸ್ಕಾರ, ಸೂರ್ಯದ್ವಾದಶ ನಾಮಸ್ಮರಣೆ ಮಾಡಿದರೆ ಸರ್ವರೋಗ ಪರಿಹಾರವಾದವು. ರಥಸಪ್ತಮಿಯಿಂದ ಚಳಿ ಕಡಿಮೆಯಾಗಿ ಸೂರ್ಯನ ಪ್ರಖರತೆ ಹೆಚ್ಚಾಗಿ ಬಿಸಿಲು ಹೆಚ್ಚುತ್ತದೆ.

**ಪುರಾಣದಲ್ಲಿ ರಥ ಸಪ್ತಮಿ:**

ಯುಗದಲ್ಲಿ ಶ್ರೀ ಕೃಷ್ಣನು ಧರ್ಮರಾಜನಿಗೆ ರಥಸಪ್ತಮಿ ಬಗೆ ಹೇಳಿದ ಕಥೆ ಇದೆ. ಯಶೋವರ್ಮನೆಂಬ ರಾಜನಿಗೆ ಹುಟ್ಟಿದ ಮಗ ಹುಟ್ಟಿನಿಂದಲೇ ರೋಗಿಷ್ಟನಾಗಿದ್ದ. ಜೋತಿಷಿಗಳನ್ನು ರಾಜನು ಕಾಣಲು ರಥಸಪ್ತಮಿ ವ್ರತ ಆಚರಿಸಲು ಹೇಳಿದ ಕಾರಣ ರಾಜನು ಸೂರ್ಯಾರಾಧನೆ ಮಾಡಲಾಗಿ ರಾಜಪುತ್ರನು ಆರೋಗ್ಯವಂತನೂ, ಪ್ರಭಾವಶಾಲಿಯಾದನು. ಅದೇ ಅವಧಿಯಲ್ಲಿ ಪಾಂಡವರು ಶ್ರೀಕೃಷ್ಣನ ಅನುಗ್ರಹ ಪಡೆದಿದ್ದರು. ರಾವಣನನ್ನು ಗೆಲ್ಲ ಬೇಕಾದಾಗ ಶ್ರೀರಾಮನು ಕೂಡಾ ಅಗಸ್ತ್ಯರ ಉಪದೇಶದಂತೆ ಆದಿತ್ಯ ಹೃದಯದ ಮೂಲಕ ಸೂರ್ಯನ ಆರಾಧನೆ ಮಾಡಿದನೆಂದು ರಾಮಾಯಣದಲ್ಲಿ ಹೇಳಿದೆ. ಸೂರ್ಯಾರಾಧನೆ ಹರಿವಂಶದಲ್ಲಿ ಬಂದಿದೆ. ಮಯೂರನೆಂಬ ಕವಿ ಸೂರ್ಯಶತಕವೆಂಬ ಗ್ರಂಥ ಬರೆದು ಕಳೆದುಕೊಂಡ ಕಣ್ಣನ್ನು ಮರಳಿ ಪಡೆದನೆಂದು ಹೇಳುತ್ತಾರೆ.

ಹಿಂದೂ ಪುರಾಣದಲ್ಲಿ ರಥಸಪ್ತಮಿಯ ಉಲ್ಲೇಖವಿದೆ. ಸಮಸ್ತ ಋಷಿ ಮುನಿಗಳು ರಥಸಪ್ತಮಿಯಂದು ಸೂರ್ಯನನ್ನು ಪೂಜಿಸುತ್ತ ಬಂದಿದ್ದಾರೆ.

**ಪವಿತ್ರ ಸ್ನಾನ :**

ಏತಜ್ಜನ್ಮ ಕೃತಂ ಪಾಪಂ ಯಚ್ಚ
ಆಜನ್ಮಾಂತರಾರ್ಜಿತಮ್ ಮನೋವಾಕ್ಕಾಯಜಂ
ಯಚ್ಚ ಜ್ಞಾತಾಜ್ಞಾತಂಚ ಯತ್ ಪುನಃ ಇತಿ ಸಪ್ತ ವಿಧಂ
ಪಾಪಂ ಸ್ನಾನೇನ ಸಪ್ತ ಸಪ್ತಿಕೆ ಸಪ್ತವ್ಯಾಧಿ
ಸಮಾಯುಕ್ತಂ ಹರ ಮಾಕರಿ ಸಪ್ತಮೀ.

-ಗಿರಿಜಾ. ಎಸ್. ದೇಶಪಾಂಡೆ
97393 88300



ಅರುಣೋದಯ ಕಾಲದಲ್ಲಿ ಸ್ನಾನಕ್ಕೆ ಬಹಳ ಮಹತ್ವವಿದೆ. ಸೂರ್ಯನ ವೃಕ್ಷ ವೆಂದೇ ಪ್ರಸಿದ್ಧವಾದ ಎಕ್ಕದ ಎಲೆ ಗಳನ್ನು ತಲೆಯ ಮೇಲಿಟ್ಟು ಕೊಂಡು ಸ್ನಾನ ಮಾಡ ಬೇಕು. ಅಂದರೆ ಹಿಂದಿನ ಜನ್ಮದ ಪಾಪ, ಸಪ್ತವ್ಯಾಧಿಗಳು, ಮಾತು ಮನಸ್ಸು,ದೇಹದಿಂದ ಮಾಡಿದ ಅಪರಾಧಗಳ ನಾಶ ಹೊಂದಿ, ಮುಕ್ತಿ ಲಭ್ಯವಾಗುವುದೆಂದು ಪೌರಾಣಿಕ ಪ್ರತೀತಿ ಇದೆ.ಎಳ್ಳು,ನೆಲ್ಲಿಕಾಯಿ ಪುಡಿ ಯನ್ನು ಹಚ್ಚಿಕೊಂಡು ಸ್ನಾನ ಮಾಡಬೇಕು. ಆ ದಿನ ಅರುಣೋದಯಕ್ಕೆಎದ್ದು ಸ್ನಾನ ಮಾಡಿ ಸೂರ್ಯನಿಗೆ ಅರ್ಘ್ಯ ನೀಡಿದರೆ ಕೋಟಿ ಯಜ್ಞಫಲ ಪ್ರಾಪ್ತಿಯಾಗುತ್ತದೆ. ಸೂರ್ಯನು ಆರೋಗ್ಯ ಉಂಟು ಮಾಡುವವನಾದ್ದರಿಂದ ಆ ವ್ರತದ ಫಲ ಸೂರ್ಯೋದಯವೇ ಆಗಿದೆ.

ಸೂರ್ಯನೇ ಸಕಲ ದೇವತೆಯೆಂದು ಶೃತಿ ಸಾರಿದೆ ಸೂರ್ಯನೇ ಎಲ್ಲ ಚರಾಚರಗಳ ಸೃಷ್ಟಿ.ಸ್ಥಿತಿ ಲಯಗಳಿಗೆ ಕಾರಣನಾಗಿದ್ದಾನೆ.

**ಎಕ್ಕದೆಲೆಯ ಸ್ನಾನದ ಮಹತ್ವ :**

ಅರ್ಕ ಎಂದರೆ ಪೂಜನೀಯವೆಂದರ್ಥ. ತೈತ್ತರೀಯ ಸಂಹಿತೆಯಲ್ಲಿ ಅರ್ಕ, ಉಷ್ಣ, ತೀಕ್ಷಣ ಗುಣಗಳನ್ನು ಹೊಂದಿದೆ ಯೆಂದು ಹೇಳಲಾಗಿದೆ.ಅಥರ್ವ ಶೌನಕೇಯ ಸಂಹಿತೆಯಲ್ಲಿ ಆರ್ಕವಾಜೀಕರಣ(ಸಂತಾನ ಸಾಮರ್ಥ್ಯ ಸಂವರ್ಧನೆ) ದಂತೆ ಕಾರ್ಯನಿರ್ವಹಿಸುತ್ತದೆ. ಆರೋಗ್ಯ ಕೊಡುವ ಸಸ್ಯ ಇದಾಗಿದ್ದು ರಥಸಪ್ತಮಿಯಂದು ಎಕ್ಕದೆಲೆಯನ್ನು ತಲೆ, ಭುಜ, ಕತ್ತು, ಕಂಕುಳ,ತೊಡೆ, ಪಾದಗಳ ಮೇಲೆ ಇರಿಸಿ ಸ್ನಾನ ಮಾಡು ವುದು ರಥಸಪ್ತಮಿ ಪದ್ಧತಿ ಎಕ್ಕದೆಲೆ ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆ ನಿವಾರಿಸುವ ಶಕ್ತಿ ಇದೆ.ದೇಹದ ಕೀಲುನೋವು. ಹಲ್ಲುನೋವು,ಹೊಟ್ಟೆನೋವು,ನಿವಾರಿಸುವ ಶಕ್ತಿ ಇದೆ.ಹೀಗಾಗಿ ಆ ದಿನ ಎಕ್ಕದೆಲೆಯ ಸ್ನಾನಕ್ಕೆ ಮಹತ್ವ ನೀಡಲಾಗಿದೆ.

**ಹಬ್ಬದ ಆಚರಣೆ :**

ಅಂದು ಸೂರ್ಯೋದಯಕ್ಕೆ ಮೊದಲು ಎದ್ದು ಸ್ನಾನ ಮಾಡಿ ಶುಚಿ ಬಟ್ಟೆ ಯೊಂದಿಗೆ ಸೂರ್ಯನಿಗೆ ಭಕ್ತಿಯಿಂದ ಕೈಮುಗಿದು, ಪೂಜಿಸಿ, ಅಂದು ಮನೆ ಬಾಗಿಲಿಗೆ ಸೂರ್ಯನ ರಥವನ್ನು ರಂಗೋಲಿಯಿಂದ ಶೃಂಗರಿಸಿ ಸೂರ್ಯನ ಶಾಖ ಅಥವಾ ಭರಣಿ ಯಿಂದ ಹಾಲು ಉಕ್ಕರಿಸಿ ಅವಲಕ್ಕಿ ಪಾಯಸ ಸೂರ್ಯನಿಗೆ ಅರ್ಪಿಸುವ ಪದ್ಧತಿ ನಮ್ಮಲಿದೆ.


**ಸೂರ್ಯನಮಸ್ಕಾರ :**

ಅಂದಿನ ದಿನ ಸೂರ್ಯ ನಮಸ್ಕಾರಕ್ಕೆ ಬಹಳ ಮಹತ್ವ ವಿದೆ. ಸೂರ್ಯನ ದ್ವಾದಶ ನಾಮಗಳು.

ಸೂರ್ಯಾಯನಮಃ ಭಾನವೇ ನಮಃ
ಖಗಾಯ ನಮಃ ಪೂಷ್ಣೇ ನಮಃ ಹಿರಣ್ಯಗರ್ಭಾಯ ನಮಃ
ಮರೀಚಯೇ ನಮಃ ಆದಿತ್ಯಾಯನಮಃ ಸವಿತ್ರೇ ನಮಃ
ಅರ್ಕಾಯ ನಮಃ ಭಾಸ್ಕರಾಯನಮಃ ಮಿತ್ರಾಯ ನಮಃ
ರವಯೇ ನಮಃ

ಸೂರ್ಯ ನಮಸ್ಕಾರದ ಕ್ರಮಗಳು-ತಾಡಾಸನ, ನಮ ಸ್ಕಾರಾಸನ. ಉಧ್ರ್ವಾವಸನ, ಹಸ್ತ ಪಾದಾಸನ, ಏಕ ಪಾದ ಪ್ರಸರಣಾಸನ,ದ್ವಿಪಾದ ಪ್ರಸರಾಣಸನ,ಭೂಧರಾಸನ, ಸಾಷ್ಟಾಂಗ ಪ್ರಣೀಪಾತಾಸನ, ಭುಜಂಗಾಸನ, ಭೂಧರಾಸನ, ಏಕಪಾದ ಪ್ರಸರಾಣಸನ, ಹಸ್ತಪಾದಾಸನ, ನಮಸ್ಕಾರಾಸನ, ತಾಡಾಸನ,

ನಮ್ಮಲ್ಲಿ ಯುಗಾದಿ ಹೊಸತನ ಹೊತ್ತು ತಂದರೆ ಅದಕ್ಕೆ ಮುನ್ನ ಬರುವ ರಥಸಪ್ತಮಿ ಹಳೆಯ ಜಾಗದಲ್ಲಿ ಹೊಸದನ್ನು ತಂದಿಟ್ಟು, ಬದುಕನ್ನು ಆನಂದಮಯವಾಗಿಸಿಕೊಳ್ಳಲು ಪ್ರೇರೇ ಪಿಸಿಸುತ್ತದೆ. ಚಳಿಗೆ ಮುದುಡಿದ ಪ್ರಕೃತಿ ರಥಸಪ್ತಮಿ ಬಳಿಕ ಸೂರ್ಯನ ಶಾಖಕ್ಕೆ ಅರಳಿ ನವಚೈತನ್ಯ ತುಂಬಿಕೊಳ್ಳುತ್ತದೆ. ನಾವೆಲ್ಲ ಸೂರ್ಯನ ಆರಾಧನೆ ಮಾಡಿ ಒಳ್ಳೆಯ ಆರೋಗ್ಯ ವನ್ನು ಪಡೆಯೋಣ. ಆರೋಗ್ಯವೇ ಭಾಗ್ಯವಲ್ಲವೇ?



# ಸ್ನಾನ ಮತ್ತು ದಾನಕ್ಕೂ ಪುಣ್ಯ ಮಾಸವೇ ಮಾಘ ಮಾಸ


- ಹನುಮಂತ.ಮ.ದೇಶಕುಲಕರ್ಣಿ

94803 64915


ಸನಾತನ ಧರ್ಮದ ಪ್ರತಿ ತಿಂಗಳು ತನ್ನದೇ ಆದ ವಿಶೇಷ ಸ್ಥಾನವನ್ನು ಹೊಂದಿದೆ. ಆದರೆ ಅವುಗಳಲ್ಲಿ ಮಾಘ ಮಾಸವನ್ನು ವಿಶೇಷವೆಂದು ಪರಿಗಣಿಸಲಾಗುತ್ತದೆ. ಈ ತಿಂಗಳು ಮಾಡಿದ ಪುಣ್ಯ ಕಾರ್ಯವು ಯಾವಾಗಲೂ ಜನ್ಮಜನ್ಮಗಳ ಪುಣ್ಯದ ಫಲವನ್ನು ನೀಡುತ್ತದೆ ಎನ್ನುವ ನಂಬಿಕೆಯಿದೆ.

ಮಾಘಮಾಸ ಎಂದೊಡನೆ ನೆನಪಿಗೆ ಬರುವುದು ಮಾಘಸ್ನಾನ. ಮಾಘ ಮಾಸದಲ್ಲಿ ಇಡೀ ಭೂ ಮಂಡಲ ಪವಿತ್ರವಾಗಿರುತ್ತದೆ. ಸೂರ್ಯ ಮಕರರಾಶಿಯಲ್ಲಿರುವಾಗ ಮಾಘಮಾಸದಲ್ಲಿ ಪ್ರಾತಃಕಾಲದಲ್ಲಿ ಸ್ನಾನ ಮಾಡುವವರು ಸಮಸ್ತ ಪಾಪಗಳಿಂದ ಮುಕ್ತರಾಗಿ ಅಂತ್ಯದಲ್ಲಿ ಮೋಕ್ಷವನ್ನು ಪಡೆಯುತ್ತಾರೆ ಎಂಬ ನಂಬಿಕೆಯಿದೆ. ಕಾರ್ತಿಕ ಮಾಸದ ದೀಪಕ್ಕೆ ಇರುವಷ್ಟು ಮಹಿಮೆ ಇನ್ನಾವುದಕ್ಕೂ ಇಲ್ಲ.ಈ ಮಾಸದಲ್ಲಿ ಭಗವದ್ಗೀತೆಯನ್ನು ಪಠಿಸಬೇಕು.ಇದನ್ನು ಪಠಿಸುವುದರಿಂದ, ಮನಸ್ಸು ಶಾಂತವಾಗಿರುತ್ತದೆ ಮತ್ತು ಭಗವಾನ್ ನಾರಾಯಣ ಕೂಡ ನಮ್ಮನ್ನು ಆಶೀರ್ವದಿಸುತ್ತಾನೆ.

## ಪುರಾಣಗಳಲ್ಲಿ

ಮಾಘ ಪುರಾಣದ ಪ್ರಕಾರ ಮೊದಲನೇ ದಿನ ಮಾಘ ಸ್ನಾನ ಮಾಡಿದವರಿಗೆ ಪಾಪಗಳಿಂದ ಬಿಡುಗಡೆ ಎರಡನೇ ದಿನವೂ ಮಾಘಸ್ನಾನ ಆಚರಣೆ ಮುಂದುವರೆಸುವವರು ವಿಷ್ಣುಲೋಕ ಸೇರುತ್ತಾರೆ ಹಾಗೂ ಮೂರನೇ ದಿನವೂ ಇದನ್ನು ಮುಂದುವರೆಸಿದವರಿಗೆ ಯಾವ ಫಲವನ್ನು ಕೊಡಬೇಕೆಂದು ವಿಷ್ಣುವೇ ಯೋಚಿಸುತ್ತಾನೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಬ್ರಹ್ಮವೈವರ್ತ ಪುರಾಣದ ಪ್ರಕಾರ, ಮಾಘ ಮಾಸದಲ್ಲಿ ದಾನ ಮಾಡಿದವರು ಬ್ರಹ್ಮಲೋಕವನ್ನು ಸೇರುತ್ತಾರೆ ಎನ್ನುವ ಉಲ್ಲೇಖವಿದೆ. ಮಾಘ ತಿಂಗಳಲ್ಲಿ ಪವಿತ್ರ ನದಿಗಳಲ್ಲಿ ಸ್ನಾನ ಮಾಡುವುದರಿಂದ ಎಲ್ಲಾ ಪಾಪಗಳು ನಿವಾರಣೆಯಾಗುತ್ತವೆ ಮತ್ತು ಎಲ್ಲಾ ಆಸೆಗಳು ಈಡೇರುತ್ತದೆ.

ನದಿ, ಸರೋವರ ಹಾಗೂ ಸಮುದ್ರಗಳಲ್ಲಿ ಸ್ನಾನ ಮಾಡಿ ಅಲ್ಲಿರುವ ದೈವೀಶಕ್ತಿಯನ್ನು ಪಡೆದು ಪಾಪಕ್ಷಯ ಮಾಡಿಕೊಳ್ಳುವುದೇ ಮಾಘ ಸ್ನಾನದ ಮಹಿಮೆ. ಧರ್ಮಶಾಸ್ತ್ರದಲ್ಲಿ ಸ್ನಾನಕ್ಕೆ ಮಹತ್ತರವಾದ ಫಲವನ್ನು ಹೇಳಿದೆ. ಸ್ನಾತ್ಯನೇನ ಸ್ನಾನಂ ಎಂದರೆ ಶುಚಿಯಾಗುವುದು ಎಂದು ಮಂತ್ರ ಸಹಿತವಾಗಿ ಭಕ್ತಿಯುತವಾಗಿ ಮಾಡಿದ ಸ್ನಾನವು ಅದೃಷ್ಟ ಸ್ನಾನ,ಶರೀರದ ಶುದ್ಧಿಗಾಗಿ ಮತ್ತು ಸಂತೋಷಕ್ಕಾಗಿ ಮಾಡುವ ಸ್ನಾನ ದೃಷ್ಟಸ್ನಾನ ಎನ್ನುವರು.

ಗಂಗಾ, ಯಮುನಾ, ಸರಸ್ವತಿ ನದಿಗಳ ತ್ರಿವೇಣಿ ಸಂಗಮವಾಗಿರುವ ಪ್ರಯಾಗದಲ್ಲಿ ಬ್ರಹ್ಮನು ಸೃಷ್ಟಿಕಾರ್ಯದ ಬಳಿಕ ಮೊದಲ ಯಜ್ಞ ನೇರವೇರಿಸಿದ್ದನಂತೆ. ಆದ್ದರಿಂದ ಪ್ರಯಾಗ, ಹರಿದ್ವಾರ, ಉತ್ತರಕಾಶಿ, ನಾಸಿಕ್, ಗಂಗಾ, ಯಮುನಾ ನದಿ ತೀರದಲ್ಲಿ ಮಾಘಸ್ನಾನ ಮಾಡುವುದಕ್ಕೆ ವಿಶೇಷ ಮಹತ್ವವಿದೆ.ಸಂಗಮ ಸ್ಥಾನದಲ್ಲಿ ಸಾಕ್ಷಾತ್ ತ್ರಿಮೂರ್ತಿಗಳೇ ನೆಲೆಸಿರುತ್ತಾರೆ ಎಂದು ಹೇಳಲಾಗಿದೆ.ಇಲ್ಲಿ ಸ್ನಾನ ಮಾಡಿದರೆ 10 ಸಾವಿರ ಅಶ್ವಮೇಧಯಾಗ ಮಾಡಿದಷ್ಟು ಪುಣ್ಯ ಬರುತ್ತದೆ ಎಂದು ಉಲ್ಲೇಖವನ್ನು ಶಾಸ್ತ್ರಗಳಲ್ಲಿ ನೋಡಬಹುದು.

## ತೀರ್ಥಗಳ ರಾಜ ಪ್ರಯಾಗ

ಪ್ರಯಾಗ ಕ್ಷೇತ್ರವು ಮಾಘ ಮಾಸ ಸ್ನಾನದ ಆಚರಣೆಗೆ ಶ್ರೇಷ್ಠವೆಂದು ಪ್ರಸಿದ್ಧಿ ಪಡೆದಿದೆ. ಈ ಮಾಸದಲ್ಲಿ ಬರುವ ಅಮಾವಾಸ್ಯೆಯಂದು ಪ್ರಯಾಗ ತೀರ್ಥ ಕ್ಷೇತ್ರದಲ್ಲಿ ಸಮಸ್ತ ತೀರ್ಥಗಳು ಸಂಗಮವಾಗುತ್ತದೆ ಎನ್ನುವ ಸತ್ಯ ಮಹಾಭಾರತದ ಅನುಶಾಸನ ಪರ್ವದಲ್ಲಿದೆ. ಮಾಸದಲ್ಲಿ ತೀರ್ಥಗಳ ರಾಜ ಎಂದೇ ಕರೆಯಲಾಗುವ ಪ್ರಯಾಗ ಮಹಾಕ್ಷೇತ್ರದಲ್ಲಿ ಸ್ನಾನ ಮಾಡಿದವರು ವೈಕುಂಠ

ಸೇರುತ್ತಾರೆ. ಸಾಮಾನ್ಯ ದಿನಗಳಲ್ಲಿ ಎಷ್ಟು ಜಪ, ಹಾಗೂ ದಾನ ದಿಂದ ವಿಷ್ಣು ಪ್ರಸನ್ನನಾಗುತ್ತಾನೋ, ಮಾಘಮಾಸದಲ್ಲಿ ಮಾಘ ಸ್ನಾನ ಮಾಡಿದರೆ ಅದಕ್ಕಿಂತ ಹೆಚ್ಚು ಪ್ರಸನ್ನನಾಗುತ್ತಾನೆ. ಮಾಘ ಮಾಸದ ಸ್ನಾನ, ದಾನ, ಪೂಜಾಕೈಂಕರ್ಯಗಳಿಗೆ ವಿಶೇಷ ಮಹತ್ವ ಸಾಧು ಸಂತರಿಗೆ ಪ್ರತಿದಿನವೂ ಸಹ ನದಿ, ಪವಿತ್ರ ತೀರ್ಥ ಕ್ಷೇತ್ರಗಳಲ್ಲೇ ಮಾಘ ಸ್ನಾನ ಮಾಡಿದವರು ನೂರು ಅಶ್ವಮೇಧಯಾಗಗಳನ್ನು ಮಾಡಿದ ಪುಣ್ಯ ಫಲ ಈ ಮಾಘಮಾಸದಲ್ಲಿ ದೊರೆಯುತ್ತದೆ.

**ಸ್ನಾನಗಳಲ್ಲಿ 6 ವಿಧಗಳು:**

ಬೆಳಗಿನ ಜಾವ ಅಂದರೆ ಬ್ರಾಹ್ಮಿ ಮುಹೂರ್ತದಲ್ಲಿ (ನಕ್ಷತ್ರ ಗಳು ಇರುವಾಗ) ಸ್ನಾನ ಮಾಡುವುದು ಉತ್ತಮ, ನಕ್ಷತ್ರಗಳಿಲ್ಲದಿರುವ ಸಮಯದಲ್ಲಿ ಮಾಡುವುದು ಮಧ್ಯಮ, ಸೂರ್ಯೋದಯದ ನಂತರ ಸ್ನಾನ ಮಾಡುವುದು ನಿಷ್ಫಲವೆಂದು ಹೇಳಿದೆ.

ಮಾಘಮಾಸದಲ್ಲಿ ವಿಪರೀತ ಚಳಿ,ಶೀತ ವಾತಾವರಣ ಮತ್ತು ಮಂಜಿನ ಮಳೆ ಇರುತ್ತದೆ. ಈ ಕಾರಣಕ್ಕೆ ಸೂರ್ಯನ ಶಾಖವು ಇರುವು ದಿಲ್ಲ. ಇದರಿಂದ ನಮ್ಮ ದೇಹ ದುರ್ಬಲಗೊಳ್ಳುತ್ತದೆ. ನದಿಗಳಲ್ಲಿ ಸ್ನಾನ ಮಾಡಿದಾಗ ಸೂರ್ಯನ ಕಿರಣಗಳು ಹೆಚ್ಚು ಶಾಖವನ್ನು ನೀಡುವುದು ಮತ್ತು ನಮ್ಮದೇಹದ ಚರ್ಮವನ್ನು ಶುದ್ಧಿಕರಿಸುತ್ತದೆ.

ಮಾಘಮಾಸದಲ್ಲಿ ಪ್ರಯಾಗ ಕ್ಷೇತ್ರ ವಾಸ,ತ್ರಿವೇಣಿ ಸಂಗಮ ದಲ್ಲಿ ಸ್ನಾನ ಮಾಡುವುದರಿಂದ ಇಡೀ ಒಂದು ಕಲ್ಪ ತಪಸ್ಸು ಮಾಡಿದ ಫಲ ದೊರೆಯುತ್ತದೆ. ಇಡೀ ತಿಂಗಳು ಮಾಘ ಸ್ನಾನವನ್ನು ಆಚರಿಸಲು ಸಾಧ್ಯವಿಲ್ಲದವರು, ಮಾಘ ಶುಕ್ಲ ತ್ರಯೋದಶಿ,ಚತುರ್ದಶಿ, ಹುಣ್ಣಿಮೆ ದಿನಗಳಲ್ಲಿ ಸೂರ್ಯೋದಯದ ಸಮಯಕ್ಕೂ ಮೊದಲೇ ಸ್ನಾನವನ್ನು ಆಚರಿಸಿ ದಾನಗಳನ್ನು ಮಾಡಬೇಕು.

**1. ನಿತ್ಯ ಸ್ನಾನ :** ಪ್ರತಿ ನಿತ್ಯವೂ ಕರ್ಮಾನುಷ್ಠಾನಕ್ಕೆ ಮಾಡು ವುದು.

**2.ಕಾಮ್ಯಸ್ನಾನ:** ತುಲಾ ಮಾಸದಲ್ಲಿ, ಮಾಘ ಮಾಸದಲ್ಲಿ, ಸಂಕ್ರಮಣ ಮತ್ತು ವಿಶೇಷ ತಿಥಿ, ನಕ್ಷತ್ರ ಮತ್ತು ವಾರಗಳಲ್ಲಿ ಮಾಡು ವುದು.

**3. ಮಲಾಪ ಕರ್ಷಣ ಸ್ನಾನ:** ಬರೀ ಶರೀರದ ಕೊಳೆಯನ್ನು ತೆಗೆಯು ವುದು.

**4. ನೈಮಿತ್ತಿಕ ಸ್ನಾನ:** ಶವ ಸ್ಪರ್ಶವಾದಾಗ ಮತ್ತು ರಜ ಸ್ವಲೆಯಾದ ಸ್ತ್ರೀಯನ್ನು ಸ್ಪರ್ಶಿಸಿದಾಗ ಮಾಡುವ ಸ್ನಾನ.

**5. ಕ್ರಿಯಾಂಗ ಸ್ನಾನ:** ಜಪ, ತಪಸ್ಸಿಗಾಗಿ, ದೇವತಾರ್ಚನೆ ಗಾಗಿ ಮತ್ತು ಪಿತೃಕಾರ್ಯಕ್ಕಾಗಿ ಮಾಡುವ ಸ್ನಾನ.

**6. ಕುಂಭಮೇಳದ ಸ್ನಾನ :** ಪುಣ್ಯತೀರ್ಥ, ಪುಣ್ಯನದಿಯಲ್ಲಿ ಪುಷ್ಕರಣಿಗಳಲ್ಲಿ ಮತ್ತು ಕುಂಭ ಮೇಳದಲ್ಲಿ ಮಾಡುವ ಸ್ನಾನ .

**ಸೂರ್ಯ ಪ್ರಿಯ ಮಾಸ:**

ಮಾಘ ಮಾಸ ಸೂರ್ಯನಿಗೆ ಅತ್ಯಂತ ಪ್ರೀತಿ ಪಾತ್ರ ವಾದ ಮಾಸ. ಈ ತಿಂಗಳಲ್ಲಿ ಪ್ರತಿದಿನವೂ ಸೂರ್ಯಾಷ್ಟಕ, ಆದಿತ್ಯ ಹೃದಯವನ್ನು ಪಠಿಸಬೇಕು. ಮಾಘಮಾಸದ ಭಾನುವಾರದಂದು ಸೂರ್ಯ ದೇವನನ್ನು ಪೂಜಿಸುತ್ತಾ ಸ್ನಾನ ಮಾಡಬೇಕು ಹಾಗೂ ಸೂರ್ಯನಿಗೆ ಅರ್ಘ್ಯ ನೀಡ ಬೇಕು. ಮಾಘ ಮಾಸದಲ್ಲಿ ಪರಶಿವನು ಲಿಂಗೋದ್ಭವ ಮೂರ್ತಿಯಾಗಿ ಆವಿರ್ಭವಿಸಿದನು. ಆದುದರಿಂದ ಈ ಮಾಸವು ಶಿವ ಪೂಜೆಗೆ ಅತಿ ಶ್ರೇಷ್ಠ.ಈ ತಿಂಗಳಲ್ಲಿ ಶಿವನಿಗೆ ಅಭಿಷೇಕ ಹಾಗೂ ಬಿಲ್ವಪತ್ರೆಯಿಂದ ಪೂಜೆಯಾಗುವುದರಿಂದ ಅನಂತ ಪುಣ್ಯ ಪ್ರಾಪ್ತಿಯಾಗುವುದು.ಈ ಮಾಸದಲ್ಲಿ ಶಿವಾಲಯದಲ್ಲಿ ಪ್ರದೋಷದ ಸಮಯದಲ್ಲಿ ಎಳ್ಳೆಣ್ಣೆ ದೀಪ ವನ್ನು ಹಚ್ಚುವುದರಿಂದ ಶುಭ ಪ್ರಾಪ್ತಿಯಾಗುತ್ತದೆ.

**ನಾರಾಯಣ ಕೃಪೆ**

ಪ್ರತಿದಿನ ಭಗವದ್ಗೀತೆಯನ್ನು ಪಠಿಸಬೇಕು.ಇದನ್ನು ಪಠಿಸುವುದ ರಿಂದ,ಮನಸ್ಸು ಶಾಂತವಾಗಿರುತ್ತದೆ ಮತ್ತು ಭಗವಾನ್ ನಾರಾಯಣ ಕೂಡ ನಿಮ್ಮನ್ನು ಆಶೀರ್ವದಿಸುತ್ತಾನೆ.ಇದನ್ನು ಮಾಡುವುದರಿಂದ ನಮ್ಮ ಲ್ಲಿರುವ ಎಲ್ಲಾ ಋಣಾತ್ಮಕ ಶಕ್ತಿಗಳು ನಾಶವಾಗುತ್ತದೆ ಮತ್ತು ಇದ ರೊಂದಿಗೆ ಅದೃಷ್ಟವು ಸಹ ನಿಮ್ಮನ್ನು ಬೆಂಬಲಿಸಲು ಪ್ರಾರಂಭಿಸುತ್ತದೆ. ಮಾಘ ತಿಂಗಳಲ್ಲಿ ನಿಯಮಿತವಾಗಿ ಗೀತಾಪಠಣವು ಆಲೋಚನೆ ಮತ್ತು ತಿಳುವಳಿಕೆಯ ಶಕ್ತಿಯನ್ನು ಹೆಚ್ಚಿಸುತ್ತದೆ.

ವಿಷ್ಣು ಮತ್ತು ತುಳಸಿಯನ್ನು ನಿಯಮಿತವಾಗಿ ಪೂಜಿಸುವ ವಿಶೇಷ ಪದ್ಧತಿಯಿದೆ, ಹಾಗೂ ಬೆಳಗ್ಗೆ - ಸಂಜೆ ವಿಷ್ಣುವಿಗೆ ದೀಪಗಳನ್ನು ಬೆಳಗಿಸಬೇಕು.ಇದನ್ನು ಮಾಡುವುದರಿಂದ, ಮನೆಯಲ್ಲಿ ನಕಾರಾತ್ಮಕ ಶಕ್ತಿಯನ್ನು ತೆಗೆದುಹಾಕಲಾಗುತ್ತದೆ. ಮಾಘ ಮಾಸದಲ್ಲಿ ಭಗವಾನ್ ವಿಷ್ಣುವಿಗೆ ನಿಯಮಿತವಾಗಿ ಎಳ್ಳು ಅರ್ಪಿಸಿ, ದೇವರನ್ನು ಎಳ್ಳಿನಿಂದ ಪೂಜಿಸುವ ಮೂಲಕ ಮತ್ತು ಎಳ್ಳನ್ನು ದಾನವಾಗಿ ನೀಡುವುದರ ಮೂಲಕ ನಮ್ಮೆಲ್ಲಾ ಪಾಪದ ಪರಿಣಾಮವು ಕ್ಷೀಣಿಸಲು ಪ್ರಾರಂಭಿ ಸುತ್ತದೆ.


ಪುಷ್ಯಮಾಸದ ಶುಕ್ಲ ಏಕಾದಶಿ,ದ್ವಾದಶಿ ಅಥವಾ ಹುಣ್ಣಿಮೆ ಯಂದು ಪ್ರಾರಂಭಿಸಲಾದ ಮಾಘಸ್ನಾನವನ್ನು ಮಾಘಮಾಸದ ದ್ವಾದಶಿ ಅಥವಾ ಹುಣ್ಣಿಮೆಯಂದು ಸಮಾಪ್ತಿ ಗೊಳಿಸಲಾಗುತ್ತದೆ.

# ಕನ್ನಡ ನಾಡಿನ ಹೆಮ್ಮೆ - ಆಚಾರ್ಯ ಮಧ್ವರ ತತ್ವವಾದದ ಹಿರಿಮೆ

– ಪ್ರಣವ

ಶ್ರೀ ಮಧ್ವಾಚಾರ್ಯರ ದಿವ್ಯ ಜೀವನದ ಭವ್ಯ ಸಂದೇಶ ಸಾರುವ ಶ್ರೀಮಧ್ವವಿಜಯ.

ಶ್ರೀ ಮಧ್ವಾಚಾರ್ಯರು ಭವ್ಯ ಜೀವನವನ್ನು ಚಿತ್ರಿಸಿದ ಆಕರ ಗ್ರಂಥ ಸುಮಧ್ವವಿಜಯ. ಇದರ ಕೃರ್ತವು ಶ್ರೀತ್ರಿವಿಕ್ರಮ ಪಂಡಿತರ ಪುತ್ರರಾದ ನಾರಾಯಣ ಪಂಡಿತರು. ಇದೊಂದು ಮಹಾಕಾವ್ಯ. ಶಾಸ್ತ್ರಕಾವ್ಯವೂ ಹೌದು. ಪ್ರಾಮಾಣಿಕವಾದ ಅಧ್ಯಯನ ಗ್ರಂಥವೂ ಆಗಿದೆ. ಐತಿಹಾಸಿಕ ಹಿನ್ನೆಲೆಯ ಅಧಿಕೃತವಾದ ಗ್ರಂಥವೆನಿಸಿದೆ. ಸಂಸ್ಕೃತ ಸಾಹಿತ್ಯ ಪ್ರಪಂಚದಲ್ಲಿ ವಿಶಿಷ್ಟ ಸ್ಥಾನ ಪಡೆದು ಶ್ರೇಷ್ಠ ಕಾವ್ಯವೆನಿಸಿದೆ. ಇಂತಹ ಸುಮಧ್ವವಿಜಯದ ನಾಯಕರು ವಿಶ್ವಕ್ಕೆ ರಕ್ಷಕರಾದ ಮುಖ್ಯ ಪ್ರಾಣಾವತಾರರಾದ ಶ್ರೀಮದಾನಂದತೀರ್ಥರು,ಇವರು ಸರ್ವಜ್ಞರು, ಸರ್ವಗುಣೋಪೇತರು, ಸರ್ವದೇವ ವಂದಿತರು. ಸರ್ವಲಕ್ಷಣ ಭರಿತರು, ಸರ್ವಶಾಸ್ತ್ರ ವಿಶಾರದರು. ಸರ್ವಕಲಾ ಸಿದ್ಧಿ ಸಂಪನ್ನರು. ಸರ್ವಜನ ಪೋಷಕರು, ಸರ್ವ ಮೂಲಕಾರರು,ಸರ್ವೋತ್ತಮನ ನಿಜ ದಾಸರು. ಜೀವೋತ್ತಮರಾದ ಇವರು ಭಗವಂತನ ಅಜ್ಞಾನುಸಾರ ಸಜ್ಜನರನ್ನುದ್ಧರಿಸಲೆಂದು ಧರೆಗಿಳಿದು ಬಂದ ಮಹಾಪುರುಷರು. ಇವೆಲ್ಲವುಗಳ ನಿರೂಪಣೆ ಯಥಾರ್ಥವಾಗಿ ಅನೇಕ ಮಹಾತ್ಮೆಗಳೊಂದಿಗೆ ಈ ಸುಮಧ್ವವಿಜಯದಲ್ಲಿ ಸುಂದರವಾಗಿ,ಸಮರ್ಪಕವಾಗಿ ಚಿತ್ರಿತಗೊಂಡಿದೆ. ಮಂತ್ರ ತುಲ್ಯವಾದ ಸಕಲಾಭೀಷ್ಟಪ್ರದವಾದ ಈ ಕೃತಿಯು ನಿತ್ಯಪಾಠ-ಪಠಣ ಪಾರಾಯಣ ಗ್ರಂಥವಾಗಿ ಪರಂಪರೆಯಲ್ಲಿ ಮಾನ್ಯವಾಗಿದೆ. ಈ ಕೃತಿಯು ಹದಿನಾರು ಸರ್ಗಗಳನ್ನೊಳಗೊಂಡು 1008 ಶ್ಲೋಕಗಳಿಂದ-ಕೂಡಿದೆ. ಶ್ರೀಮಧ್ವಾಚಾರ್ಯರ ದಿವ್ಯ ಜೀವನದ ಭವ್ಯತೆಯನ್ನು ನಾನಾ ಮುಖಗಳಿಂದ ಪ್ರತಿಪಾದಿಸಿದ ದ್ವೈತಸಿದ್ಧಾಂತದ ಪ್ರಮೇಯಗಳ ಪ್ರತಿಪಾದನೆಯನ್ನೂ ಒಳಗೊಂಡಿದೆ.



ಇಂತಹ ಪವಿತ್ರತಮವಾದ ಸುಮಧ್ವವಿಜಯದ ಅಧ್ಯಯನ-ಅಧ್ಯಾಪನ ಸಕಲ ಮಾಧ್ವರ ನಿಯತಕರ್ಮ. ಮೂಲ ಗುರುಗಳನ್ನೇ ತಿಳಿಯದವನು ಗುರೂಪದೇಶಕ್ಕೆ, ಗುರುಕೃತ ಗ್ರಂಥ ಅಧ್ಯಯನ,ನಿತ್ಯಕರ್ಮಾನುಷ್ಠಾನಾದಿಗಳಿಗೆ ಎಂದಿಗೂ ಅರ್ಹನಾಗಲಾರ, ಶ್ರೀಮಧ್ವರ ಅವತಾರ ಲೀಲೆಗಳು, ತೋರಿದ ಪವಾಡಗಳು, ಹಾಡಿದ ಗೀತೆಗಳು,ಬೋಧಿಸಿದ ತತ್ತ್ವಗಳು ರಚಿಸಿದ ಗ್ರಂಥರಾಶಿ, ಮಾಡಿದ ಜನೋಪಕಾರ ಬೆಳೆಸಿದ ಸತ್ಪರಂಪರೆ ಮೊದಲಾದವುಗಳ ಸ್ಮರಣೆ ಕೀರ್ತನೆಯು ನಮ್ಮ ಜನ್ಮಸಾಫಲ್ಯ ಇವುಗಳನ್ನು ತಿಳಿಸಿಕೊಟ್ಟ ಸುಮಧ್ವವಿಜಯವು ವಿಶೇಷವಾಗಿ ಮಾನ್ಯ. 79 ವರ್ಷಗಳ ಕಾಲ ಸಾರ್ಥಕ ಬದುಕನ್ನು ಬಾಳಿ ಪಿಂಗಲ ಸಂವತ್ಸರದ (ಕ್ರಿ.ಶ. 1317)ಮಾಘ ಶುದ್ಧ ನವಮಿಯಂದು ನಿರ್ಯಾಣ ಹೊಂದಿದ ಸ್ಮರಣೆಗೆ ಮಧ್ವನವಮಿಯಾಗಿ ಆಚರಿಸಲಾಗುತ್ತದೆ.

ಜಗನ್ನಾಥನನ್ನು ಜಗತ್ತಿಗೆ ಪರಿಚಯಿಸಿಕೊಟ್ಟವರು ಶ್ರೀಮದಾನಂದತೀರ್ಥರು. ಇವರು ಭಗವಂತನ ಪ್ರತಿಬಿಂಬರು, ಸರ್ವಜ್ಞಕಲ್ಪರು, ವೇದಪ್ರತಿಪಾದ್ಯರು. ಜೀವೋತ್ತಮರೆನ್ನಿಸಿದ ವಾಯುದೇವರ ಮೂರನೆಯ ಅವತಾರರಾದ ಇವರು ಸಕಲ ಜೀವರಿಗೆ ತ್ರಾಣರು-ಪ್ರಾಣರು. ಅದಕ್ಕೆ ವೇದಗಳು ಇವರನ್ನು ಅಮೃತವೆಂದು ಸಾರಿವೆ. ಶ್ರೀಮಧ್ವಾಚಾರ್ಯರನ್ನು ತಿಳಿಯದೆ ಭಗವಂತನನ್ನು ತಿಳಿಯಲಾಗದು. ದೋಷರಹಿತರಾದ ಇವರು ಮಾತ್ರ ದೋಷದೂರನಾದ ಭಗವಂತನನ್ನು ಗುಣಪೂರ್ಣನೆಂದು ಸಮರ್ಥಿಸಬಲ್ಲರು. ಪೂರ್ಣಪ್ರಜ್ಞರೆಂಬ ಅನ್ವರ್ಥಕ ನಾಮಧೇಯರಾದ ಶ್ರೀಮಧ್ವರು ತಿಳಿಯದ್ದು ಇಲ್ಲ, ತಿಳಿಸದ್ದೂ ಇಲ್ಲ. ಇವರ ಸರ್ವಮೂಲ ಗ್ರಂಥಗಳು ಸರ್ವಕ್ಕೂ ಮೂಲವಲ್ಲದೆ ಅವರ ದಿವ್ಯಾಕೃತಿಯೇ ಆಗಿದೆ. ಶ್ರೀಮಧ್ವಾಚಾರ್ಯರ ಜೀವನ ಗಾಥೆಯ ಒಂದೊಂದು ಬಿಂದುವೂ ಅವರ ಗ್ರಂಥದ ಪ್ರತ್ಯಕ್ಷರದಷ್ಟೇ ಪೂರ್ಣ, ಪವಿತ್ರ ಅದಕ್ಕೆ ಇವರು ಜಗದ್ಗುರುಗಳೆನಿಸಿದರು. ಆಧ್ಯಾತ್ಮ ಪ್ರಪಂಚಕ್ಕೆ ಅಧ್ಯಕ್ಷರಾದರು. ಸಾರ್ವಭೌಮರಾದರು. ಹೀಗಾಗಿ

ಇವರ ಸಿದ್ಧಾಂತ ಅಂತಿಮ ಸಿದ್ಧಾಂತವೆನಿಸಿತು.ಶ್ರೀಹರಿಯ ಪಾರಮ್ಯವನ್ನು ಪ್ರಕಟಿಸಿದ ಪ್ರಥಮ ದಾರ್ಶನಿಕರೆನ್ನಿಸಿದರು.

ಆಚಾರ್ಯಮಧ್ವರು ತತ್ತ್ವವಾದವನ್ನು ಲೋಕಕ್ಕೆ ಅರುಹಿದವರು.ದ್ವೈತಸಿದ್ಧಾಂತವನ್ನು ಸ್ಥಾಪಿಸಿ ಪ್ರಚುರ ಪಡಿಸಿದ್ದು ಇದೀಗ ಲೋಕಶ್ರುತ. ದ್ವೈತ ಎಂಬುದು ಈಚೆಗೆ ಬಳಕೆಗೆ ಬಂದ ಮಾತು. ಈ ಸಿದ್ಧಾಂತವು "ತತ್ತ್ವವಾದ" ವೆಂದೇ ಪ್ರಸಿದ್ಧಿಯಾಗಿತ್ತು. ಈ ನಡುವೆ 'ಭೇದವಾದ' ವೆಂದು ಕರೆದದ್ದೂ ಉಂಟು. ಆದರೆ,ಯತಿತ್ರಯರಲ್ಲಿ ಆಚಾರ್ಯಮಧ್ವರ ಗ್ರಂಥಗಳಷ್ಟೇ ಪ್ರಾಮುಖ್ಯತೆಯನ್ನು ಪಡೆದಿವೆ. ಆಚಾರ್ಯಮಧ್ವರು ಉಡುಪಿ ಸಮೀಪದ 'ಪಾಜಕ' ಕ್ಷೇತ್ರಕ್ಕೆ ಸೇರಿದವರು. ಶ್ರೀಕೃಷ್ಣ ಉಡುಪಿಯ ಅಧಿದೈವವಾಗಿ ಬೆಳಗಿದಂತೆ, ಆಚಾರ್ಯಮಧ್ವರು ಉಡುಪಿಗೆ ತತ್ತ್ವ ವಾದದ ಬೆಳಕನ್ನು ಹರಿಸಿದರು.ಇಂಥ ಯತಿಗಳು ಶ್ರೀಮನ್ನಾರಾ ಯಣರಲ್ಲಿ ಒಂದಾಗಿ 700 ವರ್ಷಗಳಾದುವು.ಅವರ ವ್ಯಕ್ತಿತ್ವ ವನ್ನು ಸಮೀಪದಿಂದ ಕೇಳಿದ್ದ, ಪ್ರವಚನದ ಮೋಡಿ ಕವಿದ ಕತ್ತಲೆಯನ್ನು ಕಳೆಯಿತು. ಶ್ರುತಿ ಇರಲಿ, ಭಾರತವೇ ಇರಲಿ ಓದುವ ಬೆಡಗು ಅನನ್ಯ. ಆಚಾರ್ಯ ಮಧ್ವರು ತತ್ತ್ವವಾದವನ್ನು ಹಾಗೂ ಲೋಕಕ್ಕೆ ಬೇಕಾದ ಎಲ್ಲ ವಿದ್ಯೆಗಳನ್ನು ಸಮಾಗಮಗೊಳಿಸಿದರು. ಇದು ಆನಂದತೀರ್ಥರ ಹಿರಿಮೆ. ನಮ್ಮ ಬದುಕನ್ನು ಗಟ್ಟಿಯಾಗಿ ಬೆಳಗಿಸಿಕೊಳ್ಳಬೇಕು. ಭಗವಂತನ ಉಪಾಸನೆಯಲ್ಲಿ ಅನನ್ಯ ನಿಷ್ಠೆಯನ್ನು ಇಟ್ಟುಕೊಳ್ಳಬೇಕು. ಈ ಸೂತ್ರವನ್ನು ಹೇಳಿ ಬದುಕಿಗೆ ಭರವಸೆಯ ಬೆಳಕನ್ನು ತುಂಬಿದ ಆಚಾರ್ಯರು ನಿಜಾರ್ಥದಲ್ಲೂ "ಪೂರ್ಣಪ್ರಜ್ಞರೇ' ಸರಿ!

**ಭಾರತದ ಆಚಾರ್ಯ ಪುರುಷರ ಮಾಲಿಕೆಯಲ್ಲಿ ಮೂವರು ಹೆಚ್ಚು ಖ್ಯಾತರಾದವರು:**

ಅದ್ವೈತ ಮತ ಸ್ಥಾಪಕರಾದ ಆಚಾರ್ಯ ಶಂಕರರು, ವಿಶಿಷ್ಟಾದ್ವೈತ ಮತ ಸ್ಥಾಪಕರಾದ ಆಚಾರ್ಯ ರಾಮಾನುಜರು ಮತ್ತು ತತ್ತ್ವವಾದ ಸ್ಥಾಪಕರಾದ ಆಚಾರ್ಯಮಧ್ವರು.'ಈ ವಿಶ್ವ ಬರಿಯೆ ಮಾಯೆ;ಭಗವಂತನೊಬ್ಬನೇ ಸತ್ಯ ಎಂದರು ಆಚಾರ್ಯ

**ಪ್ರಾಚೀನ ಗ್ರಂಥಗಳಲ್ಲಿ ಆಚಾರ್ಯಮಧ್ವರ ಸಿದ್ಧಾಂತ ವನ್ನು ದ್ವೈತವಾದ ಎನ್ನುವ ಬದಲು ತತ್ತ್ವವಾದ ಎಂದೇ ಕರೆ ದಿದ್ದಾರೆ. ಈ ಜಗತ್ತು ಕನಸಿನ ಮಾಯೆಯಲ್ಲ, ಭಗವಂತನು ಜಾದೂಗಾರನೂ ಅಲ್ಲ, ಅವನು ಸತ್ಯಕರ್ಮ, ಇದು ಭಗವಂತನ ಸತ್ಯಸೃಷ್ಟಿ. ಆದ್ದರಿಂದ ಇದೂ ಒಂದು ಸತ್ಯತತ್ತ್ವ ಭಗವಂತನ ಮಹಿಮೆಯನ್ನರಿಯುವ ಶಿಕ್ಷಣ ಶಾಲೆ' ಎನ್ನುವ ವಾದವನ್ನು ಮಂಡಿಸಿದ್ದರಿಂದ ಇದಕ್ಕೆ ತತ್ತ್ವವಾದ ಎಂದು ಹೆಸರಾಯಿತು.**




ಶಂಕರರು. 'ವಿಶ್ವಾತ್ಮನಾದ ಭಗವಂತನಿಗೆ ಈ ವಿಶ್ವವೇ ಶರೀರ ವಿದ್ದಂತೆ ಆದರಿಂದ ಇದು ಸತ್ಯ ಎಂದರು ಆಚಾರ್ಯ ರಾಮಾನುಜರು.ಈ ಜಗತ್ತು ಭಗವಂತನ ಲೀಲಾಸೃಷ್ಟಿ ಇದನ್ನು ಅಪಲಾಪ ಮಾಡಿ ಅವನ ಮಹಿಮೆಗೆ ಅಪಚಾರ ಮಾಡಬೇಡಿ ಎಂದರು ಆಚಾರ್ಯಮಧ್ವರು.

ತಮ್ಮ ತತ್ತ್ವವಾದವನ್ನು ಜನರಿಗೆ ತಿಳಿಯಪಡಿಸಲು ಆಚಾರ್ಯರು ಪ್ರಸ್ಥಾನತ್ರಯ (ಗೀತೆ, ದಶೋಪನಿಷತ್ತುಗಳು ಮತ್ತು ಬ್ರಹ್ಮಸೂತ್ರ)ಗಳಿಗೆ ಭಾಷ್ಯ ಬರೆದರು. ಮಹಾಭಾರತ, ಪುರಾಣಗಳ ತಾತ್ತ್ವಿಕ ವಿಮರ್ಶೆಗಾಗಿ 'ಮಹಾಭಾರತ ತಾತ್ಪರ್ಯ ನಿರ್ಣಯ ಬರೆದರು. ಭಾಗವತಕ್ಕೆ ತಾತ್ಪರ್ಯ ಬರೆದರು ಋಗ್ವೇದಕ್ಕೆ ಭಾಷ್ಯ ಬರೆದರು.ಯಮಕ ಕಾವ್ಯವೊಂದನ್ನು ಹಾಡುಗಬ್ಬಗಳನ್ನೂ ರಚಿಸಿದರು.ಪುರಾಣ ಶ್ಲೋಕಗಳನ್ನು ಸಂಗ್ರಹಿಸಿ 'ಕೃಷ್ಣಾಮೃತಮಹಾರ್ಣವ' ಬರೆದರು. ವಾಸ್ತುಶಿಲ್ಪ- ಪ್ರತಿಮಾ ಶಿಲ್ಪದ ಅಪೂರ್ವ ವಿವರಗಳನ್ನೊಳಗೊಂಡ ತಂತ್ರಸಾರ ಸಂಗ್ರಹ ಬರೆದರು. ಇಷ್ಟೇ ಅಲ್ಲದೆ, ಅವರ ಸಂಗೀತದಲ್ಲೂ ಅವರ ವಿದ್ವತ್ತು

ನಾರಾಯಣ ಪಂಡಿತಾ ಚಾರ್ಯರು 'ಶ್ರೀಮದ್ವಜಯ' ಎಂಬ ಜೀವನ ಚರಿತ್ರೆಯನ್ನು ಬರೆದು ಆಚಾರ್ಯರ ಚರಿತ್ರೆಯನ್ನು ದಾಖಲುಗೊಳಿಸಿದ್ದಾರೆ. ಇದು ಒಂದು ಕಡೆ ಚರಿತ್ರೆ ಮತ್ತೊಂದೆಡೆ ಕಾವ್ಯವಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಇದೊಂದು ಅಪೂರ್ವ ಕೃತಿ ಎನಿಸಿದೆ.

ಆಚಾರ್ಯರು ಮೊದಲಿಗೆ ವೇದಕ್ಕೆ ಮೂರರ್ಥವನ್ನು ಮಹಾ ಭಾರತಕ್ಕೆ ಹತ್ತು ಅರ್ಥಗಳನ್ನು ವಿಷ್ಣು ಸಹಸ್ರನಾಮಕ್ಕೆ ನೂರು ಅರ್ಥಗಳನ್ನು ಹೇಳಿ ಇತಿಹಾಸವನ್ನು ನಿರ್ಮಿಸಿದರು. (ತ್ರ್ಯರ್ಥತಾಂ ಶ್ರುತಿಷು, ವಿತ್ತ ದಶಾರ್ಥಮ್ ಭಾರತ,ನನು ಶಾತಾರ್ಥಮಪಿ ಸ್ಯಾದೇತಿ ವೈಷ್ಣವ ಪದಸಹಸ್ರಂ ತಯಂ) ಅವರ

ಅಸಾಧಾರಣವಾಗಿತ್ತು. ಶ್ರೇಷ್ಠ ಗೇಯಕಾವ್ಯವಾದ ದ್ವಾದಶ ಸ್ತೋತ್ರಗಳ ರಚನೆ, ಇಷ್ಟೇ ಅಲ್ಲದೆ ಅವರ ಜೀವನದ ಒಂದು ಘಟನೆಯೂ ಇದಕ್ಕೆ ಸಾಕ್ಷಿ ಹೇಳುತ್ತದೆ.

ಗೋವೆಯಿಂದ ಹೊರಟ ಆಚಾರ್ಯರು ಪಶುವೆ ಎಂಬಲ್ಲಿ ತಂಗಿದ್ದರು. ಆಚಾರ್ಯರ ಕಂಠ ಮಾಧುರ್ಯ ಸಂಗೀತ ಪಾಂಡಿತ್ಯಗಳ ಬಗೆಗೆ ತಿಳಿದಿದ್ದ ಜನ ಅವರ ಸಂಗೀತವನ್ನೇ ಕೇಳ ಬಯಸಿದರು. ಅವರ ಬಯಕೆಯಂತೆ ಅನೇಕ ಹಾಡು ಗಬ್ಬಗಳ ರಚಿಸಿ ಆಚಾರ್ಯರು ಹಾಡತೊಡಗಿದರು. ಕೇಳಿದ ಜನ ಮೈಮರೆಯುವಂತಹ ಮಾಧುರ್ಯ ಕರ್ನಾಟಕ ಸಂಗೀತ ಪರಂಪರೆಗೆ ನಾಂದಿ ಹಾಡಿದ್ದಾರೆ. ಹೀಗೆ ಆಚಾರ್ಯರು ತಮ್ಮ ಜೀವನದುದ್ದಕ್ಕೂ ಭಗವಂತನ ಗುಣಗಾನವನ್ನು ಮಾಡಿದರು. ಈ ಕಾರ್ಯಕ್ಕೆ ಎದುರಾದ ಅಡ್ಡಿ-ಆತಂಕಗಳನ್ನು ಧೀರತೆಯಿಂದ ಎದುರಿಸಿದರು. ಚಿಕ್ಕ ಹುಡುಗನಾಗಿದ್ದಾಗಲೆ ತಮ್ಮನ್ನು ಕಡಿಯಲೆಂದು ಬಂದ ಕಾಳಿಂಗ ಸರ್ಪವನ್ನು ಕಾಲದಲ್ಲಿ ಹೊಸಕಿ ಹಾಕಿದ ಆಚಾರ್ಯರಿಗೆ ಭಯವೆಂದರೇನೆಂದು ತಿಳಿಯದು. ಅವರು ಯಾವ ಆತಂಕಕ್ಕೂ ಎದೆಗೆಡಲಿಲ್ಲ, ಎಂದೂ ಇನ್ನೊಬ್ಬರಿಗೆ ತಲೆಬಾಗಲಿಲ್ಲ. ತಮ್ಮ ಜೀವನದ ಉದ್ದೇಶ ಅವರಿಗೆ ಸ್ಫುಟವಾಗಿತ್ತು, ಅದನ್ನು ಸಾಧಿಸುವ ಬಗೆಯೂ ತಿಳಿದಿತ್ತು, ತಾವು ಧೀರ ಸಂನ್ಯಾಸಿಯಾಗಿ ಬದುಕಿದರು. ತನ್ನ ಬಳಿ ಬಂದವರಿಗೆಲ್ಲ ಭರವಸೆಯನ್ನು ತುಂಬಿದರು.

## ಭಕ್ತಿ ಸಿದ್ಧಾಂತದ ಮೇರುಪರ್ವತ ಮಧ್ವಾಚಾರ್ಯರು

ವ್ಯಾಸಕೂಟ ದಾಸಕೂಟಗಳನ್ನು ಏರ್ಪಡಿಸಿ ಜಾನಪದ ಸಾಮಾನ್ಯ ಜನರಿಗೂ ವೇದಾಂತಾರ್ಥಗಳನ್ನು ಮನಮುಟ್ಟುವಂತೆ ಪ್ರಾಚೀನ ಹರಿದಾಸ ಪರಂಪರೆಯನ್ನು ಕನ್ನಡ ನಾಡಿನಲ್ಲೂ, ಆಂಧ್ರ ಮಹಾರಾಷ್ಟ್ರಗಳಲ್ಲೂ ಬೆಳಸಿದುದು. (ಶ್ರೀಕೂರ್ಮ ಶಾಸನಾದಿಗಳ ಆಧಾರ)

1. ಶೈವ -ಶಾಕ್ತ ಆಕ್ರಮಣಗಳಿಂದ ಶಿಥಿಲವಾದ ವೈಷ್ಣವ ದೇವಾಲಯ ವ್ಯವಸ್ಥೆಗಳನ್ನು ಶಿಷ್ಯರಾದ ನರಹರಿ ತೀರ್ಥ ಮುಂತಾದವರಿಂದ ಸರಿಪಡಿಸಿ ಶೈವ-ವೈಷ್ಣವ ಅನ್ಯೋನ್ಯತೆಯ ವ್ಯವಸ್ಥೆಯನ್ನು ಮುಂದುವರೆಸಿದುದು.

2. ವಿಶ್ವವು ಮಿಥ್ಯೆಯೆಂಬ ವಾದವನ್ನು ಖಂಡಿಸಿ ರಾಷ್ಟ್ರವು ಸತ್ಯವಾದುದರಿಂದಲೇ ಆಧ್ಯಾತ್ಮಿಕರಿಗೆ ಸಮಾಜಸೇವೆ ಮುಖ್ಯವೆಂದು ಪ್ರಾತ್ಯಕ್ಷಿಕವಾಗಿ ಯುಕ್ತಿಗಳಿಂದ ತೋರಿಸಿದುದು.

3. ತಮ್ಮ ಅಣಿಮಾದಿ ಯೋಗಸಿದ್ಧಿಗಳ ಮೂಲಕ ಅನೇಕ ಸಾಮಾಜಿಕ ಕಾರ್ಯಗಳನ್ನು ಸಾಧಿಸಿದುದು.

4. ಉಡುಪಿ ಶ್ರೀಕೃಷ್ಣನನ್ನು ಸ್ಥಾಪಿಸಿ ಸರ್ವ ಸುಲಭನಾದವನು ಆಚಾರ್ಯರೂಪದ ಕೃಷ್ಣನೆಂದು ತಿಳಿಸಿ ವ್ಯಾಸ ಕೂಟದವರ ಎಂಟು ಮಠಗಳನ್ನು ದೇವಾಲಯ ವ್ಯವಸ್ಥೆಗಾಗಿ ಸ್ಥಾಪಿಸಿದುದಲ್ಲದೇ, ದಾಸಕೂಟದ ಹದಿನೆಂಟು ಜಾತಿ ಜನರಿಗೂ ತಕ್ಕ ನಾಮ ಸಂಕೀರ್ತನ, ಪ್ರದಕ್ಷಿಣ, ನಮಸ್ಕಾರ ಮಂದಿರ ಶುದ್ಧೀಕರಣ, ಪುಷ್ಪವನ, ಪುಷ್ಪಮಾಲಾ ಸಮರ್ಪಣ ರಥ ಸಂಕರ್ಷಣ ಮುಂತಾದ ಸೇವೆಗಳಿಗೆ ಅವಕಾಶ ಮಾಡಿಕೊಟ್ಟಿರುವುದು.

5. ಭಾರತದಾದ್ಯಂತ ಸಂಚರಿಸಿ ವೇದಾಂತವನ್ನು ಧರ್ಮವನ್ನು ತರ್ಕದಿಂದ ಸಾಣೆ ಹಿಡಿದು ತೀಕ್ಷ್ಣಗೊಳಿಸಬೇಕೆಂಬ ಮಾನವಮೂಲ ಪುರುಷರಾದ ಮನುವಿನ ಮಾತನ್ನು ದೃಢಪಡಿಸಿ ಸಮಾಜದಲ್ಲಿ ಬೌದ್ಧಿಕಶಕ್ತಿಯ ವಿದ್ಯುತ್ ಸಂಚಾರ ಮಾಡಿಸಿದುದು.

6. ಆಧ್ಯಾತ್ಮಿಕ ಸಾಧನೆಯ ಮಾರ್ಗದಲ್ಲಿ ವಸ್ತು ಸ್ಥಿತಿಯನ್ನು ಗಮನಿಸಬೇಕೆಂಬ ಮುಖ್ಯಾಂಶವನ್ನು ತಿಳಿಸಿ ತಲೆಗಳಿಗೆಲ್ಲಾ ಒಂದೇ ಅಳತೆಯ ಟೊಪ್ಪಿಗೆ ಎಂಬ ಅನುಚಿತ ಮಾರ್ಗ ಹಿಡಿಯಬಾರದೆಂದೂ, ಭಗವದ್ಭಕ್ತಿಯೆಂಬ ಟೊಪ್ಪಿಗೆ ಎಲ್ಲರಿಗೂ ಇರಲೆಂದೂ ಭಕ್ತಿಯ ಅಂಗವಾದ ಕರ್ಮಗಳು ಅವರವರ ಹುಟ್ಟು ಪರಿಸರಗಳಿಗೆ ತಕ್ಕಂತೆ ಇರಬೇಕಾದುದು ಲೌಕಿಕವಾಗಿಯೂ ಶಾಸ್ತ್ರೀಯವಾಗಿಯೂ ಸರಿಯಾದುದೆಂದು ತಿಳಿಸಿ, ಭಕ್ತಿಯ ಅಧಿಕಾರದಲ್ಲಿ ಸಕಲ ಜಾತಿಯ ಜನರಿಗೂ ತಮಗೆ ತಕ್ಕಂತಹ ವೃತ್ತಿಗಳು ತಾರತಮ್ಯಗಳಿಂದ ಕೂಡಿದ್ದರೂ ಫಲಿತಾಂಶಕ್ಕೆ ಬಾಧಕವಿಲ್ಲವೆಂಬ ತತ್ವವನ್ನು ದೃಢೀಕರಿಸಿದುದು ಮತ್ತು ಆಚರಣೆಗೆ ತಂದುದು.

7. ಅದ್ವೈತಕ್ಕೆ ವಿರುದ್ಧವಾಗಿ ದ್ವೈತ ಎಂಬುದು ಮೇಲ್ನೋಟಕ್ಕೆ ಕಂಡು ಬಂದರೂ ಕೂಡ, ದೇವರು ಒಬ್ಬನೇ ಒಬ್ಬ ಎಂಬ ಅದ್ವೈತಕ್ಕೆ ರಾಜನೊಬ್ಬನೇ ರಾಷ್ಟ್ರಪತಿ ಎನ್ನುವಂತೆ, ಸಮಸ್ತ ಪ್ರಜೆಗಳ ಸಹಕಾರವೂ ಅವಶ್ಯಕವೆಂಬಂತೆ ಸಕಲವಿಧಜನರ ಪುಣ್ಯ ಕರ್ಮಗಳು ನಾನಾ ವಿಧವಾಗಿ ದೇವರಲ್ಲಿ ಮುಖ್ಯ ಭಕ್ತಿಯನ್ನೇ ಪೋಷಿಸುವುದರಿಂದ ವಿಶ್ವದ ಕರ್ಮಗಳಿಗೂ ವಿಶ್ವವೂ ಸುಳ್ಳಲ್ಲ ನಿಜ ಎಂಬ ಪ್ರಜ್ಞೆಯನ್ನು ಎಚ್ಚರಗೊಳಿಸಿ ಸಮಾಜದಲ್ಲಿ ಐಕಮತ್ಯದಲ್ಲಿ ನಾನಾ ಪ್ರಕಾರಗಳ ವಾಸ್ತವ ಅನುಸರಣೆಗೆ ಅವಕಾಶ ಮಾಡಿಕೊಟ್ಟುದ್ದು.





# ಉಪ್ಪಿಲಿಯಪ್ಪನ್ ಒಪ್ಪಿಲಾವೈಭವಂ

ಡಾ॥ ಸಿ. ಎಸ್. ಊರ್ಮಿಳಾ
93804 26830

ನೂರೆಂಟು ಶ್ರೀ ವೈಷ್ಣವರ ಪವಿತ್ರ ಕ್ಷೇತ್ರಗಳಲ್ಲಿ ಉಪ್ಪಿಲಿಯಪ್ಪನ್ ಸನ್ನಿಧಿಯು ಸುಪ್ರಸಿದ್ಧವಾದದು. ಈ ದೇವಾಲಯವು ಪೌರಾಣಿಕ ಆದ್ಯತೆಯನ್ನು ಪಡೆದಿದೆ.ಇದರ ಬಗ್ಗೆ ಬ್ರಹ್ಮಾಂಡ ಪುರಾಣದಲ್ಲಿ ಬಂದಿದೆ. ಈ ದೇವಾಲಯದ ಬಗ್ಗೆ ಬ್ರಹ್ಮನು ನಾರದ ಮತ್ತು ಮತ್ತಿತರ ದೇವತೆಗಳಿಗೆ ತಿಳಿಸಿದ್ದಾನೆ.

ಈ ಉಪ್ಪಿಲಿಯಪ್ಪನ್ ಸನ್ನಿಧಿಯು ತಂಜಾವೂರು ಜಿಲ್ಲೆಯ ಕುಂಭಕೋಣದಿಂದ 3 ಮೈಲಿ ಪೂರ್ವದಲ್ಲಿದೆ. ಈ ದಿವ್ಯ ಕ್ಷೇತ್ರದ ಬಗ್ಗೆ ಮೂವರು ಆಳ್ವಾರರು ಸ್ತುತಿಸಿದ್ದಾರೆ. ಇದನ್ನು ತಿರುವಿಣ್ಣಹರ್ ಎಂದು ಹೇಳುವುದುಂಟು.ಇದನ್ನು ದಕ್ಷಿಣ ತಿರುವೆಂಗಡಂ ದಕ್ಷಿಣ ತಿರುಪತಿ ಎಂದೂ ಕರೆಯುತ್ತಾರೆ. ಇದನ್ನು ಮಾರ್ಕಂಡೇಯ ಕ್ಷೇತ್ರವೆಂದೂ ಕರೆಯುತ್ತಾರೆ.

ಒಮ್ಮೆ ಮಾರ್ಕಂಡೇಯ ಮಹರ್ಷಿಗಳು ತಪಸ್ಸನ್ನು ಈ ಕ್ಷೇತ್ರದಲ್ಲಿ ಆಚರಿಸುತ್ತಿದ್ದಾಗ, ಒಂದು ದಿನ ತುಲಸೀವನದಲ್ಲಿ ಒಂದು ಹೆಣ್ಣು ಶಿಶುವನ್ನು ಕಂಡರು. ಆ ಮಗುವಿಗೆ ಮಹರ್ಷಿಗಳು ಭೂಮಿದೇವಿಯೆಂದು ನಾಮಕರಣ ಮಾಡಿದರು. ಈ ಕನ್ಯೆಯು ಪ್ರಾಪ್ತವಯಸ್ಸಿಗೆ ಬಂದಳು. ಆಗ ಫಾಲ್ಗುಣಮಾಸದ ಶ್ರವಣ ನಕ್ಷತ್ರದ ಏಕಾದಶಿಯ ದಿನ ಒಬ್ಬ ವೃದ್ಧನು ಕೋಲನ್ನು ಊರಿಕೊಂಡು ಋಷಿಯ ಬಳಿಗೆ ಬಂದು ತಾನು ಭೂದೇವಿಯನ್ನು ವರಿಸುವುದಾಗಿ ಹೇಳಿದನು.ಋಷಿಗಳು ದಿಗ್ಭ್ರಮೆಗೊಂಡು, ತನ್ನನ್ನು ಕ್ಷಮಿಸಬೇಕೆಂದು ಕೇಳಿಕೊಂಡನು ಏಕೆಂದರೆ ತನ್ನ ಮಗಳಿಗೆ ಅಡುಗೆಗೆ ಉಪ್ಪನ್ನೂ ಸಹ ಸೇರಿಸಲು ತಿಳಿದಿಲ್ಲ. ಇಂತಹವಳನ್ನು ತಾವು ವಿವಾಹ ಮಾಡಿಕೊಳ್ಳುವುದು ಸರಿಯೇ? ಎಂದು ಕೇಳಿದರು. ಗೃಹ ಕೃತ್ಯದ ಬಗ್ಗೆ ಸಾಮಾನ್ಯ ತಿಳುವಳಿಕೆಯಿಲ್ಲವೆಂದು ತಿಳಿಸಿದರು. ಆಗ ವೃದ್ಧನು ಋಷಿಯ ಎದುರಿಗೆ ಶಂಖ, ಚಕ್ರಲಾಂಛನ ಮತ್ತು ವಿವಿಧ ಆಭರಣಗಳಿಂದ ಕೂಡಿ ತನ್ನ ನಿಜರೂಪವನ್ನು ತೋರಿಸಿದನು. ಮಾರ್ಕಂಡೇಯ ಮಹರ್ಷಿಗಳು ಭಗವಂತನನ್ನು ಕಂಡು ಅತ್ಯಂತ ಸಂತಸದಿಂದ ತನ್ನ ಮಗಳಾದ ಭೂದೇವಿಯನ್ನು ಕೊಟ್ಟು ವಿವಾಹಮಾಡಿದನು. ಆಗ ಭಗವಂತನು ಇನ್ನೂ ಮುಂದೆ ತಾನು ಉಪ್ಪನ್ನೇ ಸೇವಿಸುವುದಿಲ್ಲ ಎಂದು ಹೇಳಿ ಭೂದೇವಿಯ ಸಹಿತ ಅಲ್ಲಿಯೇ ನಿತ್ಯ ಸಾನ್ನಿಧ್ಯ ಮಾಡಿ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುವಂತಾದನು. ಅಂದಿನಿಂದ ಇದು ಪ್ರಮುಖವಾದ ಪ್ರಾರ್ಥನಾ ಸ್ಥಳವಾಯಿತು. ಅರ್ಚಾ ಮೂರ್ತಿಯಿರುವ ಈ ದೇವಾಲಯವನ್ನು ವಿಶ್ವಕರ್ಮನೇ ನಿರ್ಮಿಸಿದುದರಿಂದ ಇದಕ್ಕೆ ಆಕಾಶ ನಗರವೆಂದು ಹೆಸರಾಯಿತು.

ಶ್ರೀವೈಷ್ಣವ ಸಂಪ್ರದಾಯದಲ್ಲಿ ನಮ್ಮಾಳ್ವಾರರನ್ನು ಪ್ರಪನ್ನ ಜನಕೂಟಸ್ಥ ಎಂದೇ ಕೀರ್ತಿಸಿದ್ದಾರೆ, ಎಂಬುದು ನಮಗೆಲ್ಲರಿಗೂ ತಿಳಿದ ವಿಷಯ. ಇವರು ಆಳ್ವಾರ್ ತಿರುನಗರಿಯ ಹುಣಿಸೆ ಮರದ ಅಡಿಯಲ್ಲಿ ತಪೋನಿಷ್ಠರಾಗಿ ಕುಳಿತಿರುವಾಗಲೇ 36 ಕ್ಷೇತ್ರಗಳ ಭಗವಂತನ ದಿವ್ಯ ಅರ್ಚಾಮೂರ್ತಿಗಳನ್ನು ದರ್ಶಿಸಿ ಮಂಗಳಾಶಾಸನ ಮಾಡಿದರು. ಅದರಲ್ಲಿ ಉಪ್ಪಿಲಿಯಪ್ಪನ್ ಕ್ಷೇತ್ರವೂ ಒಂದು. ನಮ್ಮಾಳ್ವಾರರು ಈ ಸ್ವಾಮಿಯನ್ನು ತಿರುವಿಣ್ಣಗರಪ್ಪನ್ ಉತ್ಸವಮೂರ್ತಿಯಾಗಿ ಪೊನ್ನಪ್ಪನ್, ಭೋಗ ಮೂರ್ತಿಯಾಗಿ ಮುತ್ತಪ್ಪನ್, ಎನ್ನಪ್ಪನ್, ಮಣಿಯಪ್ಪನ್ ಎಂದು ಐದು ವಿಧವಾಗಿ ಕೊಂಡಾಡಿದ್ದಾರೆ. ಈ ಸ್ವಾಮಿಯ ದಿವ್ಯ ಮಂಗಳ ವಿಗ್ರಹದ ಸೊಬಗನ್ನು ನೋಡಿ ತನ್ ಒಪ್ಪರ್ ಇಲ್ ಅಪ್ಪನ್ ತನಗೆ ಸರಿಸಮಾನರಾರೂ ಇಲ್ಲದ ಸ್ವಾಮಿ ಈ ಒಪ್ಪಿಲಿಯಪ್ಪನ್ ಎಂದು ಕರೆದಿದ್ದಾರೆ.

ಫಾಲ್ಗುಣಮಾಸದ (ಪಂಗುನಿ) ಮಾಸದ ಚಿತ್ತರೈ ನಕ್ಷತ್ರದಲ್ಲಿ ಬ್ರಹ್ಮನೇ ಇತರ ದೇವತೆಗಳ ಒಡನೆ ತಿರುವಿಣ್ಣಗರಕ್ಕೆ ಬಂದು ಬ್ರಹ್ಮೋತ್ಸವದ ಮೇಲ್ವಿಚಾರಣೆಯನ್ನು ನಡೆಸುತ್ತಾನೆ ಎಂಬ ಪ್ರತೀತಿ ಇಂದಿಗೂ ಇದೆ.ಇಲ್ಲಿ ನಡೆಯುವ ಕಲ್ಯಾಣೋತ್ಸವ, ವಸಂತೋತ್ಸವ ಮುಂತಾದವುಗಳಲ್ಲಿ ಭಗವಂತನ ಪಕ್ಕದಲ್ಲಿ ಭೂದೇವಿಯ ಉಪಸ್ಥಿತಿ ಇರುವುದರಿಂದ ಇಲ್ಲಿ ದೇವಿಗೆ ಅಂದರೆ ತಾಯಾರ್ ಸನ್ನಿಧಿಯೆಂದು ಪ್ರತ್ಯೇಕವಾದ ದೇವಸ್ಥಾನ ಇಲ್ಲ.ಇದು ಚೋಳನಾಡಿನ ಪಂಚಕ್ಷೇತ್ರಗಳಲ್ಲಿ ಒಂದಾಗಿದೆ. ಇದು ವಡಗಲೈ ಪಂಥದ ದೇವಾಲಯವಾಗಿರುವುದರಿಂದ ಶ್ರೀವೇದಾಂತ ದೇಶಿಕರಿಗೆ ಗರ್ಭಗೃಹದ ಹತ್ತಿರ ಪ್ರತ್ಯೇಕ ದೇವಸ್ಥಾನವಿದೆ. ಇಲ್ಲಿನ ಮೂಲವರ್ ಉಪ್ಪಿಲಿಯಪ್ಪನ್, ತಿರುವಿಣ್ಣಗರಪ್ಪನ್‌ಯನ್ನು ತಿರುಪತಿ ಶ್ರೀನಿವಾಸನ ಅಣ್ಣನೆಂದೂ ಕರೆಯುವ ವಾಡಿಕೆ-ನಂಬಿಕೆ ಇಂದಿಗೂ ಇದೆ. ಇಂದಿಗೂ ಇಲ್ಲಿ ನೈವೇದ್ಯದಲ್ಲಿ ಉಪ್ಪನ್ನು ಉಪಯೋಗಿಸುವುದಿಲ್ಲ. ವೈಖಾನಸ ಆಗಮರೀತ್ಯಾ ಇಲ್ಲಿ ಪೂಜೆ ನಡೆಯುತ್ತದೆ. ಮೂಲವರಾದ ಉಪ್ಪಿಲಿಯಪ್ಪನ್ ಪೂರ್ವಾಭಿಮುಖವಾಗಿ ನಿಂತಿರುವ ಭಂಗಿಯಲ್ಲಿದೆ. ಇಲ್ಲಿನ ತಾಯಾರ್ ಭೂಮಿ ದೇವಿ, ಮಂಡಿ ಇಟ್ಟು ಅಮರ್ದ ಕೋಲಂ ಅಂದರೆ ದೇವರ ಎದುರು ಅರ್ಧ ಮಂಡಿ ಊರಿ ಕುಳಿತಿರುವ ಭಂಗಿಯಲ್ಲಿ ಇದ್ದಾಳೆ. ಎದುರಿಗೆ ಮಾರ್ಕಂಡೇಯ ಮೂರ್ತಿ, ದಕ್ಷಿಣಾಭಿಮುಖವಾಗಿ ಕನ್ಯಾದಾನದ ಭಂಗಿಯಲ್ಲಿದೆ.

**ವಿಮಾನ:** ವಿಷ್ಣುವಿಮಾನ

**ಪ್ರತ್ಯಕ್ಷ:** ಮಾರ್ಕಂಡೇಯ, ಪೆರಿಯತಿರುವಡಿ,(ಗರುಡ) ಕಾವೇರಿ, ಧರ್ಮದೇವತೆ

**ಪುಷ್ಕರಿಣಿ :** ಅಹೋರಾತ್ರ ಪುಷ್ಕರಿಣಿ

ಈ ಪುಷ್ಕರಿಣಿಗೆ ಏಕೆ ಅಹೋರಾತ್ರ ಪುಷ್ಕರಿಣಿ ಎಂದು ಕರೆಯುತ್ತಾರೆ ಎಂಬುದಕ್ಕೂ ಒಂದು ಪೌರಾಣಿಕ ಸಂಗತಿ ಇದೆ. ಸಾಮಾನ್ಯವಾಗಿ ಯಾವುದೇ ಪುಷ್ಕರಿಣಿಯಲ್ಲಿ ರಾತ್ರಿಯ ವೇಳೆಯಲ್ಲಿ ಸ್ನಾನ ಮಾಡುವುದನ್ನು ನಿಷೇಧಿಸಲಾಗಿದೆ. ಆದರೆ ಇಲ್ಲಿ ಮಾತ್ರ ಆ ನಿಷೇಧವಿಲ್ಲ, ಏಕೆ ಎಂದು ತಿಳಿಯೋಣ.

ಭಾರದ್ವಾಜ ಮಹರ್ಷಿಯ ವಂಶಸ್ಥರಲ್ಲಿ ದೇವಶರ್ಮ ಎಂಬ ವೇದ ಪಾರಂಗತನಾದ ಒಬ್ಬ ಬ್ರಾಹ್ಮಣನು ಇದ್ದನು. ಅವನು ಒಮ್ಮೆ ಜೈಮಿನಿ ಮುನಿಗಳ ಕನ್ಯೆಯಲ್ಲಿ ಅತಿರೇಕವಾಗಿ ನಡೆದುಕೊಂಡನು. ಹೀಗಾಗಿ ಅವನು ಮುನಿಶಾಪಕ್ಕೆ ಕಾರಣನಾದನು. ಮುನಿಯು ಅವನನ್ನು ಕ್ರೌಂಚ ಪಕ್ಷಿಯಾಗುವಂತೆ ಶಪಿಸಿದನು. ದೇವಶರ್ಮನು ತನ್ನ ನಡತೆಗೆ ನಾಚಿ ತನ್ನನ್ನು ಶಾಪದಿಂದ ಮುಕ್ತನನ್ನಾಗಿ ಮಾಡಬೇಕೆಂದು ಮುನಿಯಲ್ಲಿ ಪ್ರಾರ್ಥಿಸಿದನು.

ಆಗ ಮುನಿಯು-ನೀನು ಪಕ್ಷಿಯಾದ ಕೂಡಲೇ ಮಾರ್ಕಂಡೇಯ ಕ್ಷೇತ್ರಕ್ಕೆ ಹೋಗು ಅಲ್ಲಿನ ದೇವಸ್ಥಾನದ ಪುಷ್ಕರಿಣಿಯ ದಡದ ಮೇಲಿನ ಮರದ ಕೊಂಬೆಯಲ್ಲಿ ವಾಸವಾಗಿರು. ಮುಂದೆ ಬಿರುಗಾಳಿಯ ಹೊಡೆತದಿಂದಾಗಿ ಆ ಕೊಂಬೆಯು ಮುರಿದು ಪುಷ್ಕರಿಣಿಗೆ ಬೀಳುವುದು. ಯಾವಾಗ ಪುಣ್ಯ ತೀರ್ಥದಿಂದ ಸಂಪರ್ಕ ಪಡೆಯುವೆಯೋ ಆಗ ನೀನು ಶಾಪ ವಿಮುಕ್ತನಾಗುವೆ ಎಂದು ಹೇಳಿದನು. ಮುನಿಶಾಪದಿಂದಾಗಿ ದೇವಶರ್ಮನು ಪುಷ್ಕರಿಣಿಯ ದಡದ ಮೇಲಿನ ಮರದಲ್ಲಿ ವಾಸವಾದನು. ಮೊದಲೇ ತಿಳಿಸಿದಂತೆ ಒಂದು ಮಧ್ಯರಾತ್ರಿಯಲ್ಲಿ ಬಿರುಗಾಳಿಯ ಹೊಡೆತಕ್ಕೆ ಕೊಂಬೆಯು ಮುರಿದು ಪುಷ್ಕರಿಣಿಯೊಳಗೆ ಬಿದ್ದು ಬಿಟ್ಟಿತ್ತು ಪುಣ್ಯತೀರ್ಥದ ಸಂಪರ್ಕದಿಂದಾಗಿ ಆ ಪಕ್ಷಿಯು ಮನುಷ್ಯಾಕೃತಿಯನ್ನು ಹೊಂದಿ ವೈಕುಂಠ ಮಾರ್ಗವಾಗಿ ಹೊರಟನು. ಆ ಸಮಯದಲ್ಲಿ ವರುಣನ ಸೇವಕರು ಬ್ರಾಹ್ಮಣನನ್ನು ನೋಡಿ, ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ನೀನು ನಿಯಮನ್ನು ಉಲ್ಲಂಘಿಸಿದೆ. ಆದ್ದರಿಂದ ನೀನು ಶಿಕ್ಷಾರ್ಹ ಎಂದರು. ವೈಕುಂಠ ಮಾರ್ಗದತ್ತ ಹೊರಟಿದ್ದ ಆತನನ್ನು ತಡೆದರು. ಅಷ್ಟರಲ್ಲಿ ಅಲ್ಲಿ ಬಂದ ವಿಷ್ಣುದೂತರು ವರುಣದೂತರಿಗೆ ಇಂತೆಂದರು. ಈ ಪುಷ್ಕರಿಣಿಯ ಶ್ರೇಷ್ಠತೆ ನಿಮಗೆ ತಿಳಿದಿಲ್ಲ. ಪ್ರಾತಃ ಕಾಲದಲ್ಲಾಗಲಿ, ಅಥವಾ ರಾತ್ರಿವೇಳೆಯಲ್ಲಾಗಲಿ ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡಿದವರು ಪುನೀತರಾಗುವರು ಎಂದು ಹೇಳಿ ಬ್ರಾಹ್ಮಣನನ್ನು ವೈಕುಂಠಕ್ಕೆ ಕರೆದೊಯ್ದರು. ಇಂದಿಗೂ ಸಹ ಈ ಪುಷ್ಕರಿಣಿಯ ದಡದಲ್ಲಿ ಒಂದು ತುಳಸೀ ಗಿಡವಿದೆ. ಯಾರು ಈ ಗಿಡದ ಅಡಿಯಲ್ಲಿ ಕುಳಿತು ಅಷ್ಟಾಕ್ಷರ ಮಂತ್ರವನ್ನು ಉಚ್ಚರಿಸುವರೋ ಅವರು ಸಕಲ ಇಷ್ಟಾರ್ಥಗಳನ್ನು ಗಳಿಸುವರು ಎಂಬ ನಂಬಿಕೆ ಇಂದಿಗೂ ಇದೆ.

ಈ ಕ್ಷೇತ್ರದಲ್ಲಿ ಸಾರಂಗತೀರ್ಥ, ಸೂರ್ಯತೀರ್ಥ, ಇಂದ್ರತೀರ್ಥ, ಬ್ರಹ್ಮತೀರ್ಥ, ಎಂಬ ನಾಲ್ಕು ಪುಣ್ಯತೀರ್ಥಗಳಿವೆ. (ಕೊಳ)

**ಸಾರಂಗತೀರ್ಥ:**

ಈ ತೀರ್ಥವು ಧನುಷ್ಕೋಟಿ ತೀರ್ಥಕ್ಕಿಂತ ಹೆಚ್ಚು ಮಾನ್ಯತೆಯನ್ನು ಪಡೆದಿದೆ.

**ಸೂರ್ಯತೀರ್ಥ:**

ಒಮ್ಮೆ ಶಿವನು ಬ್ರಹ್ಮನ ಐದು ತಲೆಗಳಲ್ಲಿ ಒಂದನ್ನು ತೆಗೆದನು. ಆ ಪಾಪದ ಪ್ರಾಯಶ್ಚಿತ್ತಾರ್ಥವಾಗಿ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಭಗವಂತನ ದರ್ಶನ ಪಡೆದನು. ಅದರಲ್ಲಿ ಈ ತಿರುವಿಣ್ಣಗರ್ ಕ್ಷೇತ್ರವೂ ಒಂದು ಸೂರ್ಯನು ಈ ತೀರ್ಥವನ್ನು ಜೀರ್ಣೋದ್ಧಾರ ಮಾಡಿದ್ದರಿಂದ ಈ ಕ್ಷೇತ್ರಕ್ಕೆ ಸೂರ್ಯ ಕ್ಷೇತ್ರವೆಂದು ಕರೆಯಲಾಗಿದೆ. ಶಿವನು ದಕ್ಷನನ್ನು ಕೊಂದಾಗ ಅದರ ಪ್ರಾಯಶ್ಚಿತ್ತಾರ್ಥವಾಗಿ ಈ ಕೊಳದಲ್ಲಿ ಮಿಂದನೆಂಬ ನಂಬಿಕೆ ಇದೆ.

**ಇಂದ್ರತೀರ್ಥ:**

ಇಂದ್ರನು ಅಹಲ್ಯೆಯೊಡನೆ ಅನೈತಿಕವಾಗಿ ವರ್ತಿಸಿದುದರಿಂದ ಆ ಪಾಪವನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಈ ತೀರ್ಥದಲ್ಲಿ ಸ್ನಾನ ಮಾಡಿದನೆಂಬ ನಂಬಿಕೆ ಇದೆ.

**ಬ್ರಹ್ಮತೀರ್ಥ:**

ಬ್ರಹ್ಮನು ತನ್ನ ಬ್ರಹ್ಮ ಪದವಿಗೆ ಏರುವ ಮುನ್ನ ಈ ತೀರ್ಥದಲ್ಲಿ ಮಿಂದನೆಂಬ ನಂಬಿಕೆ ಇದೆ.

ದೇವಾಲಯದ ಒಳಗೆ ನಮ್ಮಾಳ್ವಾರ್, ಕಲಿಯನ್, ಪೇಯಾಳ್ವಾರ್ ಕುಲಶೇಖರಾಳ್ವಾರ್, ತೊಂಡರಡಿಪ್ಪೊಡಿ ಆಳ್ವಾರ್, ಪೆರಿಯಾಳ್ವಾರ್, ಎಂಬೆರುಮಾನಾರ್ ಮತ್ತು ವೇದಾಂತ ದೇಶಿಕರ ಅರ್ಚಾಮೂರ್ತಿಗಳಿವೆ. ಇಲ್ಲಿನ ಕಲ್ಯಾಣೋತ್ಸವ ಅತ್ಯಂತ ಪ್ರಸಿದ್ಧವಾಗಿದೆ.ಇಲ್ಲಿ ತಿಂಗಳಿಗೊಮ್ಮೆ ಶ್ರವಣೋತ್ಸವ, ಪುರಟ್ಟಾಸಿ ಬ್ರಹ್ಮೋತ್ಸವ, ಕಲ್ಯಾಣೋತ್ಸವ, ಪಂಗುನಿ ಅವತಾರೋತ್ಸವ ಬಹಳ ಪ್ರಮುಖವಾದದ್ದು.

15

**ಕರ್ನಾಟಕದ ವೈಷ್ಣವ ದೇವಾಲಯಗಳು**

# ಹುಲ್ಲೇಕೆರೆಯ ಕೇಶವ ದೇವಾಲಯ

- ಕೆಂಗೇರಿ ಚಕ್ರಪಾಣಿ
9448386886

ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ಹುಲ್ಲೇಕೆರೆಯು ತುಮಕೂರು ಜಿಲ್ಲೆ ತಿಪಟೂರಿಗೆ ಸುಮಾರು 16 ಕಿ.ಮೀ. ದೂರದಲ್ಲಿದೆ. ಹುಲ್ಲೇಕೆರೆಯಲ್ಲಿ ಹೊಯ್ಸಳ ವಾಸ್ತುಶಿಲ್ಪದ ಮನಮೋಹಕವಾದ ಶ್ರೀಚೆನ್ನಕೇಶವ ದೇವಾಲಯವಿದೆ. ಪ್ರಸ್ತುತ ದೇವಾಲಯವನ್ನು ಹೊಯ್ಸಳರ ಮಹಾಪ್ರಧಾನಿ ಶ್ರೀಕರಣ ಹೆಗ್ಗಡೆ ಬೂಚಿರಾಜನು ಕ್ರಿ.ಶ. 1163 ರಲ್ಲಿ ತನ್ನ ದೂರೆ 1 ನೆಯ ನರಸಿಂಹನಿಂದ ನೀರಗುಂದ ನಾಡ ಹುಲ್ಲೇ ಕೆರೆಯನ್ನು ಪಡೆದು ಸೋಮನಾಥಪುರವೆಂದು ಹೆಸರಿಟ್ಟು ಶ್ರೀ ಕೇಶವಾಲಯವನ್ನು ನಿರ್ಮಿಸಿರುತ್ತಾನೆ.

ಹುಲ್ಲೇಕೆರೆಯ ಚೆನ್ನಕೇಶವ ದೇವಾಲಯವು ಊರಿನ ನಡುವೆ ಎತ್ತರವಾದ ದಿಬ್ಬದ ಮೇಲೆ ಪೂರ್ವಾಭಿಮುಖವಾಗಿದೆ. ದೇವಾಲಯವು ಎತ್ತರವಾದ ಪ್ರವೇಶ ದ್ವಾರವನ್ನು ಹೊಂದಿದ್ದು, ದೇವಾಲಯವು ಚತುರಸ್ರಾಕಾರದ ಗರ್ಭಗೃಹ, ಅಂತರಾಳ,ನವರಂಗ ಹಾಗೂ ಕಿರುಮುಖ ಮಂಟಪವನ್ನು ಹೊಂದಿದೆ. ಮುಖ ಮಂಟಪದ ಪ್ರವೇಶದ ಎರಡೂ ಕಡೆಯಲ್ಲೂ ನಕ್ಷತ್ರಾಕಾರದ ಕಟ್ಟೆಯ ಮೇಲೆ ಸುಂದರವಾಗಿ ಅಲಂಕರಿಸಿರುವ ಗಜಗಳ ಶಿಲ್ಪಗಳಿವೆ. ನವರಂಗದಲ್ಲಿ ತಿರುಗಣೆ ಯಿಂದ ಮಾಡಿದ ನಾಲ್ಕು ಕಂಬಗಳಿವೆ. ನವರಂಗದ ಮಧ್ಯದ ಭುವನೇಶ್ವರಿಯು ವೃತ್ತಾಕಾರದ ಪದ್ಮಗಳ ಜೋಡಣೆಗಳಿಂದ ಕೂಡಿದ್ದು, ಮಧ್ಯದಲ್ಲಿ ಕಾಳಿಂಗಮರ್ದನದ ಕಿರುಮೂರ್ತಿ ಇದೆ. ಪೂರ್ವದಿಂದ ಮೂರನೆಯ ಭುವನೇಶ್ವರಿಯಲ್ಲಿ ನರ್ತನವನ್ನು ವೀಕ್ಷಿಸುತ್ತಿರುವ ದೇವಾಲಯದ ಸ್ಥಾಪಕ ಬೂಚಿರಾಜನ ಶಿಲ್ಪವಿದೆ. ಗರ್ಭ ಗುಡಿಯಲ್ಲಿ ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಸುಮಾರು 6 ಅಡಿ ಎತ್ತರದ ಕೇಶವನ ಸುಂದರ ಶಿಲ್ಪವಿದೆ. ಕೇಶವನ ಎರಡೂ ಬದಿಗಳಲ್ಲಿ ಆತನ ಪತ್ನಿಯರ ಶಿಲ್ಪಗಳಿವೆ. ಅಂತರಾಳದ ಬಾಗಿಲವಾಡದ ಬದಿಗಳಲ್ಲಿ ದ್ವಾರಪಾಲಕರ ಶಿಲ್ಪಗಳಿವೆ.

ಹುಲ್ಲೇಕೆರೆಯ ಚೆನ್ನಕೇಶವ ದೇವಾಲಯದ ಒಳನೋಟ ಹಾಗೂ ಹೊರ ವಿನ್ಯಾಸವು ಅದ್ಭುತವಾಗಿದೆ. ಹಳೇಬೀಡು ಸೋಮನಾಥಪುರದ ದೇವಾಲಯಗಳನ್ನು ನೆನಪಿಸುವ ಕಲಾತ್ಮಕತೆ ಎದ್ದು ಕಾಣುತ್ತದೆ.ದೇವಾಲಯವು ಪೂರ್ವ- ಪಶ್ಚಿಮ 100 ಅಡಿ ಹಾಗೂ ಉತ್ತರ-ದಕ್ಷಿಣ 63 ಅಡಿ ಅಂಗಳದಲ್ಲಿ ಅತ್ಯಂತ ಆಕರ್ಷಕವಾಗಿದ್ದು ಮನಸೂರೆಗೊಳ್ಳುತ್ತದೆ. ದೇವಾಲಯದ ಹೊರ ಭಿತ್ತಿಯ ದಕ್ಷಿಣ ದಿಂದ ಪ್ರದಕ್ಷಿಣಾಭಿಮುಖವಾಗಿ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಿವೆ.

ಹುಲ್ಲೇಕೆರೆಯ ಶ್ರೀಚೆನ್ನಕೇಶವ ದೇವಾಲಯದ ಸೌಂದರ್ಯ ಎದ್ದು ಕಾಣುವುದು ದೇವಾಲಯದ ಮೇಲ್ಛಾವಣಿಯ ಮೇಲಿರುವ ಕಟಾಂಜನ ಮತ್ತು ಅಲಂಕೃತ ಗೋಪುರದಿಂದ ದೇವಾ ಲಯದ ಮುಖಮಂಟಪ ಮೇಲಿನ ಕಟಾಂಜನದಲ್ಲಿ ಮನ ಮೋಹಕವಾದ ಅತ್ಯಂತ ರಮಣೀಯವಾದ ಕಾಳಿಂಗ ಮರ್ದನ ಶಿಲ್ಪವಿದೆ. ಯಮುನಾ ನದಿಯನ್ನು ತನ್ನ ವಿಷದಿಂದ ಕಲುಷಿತ ಗೊಳಿಸುತ್ತಿದ್ದ ಕಾಳಿಂಗನನ್ನು ಶ್ರೀಕೃಷ್ಣನು ಮರ್ದಿಸುತ್ತಿರುವ ದೃಶ್ಯವು ಬಹಳ ನೈಜವಾಗಿ ಮೂಡಿ ಬಂದಿದೆ.ದೇವನ ಬಲಭಾಗದಲ್ಲಿ ಹಲಾಯುಧವನ್ನು ಹಿಡಿದು ನಿಂತಿರುವ ಬಲರಾಮದೇವ ಹಾಗೂ ತನ್ನ ಎಡ ಭಾಗದಲ್ಲಿ ತನ್ನ ಪತ್ನಿಯನ್ನು ರಕ್ಷಿಸುವಂತೆ ಕೈಮುಗಿದು ನಿಂತಿರುವ ಕಾಳಿಂಗನ ಸತಿಯ ಶಿಲ್ಪಗಳಿವೆ. ಕಾಳಿಂಗ ಮರ್ದನ ನಂತೆ ದೇವಾಲಯದ ಉತ್ತರದ ಕಡೆ ಹರಿಹರರ ಮೂರ್ತಿಯು ಗಮನ ಸೆಳೆಯುತ್ತದೆ. ಹರಿಹರರ ಬಲಭಾಗದಲ್ಲಿ ಹರನವಾಹನ ನಂದಿಯಿದ್ದರೆ, ಎಡಭಾಗದಲ್ಲಿ ಕೈಮುಗಿದು ಕುಳಿತಿರುವ ಗರುಡ ರಿದ್ದಾರೆ. ಹರನು ತ್ರಿಶೂಲ, ಅಕ್ಷಮಾಲೆ ಧರಿಸಿದ್ದರೆ, ಹರಿಯು ಚಕ್ರ ಶಂಖವನ್ನು ಧರಿಸಿರುತ್ತಾನೆ. ದೇವಾಲಯದ ಪ್ರಮುಖ ಆಕರ್ಷಣೆ ಮೂರು ಹಂತಗಳನ್ನು ಹೊಂದಿರುವ ಶಿಖರವಾಗಿರುತ್ತದೆ. ತ್ರಿವಿಕ್ರಮ,ಕಾಳಿಂಗಮರ್ದನ ಯೋಗಾ ನರಸಿಂಹ ಗೋವರ್ಧನ ಗಿರಿಧಾರಿ ಹಾಗೂ ಸುಖನಾಸಿಯ ಮುಂಚಾಚಿನಲ್ಲಿರುವ ಸೂಕ್ಷ್ಮ ಕೆತ್ತನೆಗಳಿಂದ ಕೂಡಿರುವ ಕೇಶವ ಶಿಲ್ಪವು ಸುಂದರವಾಗಿದೆ. ದೇವಾ ಲಯದ ಶಿಲಾ ಕಳಶವೂ ಸಹ ಅಂದವಾಗಿದ್ದು ದೇವಾಲಯಕ್ಕೆ







ಮುಕುಟಮಣಿಯಂತಿದೆ. ದೇವಾಲಯದ ಸುತ್ತಲೂ ಬೇಲೂರು, ಸೋಮನಾಥಪುರದಲ್ಲಿರುವಂತೆ ಕೈಸಾಲೆ ಮಂಟಪವಿದೆ. ಹುಲ್ಲೇಕೆರೆಯ ಚೆನ್ನಕೇಶವ ದೇವಾಲಯವು ಜೀರ್ಣಾವಸ್ಥೆಯಲ್ಲಿದ್ದಿತು.ಆದರೆ ಸ್ಥಳೀಯರ ಸಹಾಯದಿಂದ ಮತ್ತು ರಾಜ್ಯ ಪುರಾತತ್ವ ಇಲಾಖೆಯ ಸಹಕಾರದಿಂದ ದಿನಾಂಕ 17-08-1990 ರಂದು ಶಾಸ್ತ್ರೋಕ್ತವಾಗಿ ಜೀರ್ಣೋದ್ಧಾರವಾಯಿತು. ಬಹುಶಃ ಅಂತಹ ಸತ್ಕಾರ್ಯವು ನೆರವೇರದಿದ್ದಲ್ಲಿ ದೇವಾಲಯವು ವಿನಾಶದೆಡೆಗೆ ಸಾಗುತ್ತಿತ್ತು.

**'ಹುಲ್ಲೇಕೆರೆಯ ಶ್ರೀ ಚನ್ನಕೇಶವ ದೇವಾಲಯದ ಸಂಸ್ಥಾಪಕ ಶ್ರೀ ಬೂಚಿರಾಜ:**

ಹುಲ್ಲೇಕೆರೆಯ ಕೇಶವಾಲಯವನ್ನು ಶ್ರೀಕರಣ ಹೆಗ್ಗಡೆ ಕರ್ನಾಟಕ ಕುಲಕಮಲ ಮಾರ್ತಾಂಡ, ಸರ್ವಗುಣ ಸಂಪನ್ನ, ಕಲಿಕಾಲ ಕರ್ಣ, ಧರಿತ್ರಿ ಪರಿತ್ರಾಗುಣಾಸ್ಪದ ಪದ್ಮೋದರ ಮುಂತಾದ ಬಿರುದಾಂಕಿತ ಮಹಾಪ್ರಧಾನಿ ಶ್ರೀಕರಣ ಹೆಗ್ಗಡೆ ಶ್ರೀ ಬೂಚಿರಾಜನು ಸ್ಥಾಪಿಸಿರುತ್ತಾನೆ. ಶ್ರೀ ಬೂಚಿರಾಜನ ಇತಿ ವೃತ್ತವು ಕಡೂರು ತಾಲ್ಲೂಕಿನ ಬ್ರಹ್ಮಸಮುದ್ರ, ಕೋರವಂಗಲ ಹಾಗೂ ಹುಲ್ಲೇಕೆರೆ ಶಾಸನಗಳಲ್ಲಿ ದೊರೆಯುತ್ತದೆ. ಬೂಚಿರಾಜನ ಮೂರು ಜನ ಸಹೋದರರು ಕೋರವಂಗಲ,ಬ್ರಹ್ಮ ಸಮುದ್ರ ಮುಂತಾದ ಕಡೆ ದೇವಾಲಯವನ್ನು ನಿರ್ಮಿಸಿರುತ್ತಾರೆ. ಸ್ವತಃಬೂಚಿರಾಜನು ಹಾಸನ ತಾಲ್ಲೂಕಿನ ಕೋರಮಂಗಲದಲ್ಲಿ ತನ್ನ ದೊರೆ 2 ನೇ ವೀರ ಬಲ್ಲಾಳನ ಪಟ್ಟಾಭಿಷೇಕದ ಸವಿನೆನೆಪಿಗಾಗಿ ಅತ್ಯಂತ ಸುಂದರವಾದ, ಕಲಾತ್ಮಕವಾದ ಶ್ರೀಬೂಚೇಶ್ವರ ದೇವಾಲಯವನ್ನು ನಿರ್ಮಿಸಿದನು.ಈತನು ಎಷ್ಟು ಸ್ವಾಮಿನಿಷ್ಠನೆಂದರೆ ತನಗೆ ಜನಿಸಿದ ಪುತ್ರನಿಗೆ ತನ್ನ ದೊರೆ 1 ನೆಯ ನರಸಿಂಹನ ಹೆಸರನ್ನಿಟ್ಟನು.

ಬೂಚಿರಾಜನು ವಿಷ್ಣುವರ್ಧನನ ಮಗನಾದ 1 ನೇ ನರಸಿಂಹ ಹಾಗೂ ಈತನ ಮಗನಾದ 2ನೇ ಬಲ್ಲಾಳನಿಗೆ ಪ್ರಧಾನಿಯಾಗಿದ್ದನು. ಇದು ಬೂಚಿರಾಜನಿಗೆ ಹೊಯ್ಸಳ ವಂಶಕ್ಕಿದ್ದ ನಿಷ್ಠೆಯನ್ನು ಎತ್ತಿ ತೋರುತ್ತದೆ.

ಬೂಚಿರಾಜನು ದೇವಾಲಯ ನಿರ್ಮಿಸಿರುವುದಲ್ಲದೇ ಸ್ವಾಮಿಯ ಸೇವಾಕೈಂಕರ್ಯವು ನಿರಂತರವಾಗಿ ನಡೆಯುವಂತೆ ಹುಲ್ಲೇಕೆರೆಯ ಸಮೀಪವಿರುವ ಭೂಪ್ರದೇಶವನ್ನು ದತ್ತಿಯಾಗಿ ನೀಡಿರುವುದು ಹುಲ್ಲೇ ಕೆರೆಯ ಕೇಶವ ದೇವಾಲಯದ ಶಾಸನದಿಂದ ತಿಳಿಯುತ್ತದೆ.

ಎತ್ತಿನ ಸಹಿತ ಹುಲ್ಲೇಕೆರೆಯ ಚನ್ನಕೇಶವ ದೇವರ ನಂದಾದೀವಿಗೆಗೆ ಸುಂಕದ ಮಂಚಯ್ಯ ಹೆಗ್ಗಡೆ ಒಂದು ಗಾಣವನ್ನು ಹಾಗೂ ದೇವರ ತೋಟಕ್ಕಾಗಿ ಜಮೀನನ್ನು ಶ್ರೀಕರಣ ಹೆಗ್ಗಡೆ ಸೋಮಯ್ಯನು ನೀಡಿ ಬೂಚಿರಾಜನ ಕೈಗೊಂಡ ಸತ್ಕಾರ್ಯಕ್ಕೆ ಕೈ ಜೋಡಿಸಿರುತ್ತಾರೆ.

**ಹೀಗೆ ಬನ್ನಿ:**

ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ಹುಲ್ಲೇಕೆರೆಯ ತಿಪಟೂರು-ಹಾಸನ ರಸ್ತೆಯಲ್ಲಿ ತಿಪಟೂರಿನಿಂದ ಸುಮಾರು 16 ಕಿ.ಮೀ. ದೂರದಲ್ಲಿದೆ. ತಿಪಟೂರಿನಿಂದ ಹಾಸನದ ಕಡೆಗೆ ಬರುವಾಗ ಸುಮಾರು 14 ಕಿ.ಮೀ. ದೂರದಲ್ಲಿ ಚಂದೇಹಳ್ಳಿ ಗೇಟ್ ದೊರೆಯುತ್ತದೆ.ಅಲ್ಲಿಂದ ಬಲಕ್ಕೆ ತಿರುಗಿ ಸುಮಾರು 2 ಕಿ.ಮೀ. ಬಂದರೆ ಸುಂದರ ದೇವಾಲಯವಿರುವ ಹುಲ್ಲೇಕೆರೆಗೆ ಬರಬಹುದು.

ಚನ್ನರಾಯಪಟ್ಟಣದ ಕಡೆಯಿಂದ ಬರುವವರು ಬೆಂಗಳೂರು ಹಾಸನ ರಸ್ತೆಯಲ್ಲಿ ಚನ್ನರಾಯಪಟ್ಟಣದ ನಂತರ 6 ಕಿ.ಮೀ. ದೂರದಲ್ಲಿ ಬರಗೂರು ಹ್ಯಾಂಡ್ ಪೋಸ್ಟ್ ಸಿಗುತ್ತದೆ. ಅಲ್ಲಿ ಬಲಕ್ಕೆ ತಿರುಗಿ ಸುಮಾರು 14 ಕಿ.ಮೀ. ದೂರದಲ್ಲಿ ಗಂಡಿಸಿ ಹ್ಯಾಂಡ್ ಪೋಸ್ಟ್‌ಗೆ ಬಂದು ಹಾಸನ - ತಿಪಟೂರು ರಸ್ತೆಯ ಕಡೆ ತಿರುಗಿ, ಮೇಲೆ ಉಲ್ಲೇಖಿಸಿರುವ ಚಂದೇನಹಳ್ಳಿ ಗೇಟ್‌ಗೆ ಬಂದು ಎಡಕ್ಕೆ ತಿರುಗಿ ಹುಲ್ಲೇಕೆರೆಯನ್ನು ಸೇರಬಹುದು.





**ಧಾರಾವಾಹಿ**

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ


**- ಇಂಗ್ಲೀಷ್ ಮೂಲ : ಡಾ|| ಎನ್.ರಮೇಶನ್**

**- ಕನ್ನಡಾನುವಾದ : ದಿ|| ಜಿ.ಎನ್. ಶ್ರೀನಿವಾಸನ್**


ಎರಡನೇ ವೆಂಕಟನು ಕ್ರಿ.ಶ.1585 ರಲ್ಲಿ ಗದ್ದುಗೆಯನೇರಿದ.ಇವನ ಆಳ್ವಿಕೆಯಲ್ಲಿ ಗೋಲ್ಕೊಂಡದ ಸುಲ್ತಾನ ಮಹಮದ್ ಕುಳಿಯ ಧಾಳಿಯಾಯಿತು. ಸುಲ್ತಾನನ ಸೈನ್ಯ ತನ್ನ ಎದುರಿಗೆ ಬಂದವರನ್ನೆಲ್ಲ ಧೂಳೀಪಟ ಮಾಡಿದ್ದರಿಂದ ವೆಂಕಟನು ಶಾಂತಿಗಾಗಿ ಮೊರೆಯಿಡಬೇಕಾಯಿತು.ತನಗೆ ದೊರೆತ ಈ ಮಾತುಕತೆಯ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡ ವೆಂಕಟನು ನಂತರ ಗೋಲ್ಕೊಂಡದ ಸುಲ್ತಾನನನ್ನು ಧಿಕ್ಕರಿಸಿದ. ಸುಲ್ತಾನನ ಒಂದು ಸೈನ್ಯ ರಾವಿಳ್ಳ ವಂಶದವರ ನೇತೃತ್ವದಲ್ಲಿ ದಂಡೆತ್ತಿ ಬಂದು ವಾಯಲ್ಪಾಡು ತಾಲ್ಲೂಕಿನ ಗುರ್ರಂ ಕೊಂಡ ದುರ್ಗವನ್ನು ಸೇರಿತು.ಎರಡನೇ ವೆಂಕಟನು ಧಾಳಿಕಾರರನ್ನು ಓಡಿಸಲು ಮಟ್ಲ ಅನಂತನನ್ನು ನಿಯಮಿಸಿದ.ಮಟ್ಲ ಅನಂತನು ತನ್ನ ಸೈನ್ಯದೊಡನೆ ಗುರ್ರಂ ಕೊಂಡಕ್ಕೆ ಬಂದು ಕೋಟೆಗೆ ದಿಗ್ಬಂಧವನ್ನುಂಟು ಮಾಡಿ ಕುಳಿತ. ರಾವಿಳ್ಳ ಸೇನಾನಿ ತನ್ನ ಬಳಿಯಿದ್ದ ಮದ್ದುಗುಂಡು ಸಾಮಾಗ್ರಿಯ ದಾಸ್ತಾನಿನಿಂದ ಧೈರ್ಯವಾಗಿ ಶತ್ರುವನ್ನೆದುರಿಸಿದರೂ ಅನಂತನು ಸ್ಥೈರ್ಯದಿಂದ ಸಮರ ನಡೆಸಿ ಮುತ್ತಿಗೆಯನ್ನು ಮುಂದುವರಿಸಿ ಕೊನೆಗೆ ಒಂದು ಕಡೆಯ ಕಾವಲು ಗೋಪುರವನ್ನು ರುಳಿಸಿ ಒಳನುಗ್ಗಿದಾಗ,ರಾವಿಳ್ಳ ಪಡೆಗಳು ಕೋಟೆಯನ್ನು ರಕ್ಷಿಸಿಕೊಳ್ಳಲಾಗಲಿಲ್ಲ. ರಾವಿಳ್ಳ ಸೇನಾನಿ ಪರಿಸ್ಥಿತಿಯ ತೀವ್ರತೆಯನ್ನರಿತು ಶಾಂತಿಯ ಧ್ವಜಹಾರಿಸಿದ. ಪ್ರಾಯಶಃ ಕೋಟೆಯನ್ನು ಒಪ್ಪಿಸಿ ಹಿಂದಿರುಗಿರಬೇಕು.ಎರಡನೇ ವೆಂಕಟನ ಆಳ್ವಿಕೆ ಒಳಸಂಚುಗಳನ್ನೂ ಎದುರಿಸಬೇಕಾಯಿತು. ನಾದೇಂಡ್ಲ ಕೃಷ್ಣಮ ರಾಜನು ದಂಗೆಯೆದ್ದ. ಅವನನ್ನು ಸೆರೆ ಹಿಡಿದು ಚಂದ್ರಗಿರಿಗೆ ಒಯ್ಯಲಾಯಿತು. ಅವನು ತನ್ನ ಮರಣದವರೆಗೆ ಸೆರೆಯಲ್ಲಿಯೇ ಇದ್ದ.

ಕ್ರಿ.ಶ.1614 ರಲ್ಲಿ ಎರಡನೇ ವೆಂಕಟ ತೀರಿಕೊಂಡು,ನಂತರ ಎರಡನೇ ಶ್ರೀರಂಗನೂ,ಅವನಾದ ಮೇಲೆ ರಾಮದೇವನೂ ಸಾಧಾರಣ ಶಾಂತಿಯ ಆಳ್ವಿಕೆ ನಡೆಸಿದರು.ರಾಮದೇವನ ಮರಣದಿಂದಾಗಿ ರಾಜ್ಯದಲ್ಲಿ ಅರಾಜಕತೆ, ಅಂತರ್ಯುದ್ಧಗಳು ತಲೆದೋರಿದವು.ಉತ್ತರಾಧಿಕಾರಿಯ ಯುದ್ಧದಲ್ಲಿ ಗೆದ್ದು ಬಂದ ಮೂರನೆಯ ವೆಂಕಟನಿಗೆ ಒಳ ಯುದ್ಧಗಳೂ, ಹೊರ ಆಕ್ರಮಣಗಳು ತಲೆ ನೋವಾದವು. ಹೊರಗಣ ಧಾಳಿಗಳಲ್ಲಿ ಕ್ರಿ.ಶ.1642 ರ ಕುತುಬ್‌ಷಾಹಿ ರಾಜ ಅಬ್ದುಲ್ಲಾ ಕುತುಬ್ ಷಹನ ಧಾಳಿ ಪ್ರಮುಖವಾದದ್ದು.ತಕ್ಕ

ಪ್ರತಿರೋಧವನ್ನು ನೀಡಲಾಗದೆ.ರಾಯನ ಸ್ನೇಹಿತರು ಅವನನ್ನು ತೊರೆಯುವಂತಾಗಿ ರಾಯನೇ ಚಿತ್ತೂರಿನ ಪರ್ವತಾವಳಿಯಲ್ಲಿ ವನವಾಸಿಯಾಗ ಬೇಕಾಯಿತು. ನಾರಾಯಣವನದ ಕಾಡುಗಳಲ್ಲಿ ರಾಯ ಮರಣೋ ನ್ಮುಖನಾಗಿದ್ದಾಗ ಅವನ ಸೋದರಳಿಯ ಮೂರನೇ ಶ್ರೀರಂಗನು ವಿಜಯನಗರದ ಸಿಂಹಾಸನ ವನ್ನು ತಾನೇ ದಕ್ಕಿಸಿಕೊಳ್ಳಲು,ವಂಶ ಗೌರವವನ್ನುಳಿಸುವಂತೆ ಮುಂದೆ ಬಂದ.

ಕ್ರಿ.ಶ.1642 ರ ಅಕ್ಟೋಬರ್ 29 ರಲ್ಲಿ ಮೂರ ನೆಯ ಶ್ರೀರಂಗನು ಪಟ್ಟಾಭಿಷಿಕ್ತನಾದ.ಅವನು ಮಾಡ ಬೇಕಾಗಿದ್ದ ಮೊದಲ ಕೆಲಸವೆಂದರೆ ತನ್ನ ರಾಜ್ಯದಲ್ಲಿದ್ದ ಆಕ್ರಾಮಕರನ್ನು ಹೊರತಳ್ಳುವುದು.ಕ್ರಿ.ಶ.1643 ರಲ್ಲಿ ಗೋಲ್ಕೊಂಡದ ಸೈನ್ಯದ ಮುನ್ನಡೆಯನ್ನು ತಡೆಯಲು ಅವನು ತಿರುಪತಿಗೆ ಬಂದು ತಳವೂರಿದ.ಅವನ ಬಳಿ ದೊಡ್ಡದಾದ ಸೈನ್ಯವಿದ್ದರೂ ಹೆಚ್ಚು ಪ್ರಬಲ ಶಸ್ತ್ರಧಾರಿ ಶತ್ರುವನ್ನು ಎದುರಿಸಲು ಹೆದರಿದ. ಜೊತೆಗೇ ಅವನ ಸಾಮಂತರಲ್ಲಿ ಹಲವರ ಒಳಸಂಚುಗಳು ಅವನ ಅಸಹಾಯಕತೆಯ ನಿರ್ವಿಣ್ಣಭಾವವನ್ನು ಹೆಚ್ಚಿಸಿತ್ತು. ಶ್ರೀಕಾಳಹಸ್ತಿಯ ದಾಮೆರ್ಲ ವೆಂಕಟಪತಿ ನಾಯಕನು ಶ್ರೀರಂಗನು ರಾಜನಾಗಿದ್ದಾಗಿನಿಂದಲೇ ಅವನ ವಿರೋಧಿ ಯಾಗಿದ್ದು,ಶತ್ರುವನ್ನು ಆಕ್ರಮಣಕ್ಕೆ ಹುರಿದುಂಬಿಸಿದ. ಗೋಲ್ಕೊಂಡದ ಸೈನ್ಯ ಬಂದಾಗ ಶ್ರೀರಂಗನು ಮೊದಲು ನಾರಾಯಣವನಕ್ಕೂ ನಂತರ ವೆಲ್ಲೂರಿಗೂ ಹಿಮ್ಮರ ಆದ.ತಿರುಗಿ ಬಂದಮೇಲೆ ವೆಂಕಟನಾಯಕನ ಒಳ ಸಂಚು ತಿಳಿದುಕೊಂಡು,ಅವನನ್ನು ಬಂಧಿಸಿ ಸೆರೆಯ ಲ್ಲಿಟ್ಟ, ಅವನನ್ನು ಮರಣದಂಡನೆಗೆ ಗುರಿ ಮಾಡಬಹು ದಾಗಿದ್ದರೂ ಕ್ಷಮಿಸಿ ಅವನ ಸಂಪತ್ತಿನ ಒಂದು ಭಾಗ ವನ್ನು ಕಿತ್ತುಕೊಂಡ.

ರಾಜ್ಯಕ್ಕೆ ಮತ್ತೆ ಬಿಜಾಪುರ,ಗೋಲ್ಕೊಂಡದವ ರಿಂದ ಕಿರಿಕಿರಿಯಾಯಿತು.ಬಿಜಾಪುರದ ಸುಲ್ತಾನನು ಮುಸ್ತಾಫಾಖಾನನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿ ಸಿದರೆ,ಗೋಲ್ಕೊಂಡ ಸೈನ್ಯವು ಮಹಮ್ಮದ್ ಮೀರ್‌ಜು ಮ್ಲನ ನೇತೃತ್ವದಲ್ಲಿ ಧಾಳಿಯಿಟ್ಟಿತು. ಮುಸ್ತಾಫಾಖಾನನು ಜಿಲ್ಲೆಯ ಬುಕ್ಕಪಟ್ಟಣದ ಮೂಲಕ ವೆಲ್ಲೂರಿಗೆ ನಡೆದರೆ ಮತ್ತೊಂದು ಪಡೆ ಖಾನ್-ಎ- ಖಾನ್‌ನ ನೇತೃತ್ವದಲ್ಲಿ ಗುರ್ರಂ ಕೊಂಡಕ್ಕೆ ಲಗ್ಗೆ ಹಾಕಿತು.ಶ್ರೀರಂಗನು ಸ್ವರಕ್ಷಣೆ ಗೆಂದು ವೆಲ್ಲೂರಿನ ರಾಣಿಯರಿಂದ ಆಭರಣಗಳನ್ನೂ, ತಿರುಮಲೆಯ ಆಲಯದಿಂದ ಧನವನ್ನೂ ವೆಚ್ಚಗಳಿಗಾಗಿ ಪಡೆದು ನಾನಾವಿಧವಾಗಿ ಪ್ರಯತ್ನಿಸಿದ. ಗೋಲ್ಕೊಂಡದ ಸೈನ್ಯ ಮೀರ್‌ಜುಮ್ಲಾನ ಒಡೆತನದಲ್ಲಿ ಪೂರ್ವಕರಾವಳಿ ಯಲ್ಲಿ ಅವನು ತಂಜಾವೂರು, ನಂತರ ಮೈಸೂರಿಗೆ ಓಡಿದ. ಚಂದ್ರಗಿರಿ,ತಿರುಪತಿಗಳನ್ನು ಹಿಡಿಯಿತು. ಶ್ರೀರಂಗ ನೂ ರಾಜ್ಯವನ್ನು ರಕ್ಷಿಸುವ ಆಸೆಯನ್ನು ಕಳೆದುಕೊಂಡಿ ರಬೇಕು.ಗುರ್ರಂಕೊಂಡ ದುರ್ಗವೂ ಪತನವಾಯಿತು. ನಂತರದ ಮೂರು-ನಾಲ್ಕು ವರ್ಷಗಳಲ್ಲಿನ ಶ್ರೀರಂಗನ ಮೈಸೂರು ಸೀಮೆಯಲ್ಲಿನ ಅಲೆದಾಟದ ಬಗ್ಗೆ ಹೆಚ್ಚು ತಿಳಿ ದಿಲ್ಲ. ಮೈಸೂರು ಸೀಮೆಯಲ್ಲಿ ಅವನ ಹಿಡಿತ ಹೆಚ್ಚು ಕಾಲವಿ ರಲಿಲ್ಲ.ಈಮಧ್ಯೆ ಕರ್ನಾಟಕದಲ್ಲಿ ಮೀರ್ ಜುಮ್ಲಾನ ಪ್ರಭಾವ ಹೆಚ್ಚುತ್ತಿರುವುದನ್ನು ಗಮನಿಸಿದ ಕುತುಬ್‌ಷಾಹಿ ಸುಲ್ತಾನ ಕುತುಬ್‌ಷಹನು ಮೀರ್‌ಜುಮ್ಲಾನ ಪ್ರಭಾವ ವನ್ನು ತಗ್ಗಿಸಬೇಕೆಂದುಕೊಂಡ. ಇದರಿಂದಾಗಿ ಇಬ್ಬರಲ್ಲೂ ಭಿನ್ನಾಭಿಪ್ರಾಯವುಂಟಾಯಿತು.

ಇದರಿಂದಾಗಿ ಶ್ರೀರಂಗನು ಕರ್ನಾಟಕಕ್ಕೆ ಹಿಂದಿ ರುಗಿ ಬಿಜಾಪುರದವರು ಆಕ್ರಮಿಸಿದ್ದ ಸ್ಥಳಗಳನ್ನು ಪುನಃ ಪಡೆಯಲು ಮೀರ್‌ಜುಮ್ಲಾ ಪ್ರಚೋದಿಸಿದ. ಬಿಜಾಪುರದ ಸೇನಾನಿ ಖಾನ್‌ಮಹಮದನು ತಕ್ಷಣವೇ ವೆಲ್ಲೂರಿಗೆ ಬಂದು ಅಲ್ಲಿ ಬಿಜಾಪುರದ ಅಧಿಕಾರವನ್ನು ಪುನಃ ಸ್ಥಾಪಿ ಸಿಲು ಯತ್ನಿಸಿದ. ಯುದ್ಧದಲ್ಲಿ ಶ್ರೀರಂಗನು ಗೆದ್ದು ಖಾನನು ಚಂದ್ರಗಿರಿ ಹಾಗೂ ಸುತ್ತಣ ರಾಜ್ಯವನ್ನು ಬಿಟ್ಟುಕೊಟ್ಟು ಶಾಂತಿಯನ್ನು ಪಡೆಯಬಹುದೆಂದು ಒಪ್ಪಂದವಾಯಿತು. ಮೀರ್‌ಜುಮ್ಲನ ಸಂಚಿನಿಂದ ಕೋಪಗೊಂಡ ಅಬ್ದುಲ್ಲಾ ಕುತುಬ್‌ಷಹನು ಶ್ರೀರಂಗನೊಡನೆ ಒಪ್ಪಂದಮಾಡಿ ಕೊಂಡ.ಇದರಿಂದಾಗಿ ಶ್ರೀರಂಗನು ತಾನು ಕಳೆದು ಕೊಂಡ ಪ್ರದೇಶವನ್ನೆಲ್ಲ ಮರಳಿ ಪಡೆಯುವಂತಾಯಿತು. ಅವನು ತಿರುಪತಿಯನ್ನು ವಶಪಡಿಸಿಕೊಂಡು ಇತರ ಪ್ರಾಂತ್ಯಗಳನ್ನು ಆಕ್ರಮಿಸುವ ಯೋಜನೆಗೈದ,ಆದರೆ ಗೋಲ್ಕೊಂಡದ ನವಾಬನು ತನ್ನ ಸ್ನೇಹದ ಧೋರಣೆ ಯನ್ನು ಬದಲಾಯಿಸಿ ಕರ್ನಾಟಕದ ಮೇಲೆ ಮತ್ತೆ ದಂಡು ಕಳುಹಿಸಿದ. ಶ್ರೀರಂಗನು ಯುದ್ಧದಲ್ಲಿ ಸೋತು ಕ್ರಿ.ಶ.1653 ರಲ್ಲಿ ಬಿಜಾಪುರದ ಖಾನ್ ಮಹಮ್ಮದ್‌ನಿಂದ ಪಡೆದ ಚಂದ್ರ ಗಿರಿ ಕೋಟೆ 1658 ರಲ್ಲಿ ಕೈತಪ್ಪಿ ಕುತುಬ್‌ಷಹನ ಕೈವಶ ವಾಯಿತು.ಶ್ರೀರಂಗನು ಎರಡನೆಯ ಬಾರಿ ಅಲೆಮಾರಿ ಯಾಗಬೇಕಾಯಿತು. ಕ್ರಿ.ಶ.1665ರಲ್ಲಿ ಅವನು ಪೆನು ಗೊಂಡೆಗೆ ಹಿಂದಿರುಗಿದಂತೆಯೂ 1681 ರ ವರೆಗೆ ರಾಜ್ಯದ ಒಂದು ಭಾಗವನ್ನು ಆಳಿದಂತೆಯೂ ಕಂಡು ಬರುತ್ತದೆ.



# ಪದಬಂಧ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | | | | | |
| 2 | | 6 | | | | | | 5 |
| 3 | 2 | | | | | | | |
| 4 | 3 | | | | | | | 7 |
| 5 | 11 | | | | | | | 8 |
| 6 | | 4 | | | | | | |
| 7 | | | | | | 9 | | |
| 8 | | | | | | | 10 | 12 |

**– ಪಿ.ಜಿ. ಶ್ರೀನಿವಾಸನ್**

**-37 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.**

**ಎಡದಿಂದ ಬಲಕ್ಕೆ**

01. ಈ ಆಳ್ವಾರರ ನಾಲಾಯಿರ ಪ್ರಬಂಧ ಪೆರುಮಾಳ್ ತಿರುಮೊಷಿ ಹಾಗೂ ಸ್ತೋತ್ರ ಮುಕುಂದ ಮಾಲಾ ಬಹಳ ಜನಪ್ರಿಯ 'ಕುಲ' ಯಿಂದಾರಂಭ ...(4)

02. ಭಕ್ತಿಸಾರರ್ ಎಂದು ಪ್ರಸಿದ್ಧಲಿರುವ ಆಳ್ವಾರರ "ನಾನ್ಮುಹನ್ ತಿರುವಂದಾದಿ ಹಾಗೂ 'ತಿರುಚ್ಚಂದ ವಿರುತ್ತಂ ಪ್ರಬಂಧಗಳು ಬಹಳ ಪ್ರಸಿದ್ಧ ಇವರ ಹೆಸರು 'ಮ' ಯಿಂದಾರಂಭ ...(8)

03. ಕಣ್ಣಿನುಣ್ ಶಿರತ್ತಾಂಬು ಪ್ರಬಂಧದಿಂದ ಪ್ರಸಿದ್ಧರು. ಆಳ್ವಾರ್ ಪದ ಬಿಟ್ಟು ಇವರ ಹೆಸರು 'ಮ' ಯಿಂದಾರಂಭ ...(5)

04. ಶ್ರೀರಂಗನಾಥರನ್ನು ರಮಣೀಯವಾಗಿ ವರ್ಣಿಸಿರುವ 'ಅಮಲನಾದಿಪಿರಾನ್ ಕರ್ತೃ'ತಿ'ಯಿಂದಾರಂಭ ...(6)

**ಬಲದಿಂದ ಎಡಕ್ಕೆ**

05. ವಿಪ್ರನಾರಾಯಣರೆಂದು ಪ್ರಸಿದ್ಧರಾಗಿರುವ ಈ ಆಳ್ವಾರರ ಕೃತಿಗಳಾದ 'ತಿರುಮಾಲೈ' ಹಾಗೂ ಸುಪ್ರಭಾತ ಗೀತೆ ತಿರುಪ್ಪಳ್ಳಿ ಎಳುಚ್ಚಿ ಪ್ರಸಿದ್ಧ 'ಆಳ್ವಾರ್' ಇವರ ಹೆಸರಲ್ಲಿ ಮಾಯ. 'ತೊಂ' ನಿಂದಾರಂಭ ..(6)

06. ಮುದಲ್ ತಿರುವಂದಾದಿ ಕರ್ತೃ, ಇವರ ಹೆಸರಲ್ಲಿ ಆಳ್ವಾರ್ ಮಾಯವಾಗಿದೆ. ...(2)

07. ಆಂಡಾಳ್ ತಾಯಾರನ್ನು ಹೀಗೆ ದೇವಿ ಎಂದೂ ಕರೆಯುತ್ತಾರೆ 'ಗೋ' ಯಿಂದಾರಂಭ ... (4)

08. ಮಧುರೈಯಲ್ಲಿ ದೇವರಿಗೆ ಪಲ್ಲಾಂಡು ಪಲ್ಲಾಂಡು ಹಾಡಿದವರು 'ಪೆರಿ'ಯಿಂದಾರಂಭ 'ಇರಂಡಾಂತಿರುವಂದಾದಿ' ಪ್ರಬಂಧದಿಂದ ಬೆಳಕಿಗೆ ಬಂದವರು, ...(5)

09. 'ಪೂದ' ಯಿಂದಾರಂಭ ...(5)

10. ಆರು ಪ್ರಬಂಧಗಳನ್ನು ಬರೆದು ಖ್ಯಾತರಾಗಿರುತ್ತಾರೆ. ಇವರಹೆಸರಿನ ಮಧ್ಯೆ 'ಮಂಗೈ' ಯಿದೆ. ...(7)

**ಮೇಲಿಂದ ಕೆಳಕ್ಕೆ**

11. ವೇದಗಳ ಸಾರ ತುಂಬಿದ ನಾಲ್ಕು ಪ್ರಬಂಧಗಳನ್ನು ರಚಿಸಿ ಆಳ್ವಾರ್‌ರಲ್ಲಿ ವಿಶೇಷ ಕೀರ್ತಿ ಹೊಂದಿದವರು.'ನಮ್ಮ' ಎಂತಲೇ ಪ್ರಸಿದ್ಧ ...(4)

**ಕೆಳಗಿನಿಂದ ಮೇಲಕ್ಕೆ**

12. ಮೂನ್ರಾಂತಿರುವಂದಾದಿ ಕೃತಿಯಿಂದ ಪ್ರಸಿದ್ಧರು 'ಪೇ' ಯಿಂದಾರಂಭ ಹೆಸರಿನ ಕೊನೆಯಲ್ಲಿ ಆಳ್ವಾರ್‌ಮಾಯ ...(2)


ತಿರುಪತಿ
ಶ್ರೀ ಗೋವಿಂದರಾಜ ಸ್ವಾಮಿಯವರ
ತೆಪ್ಪೋತ್ಸವಗಳು
10-02-2022
ರಿಂದ
16-02-2022 ರ ವರೆಗೆ

# ದ್ವಾದಶಾದಿತ್ಯರು










**ಚೈತ್ರ - ಧಾತ**
ಧಾತಾ ಶುಭಸ್ಯ ಮೇ ದಾತಾ
ಭೂಯೋ ಭಯೋಽಪಿ ಭೂಯಸಃ ॥

**ವೈಶಾಖ - ಅರ್ಯಮ**
ಅರ್ಯಮಾ ತು ಸದಾ ಭೂತ್ಯೈ
ಭೂಯಸ್ಯೈ ಪ್ರಣತಸ್ಯ ಮೇ ॥

**ಜ್ಯೇಷ್ಠ - ಮಿತ್ರಃ**
ಮಿತ್ರೋಽಸ್ತು ಮಮ ಮೋದಾಯ
ತಮಸ್ತೋಮ ವಿನಾಶನಃ ॥










**ಆಶ್ವಯುಜ - ತ್ವಷ್ಟ**
ತ್ವಷ್ಟಾ ಶುಭಾಯ ಮೇ
ಭೂಯಾತ್ ಶಿಷ್ಟಾವಳಿನಿಷೇವಿತಃ ॥

**ಕಾರ್ತಿಕ - ವಿಷ್ಣು**
ಗಾಯತ್ರೀಪ್ರತಿಪಾದ್ಯಂ ತಂ
ವಿಷ್ಣು ಭಕ್ತ್ಯಾ ನಮಾಮ್ಯಹಮ್ ॥

**ಮಾರ್ಗಶಿರ - ಅಂಶುಮನ್**
ಮುನೀಂದ್ರನಿವಹಸ್ತುತ್ಯೋ
ಭೂತಿದೋಽಂಶುರ್ಭವೇನ್ಮಮ ॥





ದ್ವಾದಶಾದಿತ್ಯರು











**ಆಷಾಢ - ವರುಣ**
ವರುಣೋ ಧವಳೋ ಜಿಷ್ಣುಃ
ಪುರುಷೋ ನಿಮ್ನಗಾಧಿಪಃ ॥

**ಶ್ರಾವಣ - ಇಂದ್ರ**
ಸಹಸ್ರರಶ್ಮಿ ಸಂವೀತಂ
ಇಂದ್ರಂ ವರದ ಮಾಶ್ರಯೇ ॥

**ಭಾದ್ರಪದ - ವಿವಸ್ವಾನ್**
ನಭೋಗ್ರಹ ಮಹಾದೀಪಂ
ವಿವಸ್ವಂತಂ ನಮಾಮ್ಯಹಂ ॥







**ಪುಷ್ಯ - ಭಗಃ**
ಘಟಿಕಾನಾಂ ಚಯಃ ಕರ್ತಾ
ಭಗೋ ಭಾಗ್ಯಪ್ರದೋಽಸ್ತು ಮೇ ॥

**ಮಾಘ - ಪೂಷ**
ಪೂಷಾ ತೋಷಾಯ ಮೇ ಭೂಯಾತ್
ಸರ್ವ ಪಾಪಾಽಪನೋದನಾತ್ ॥

**ಫಾಲ್ಗುಣ - ಪರ್ಜನ್ಯಃ**
ಜಗದಾನಂದ ಜನಕಃ
ಪರ್ಜನ್ಯಃ ಪೂಜ್ಯತೇ ಮಯಾ ॥



02-12 -2021 ರಂದು ತಿರುಮಲೆಯ ವಸಂತಮಂಟಪದಲ್ಲಿ
ಶ್ರೀ ಧನ್ವಂತರಿ ಪೂಜೆಯನ್ನು ಶಾಸ್ತ್ರೋಕ್ತವಾಗಿ ತಿ.ತಿ.ದೇ., ನಿರ್ವಹಿಸಿತು.



15-12-2021 ರಿಂದ 19-12-2021 ರ ವರೆಗೆ ನಡೆದ
ತಿರುಪತಿ ಶ್ರೀ ಕಪಿಲೇಶ್ವರಸ್ವಾಮಿ ಆಲಯದಲ್ಲಿ ನಡೆದ ತೆಪ್ಪೋತ್ಸವಗಳು





11-12-2021 ರಂದು ಸಪ್ತ ಗೋ ಪ್ರದರ್ಶನ ಶಾಲೆಯನ್ನು ಸಂದರ್ಶಿಸಿದ ಕಂಚಿ ಪೀಠಾಧಿಪತಿ ಶ್ರೀ ಶ್ರೀ ಶ್ರೀವಿಜಯೇಂದ್ರ ಸರಸ್ವತಿ, ತಿ.ತಿ.ದೇ.,
ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಮತ್ತು ತಿರುಮಲೆ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ
ಶ್ರೀ ಎ.ವಿ. ಧರ್ಮಾರೆಡ್ಡಿಯವರು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು



16-12-2021 ರಂದು ತಿರುಪತಿಯಲ್ಲಿರುವ ಶ್ರೀ ಪದ್ಮಾವತಿ ಚಿಕ್ಕಮಕ್ಕಳ ಹೃದಯಾಲದಲ್ಲಿ ನೂತನವಾಗಿ ಏರ್ಪಡಿಸಿದ
ಅಡ್ವಾನ್ಸ್‌ಡ್ ಕಾರ್ಡಿಯಾಕ್ ಕ್ಯಾಥಟ್ರೇಷನ್ ಲ್ಯಾಬ್ ಅನ್ನು ಪ್ರಾರಂಭಿಸಿದ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು
ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ.,
ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ
ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು



31-12-2021 ರಂದು ಸ್ವಾಮಿಯವರ ಮತ್ತು ಪದ್ಮಾವತಿ ಅಮ್ಮನವರ ಚಿತ್ರಗಳಿಗೆ 3ಡಿ ಮತ್ತು ಬೆಳ್ಳಿ ಲೇಪನ
ಒಳಗೊಂಡಿರುವ 6 ಪೇಜಿನ ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡುತ್ತಿರುವ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು
ಶ್ರೀ. ವೈ.ವಿ. ಸುಬ್ಬಾರೆಡ್ಡಿಯವರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಡಾ॥ ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್.,
ರವರು, ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ ಯವರು, ತಿರುಪತಿ
ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ.ವಿ. ವೀರಬ್ರಹ್ಮ ರವರು ಮತ್ತು ಇತರ ಉನ್ನತಾಧಿಕಾರಿಗಳುಪಾಲ್ಗೊಂಡರು.

# ದೇವವ್ರತ



– ಡಾ॥ ಎಸ್. ನಂಜುಂಡಸ್ವಾಮಿ
78990 11310

ಗಂಗೆ ಮತ್ತು ಶಂತನುವಿನ ಮಗನಾದ ದೇವವ್ರತ ಅಥವಾ ಭೀಷ್ಮನು ಶಾಪದಿಂದ ಜನಿಸಿದ ಅಷ್ಟವಸುಗಳಲ್ಲಿ ಕಡೆಯವನು. ಮಹಾಭಾರತ ಕಾಲದ ಒಬ್ಬ ವೀರಾಧಿವೀರ. ಮಹಾಜ್ಞಾನಿ ವಸಿಷ್ಠ ಮಹರ್ಷಿಗಳಲ್ಲಿ ವೇದಾಭ್ಯಾಸವನ್ನು ಮಾಡಿ. ಪರಶುರಾಮರಲ್ಲಿ ಧನುರ್ವೇದವನ್ನು ಅಭ್ಯಾಸ ಮಾಡಿದನು. 12 ಜನ ಪರಮಭಾಗವತರಲ್ಲಿ ಅಂದರೆ ವಿಷ್ಣುವಿನ ಭಕ್ತರಲ್ಲಿ ಭೀಷ್ಮನು ಒಬ್ಬನೆನಿಸಿದ್ದಾನೆ. ಪಟ್ಟಕ್ಕೆ ಬರಬೇಕಾದ ಸಂದರ್ಭದಲ್ಲಿ ತಂದೆಯ ಸುಖಕ್ಕಾಗಿ ದಾಶರಾಜನ ಮಗಳು ಸತ್ಯವತಿಯನ್ನು ತಂದೆಗೆ ಮದುವೆ ಮಾಡಿಸಿದನು. ದಾಶರಾಜನು ನನ್ನ ಮಗಳ ಮಕ್ಕಳಿಗೇ ರಾಜ್ಯವು ದೊರೆಯಬೇಕೆಂದು ಷರತ್ತು ವಿಧಿಸಿದಾಗ ರಾಜ್ಯವನ್ನು ತ್ಯಜಿಸಿದನು, ಮತ್ತೆ ದಾಶರಾಜನು ನಿನ್ನ ಮಕ್ಕಳು ರಾಜ್ಯದ ಮೇಲೆ ಹಕ್ಕು ಸ್ಥಾಪಿಸಬಹುದು ಎಂದಾಗ ದೇವವ್ರತನು "ದಾಶರಾಜ ಕೇಳು, ನಾನು ರಾಜ್ಯವನ್ನು ತ್ಯಾಗ ಮಾಡಿದೆ, ಈಗ ಮಕ್ಕಳ ವಿಷಯವಾಗಿ ನಿಶ್ಚಯವನ್ನು ಮಾಡುತ್ತೇನೆ, ಇದು ಮೊದಲು ನಾನು ಮುಂದೆ ಬ್ರಹ್ಮಚಾರಿಯಾಗಿ ಇರುತ್ತೇನೆ, ನಾನು ಅಪುತ್ರವಂತನಾದರೂ ನನಗೆ ಸ್ವರ್ಗದಲ್ಲಿ ಅಕ್ಷಯ ಲೋಕಗಳು ದೊರೆಯುತ್ತವೆ" ಎಂದು ಪ್ರತಿಜ್ಞೆಯನ್ನು ಮಾಡಿದನು. ಈ ರೀತಿ ತಾನು ಮಾಡಿದ ಭೀಷಣವಾದ ಪ್ರತಿಜ್ಞೆಯಿಂದ ಭೀಷ್ಮನೆಂಬ ಹೆಸರನ್ನು ಪಡೆದನು. ಆಗ ಇವನದ್ದು ತಾರುಣ್ಯದ ವಯಸ್ಸು.

ತನ್ನ ಮಲತಾಯಿಯಾದ ಸತ್ಯವತಿಯ ಮಕ್ಕಳಿಗೆ ಅಂದರೆ, ತನ್ನ ತಮ್ಮಂದಿರಾದ ಚಿತ್ರಾಂಗದ ಮತ್ತು ವಿಚಿತ್ರವೀರ್ಯರಿಗೆ ಪಟ್ಟಕಟ್ಟಿ ಅವರ ರಕ್ಷಣೆಗೆ ನಿಂತನು. ಚಿತ್ರಾಂಗದನು ಮದುವೆಗೆ ಮುಂಚೆಯೇ ಮಡಿದನು. ತಮ್ಮನಾದ ವಿಚಿತ್ರವೀರ್ಯನಿಗೆ ಪಟ್ಟಕಟ್ಟಿ ಕಾಶೀರಾಜನ ಕನ್ಯೆಯರಾದ ಅಂಬೆ, ಅಂಬಿಕೆ, ಅಂಬಾಲಿಕೆಯರ ಸ್ವಯಂವರ ಮಹೋತ್ಸವಕ್ಕೆ ಹೋಗಿ, ಏಕರಥಿಕನಾಗಿ ಅಲ್ಲಿದ್ದ ಎಲ್ಲ ರಾಜರನ್ನು ಯುದ್ಧದಲ್ಲಿ ಗೆದ್ದು, ಆ ಕನ್ಯೆಯರನ್ನು ಕರೆದುಕೊಂಡು ಬಂದು, ಅವರ ಪೈಕಿ ಅಂಬಿಕೆ, ಅಂಬಾಲಿಕೆಯರನ್ನು ವಿಚಿತ್ರವೀರ್ಯನಿಗೆ ಮದುವೆ ಮಾಡಿಸಿದನು. ಅಂಬೆಯು ಮದುವೆಯಾಗಲು ಒಪ್ಪದೆ ಭೀಷ್ಮನನ್ನು ಕೊಲ್ಲುವುದಾಗಿ ಹೇಳಿ ಅಗ್ನಿಪ್ರವೇಶ ಮಾಡಿ ಸಾಯುತ್ತಾಳೆ. ವಿಚಿತ್ರವೀರ್ಯನು ಕ್ಷಯರೋಗ ಪೀಡಿತನಾಗಿ ಸಂತತಿರಹಿತವಾಗಿ ಮಡಿಯಲು, ತಾಯಿ ಸತ್ಯವತಿಯು ಮಗನಾದ ಭೀಷ್ಮನನ್ನು ಕುರಿತು, ನೀನೇ ನಿನ್ನ ತಮ್ಮನ ಹೆಂಡತಿಯರನ್ನು ವರಿಸು, ಸಂತಾನವನ್ನು ಪಡೆ, ರಾಜ್ಯವನ್ನು ಆಳು ಎಂದು ಹೇಳಲು ಕೊಟ್ಟ ಮಾತನ್ನು ನಡೆಸಲು ನಾನು ದೇವರಾಜ್ಯವನ್ನೂ ತೊರೆಯುವೆನು, ನಾನು ಸತ್ಯವನ್ನು ಮಾತ್ರ ಬಿಡಲಾರೆ ಎಂದು ಖಡಾಖಂಡಿತವಾಗಿ ಹೇಳಿದನು. ಆಗ ಸತ್ಯವತಿಯು ತನ್ನ ಮಗನಾದ ವ್ಯಾಸ ಮಹರ್ಷಿಯನ್ನು ಕರೆಯಿಸಿ ಅವನ ಮೂಲಕ ನಿಯೋಗ ಪದ್ಧತಿಯಿಂದ ಅಂಬಿಕೆ, ಅಂಬಾಲಿಕೆಯರು ಸಂತಾನ ಪಡೆಯುವ ಏರ್ಪಾಡು ಮಾಡುತ್ತಾಳೆ. ಅಂಬಿಕೆಗೆ ಜನಿಸಿದ ಧೃತರಾಷ್ಟ್ರನು ಹುಟ್ಟು ಕುರುಡನಾಗಲು, ಅಂಬಾಲಿಕೆಗೆ ಜನಿಸಿದ ಪಾಂಡುವಿಗೆ ಹಸ್ತಿನಾವತಿಯ ಪಟ್ಟವನ್ನು ಕಟ್ಟಿ ರಾಜನನ್ನಾಗಿ ಮಾಡಿ, ಅವನು ದೊಡ್ಡವನಾಗುವವರೆಗೆ ರಾಜ್ಯದ ಹೊಣೆಯನ್ನು ನಿರ್ವಹಿಸುತ್ತಾನೆ.

ಪಾಂಡುವಿನ ಆಕಸ್ಮಿಕ ಮರಣದಿಂದ ಮತ್ತೆ ರಾಜ್ಯಕ್ಕೆ ಭೀಷ್ಮನೇ ವಾರಸುದಾರನಾದರೂ ಅವನು ರಾಜ್ಯವನ್ನು ಹಿಡಿಯಲಿಲ್ಲ. ಮಹಾಭಾರತ ಕಥೆಯಲ್ಲಿ ತಾತ ಅಥವಾ ಅಜ್ಜನಾದ ಭೀಷ್ಮನದು ನಿರ್ಣಾಯಕ ಪಾತ್ರ, ತನ್ನ ತಮ್ಮ ಮಕ್ಕಳಾದ ಪಾಂಡು, ಧೃತರಾಷ್ಟ್ರರನ್ನು ಸಾಕಿ ಸಲಹಿ, ಪಾಂಡುವಿಗೆ ಕುಂತಿ, ಮಾದ್ರಿ ಮತ್ತು ಧೃತರಾಷ್ಟ್ರನಿಗೆ ಗಾಂಧಾರಿಯನ್ನು ತಂದು ಮದುವೆ ಮಾಡಿಸುತ್ತಾನೆ. ಅವರ ಮಕ್ಕಳಾದ ಪಾಂಡವರು ಮತ್ತು ಕೌರವರನ್ನು ಬಾಲ್ಯದಿಂದ ಸಾಕಿ, ಸಲಹಿ, ಅವರಿಗೆ ವಿದ್ಯಾಭ್ಯಾಸ ಮತ್ತು ಶಸ್ತ್ರಾಭ್ಯಾಸಗಳನ್ನು ಮಾಡಿಸಿದನು. ಪಾಂಡವರು ಕೌರವರು ಪರಸ್ಪರ ದಾಯಾದಿಗಳಾಗಿ ಬೆಳೆದುದನ್ನು ನೋಡಿ, ಬಹಳ ವ್ಯಥೆಪಟ್ಟು, ಕೊನೆಗೆ ಅವರಿಗೆ ರಾಜ್ಯವನ್ನು ಹಂಚಿಕೊಟ್ಟು ಪ್ರತ್ಯೇಕವಾಗಿ ರಾಜ್ಯವನ್ನು ಆಳುವ ವ್ಯವಸ್ಥೆ ಮಾಡಿದನು. ಪಾಂಡವರು ಅರಗಿನ ಮನೆಯಲ್ಲಿ ಸುಟ್ಟು ಹೋದರೆಂಬ ಸುದ್ದಿಯನ್ನು ಕೇಳಿ ಬಹಳ ಪರಿತಪಿಸಿದನು. ಆದರೆ ವಿದುರನಿಂದ ನಿಜಸ್ಥಿತಿ ತಿಳಿದು ಸಮಾಧಾನ ಹೊಂದುತ್ತಾನೆ. ಧರ್ಮರಾಯನು ಇಂದ್ರಪ್ರಸ್ಥದಲ್ಲಿ ರಾಜಸೂಯಯಾಗ ವನ್ನು ಮಾಡುವ ಸಮಯದಲ್ಲಿ ಅಗ್ರಪೂಜೆಗೆ



ಯಾರು ಅರ್ಹರು ಎಂದು ಭೀಷ್ಮನನ್ನು ಕೇಳಿದಾಗ, "ಯಶಸ್ಸು, ಶೌರ್ಯ,ಜಯ,ಪರಾಕ್ರಮ ಇವುಗಳನ್ನು ಗಮನಿಸಿದಲ್ಲಿ ಕೃಷ್ಣನೇ ಅಗ್ರಪೂಜೆಗೆ ಅರ್ಹನೆಂದು" ಹೇಳಿದನು.ಧರ್ಮಿಷ್ಟರಾದ ಪಾಂಡವರು ಕೃಷ್ಣನ ಮೊರೆಹೋಗಿ ಅವನ ರಕ್ಷಣೆಯಲ್ಲಿರುವಂತೆ ಉಪಾಯವನ್ನು ತೋರಿಸಿದವನು ಭೀಷ್ಮನೇ ಎಂದು ಹೇಳಬಹುದು.

ಕೌರವರ ಕಪಟ ದ್ಯೂತದಲ್ಲಿ ಸೋತ ಪಾಂಡವರು ವನವಾಸಕ್ಕೆ ಹೋದಾಗ ಅಜ್ಜನಾದ ಭೀಷ್ಮನಿಗೆ ಸುಮಾರು 80 ವರ್ಷವೆಂದು ಹೇಳಬಹುದು.ಆದುದರಿಂದ ಅವನು ಕೌರವರ ಜೊತೆ ಅರಮನೆಯಲ್ಲೇ ಉಳಿದುಕೊಂಡನು. ಕಪಟ ದ್ಯೂತದ ಸಮಯದಲ್ಲಿ ನಡೆದ ದ್ರೌಪದಿಯ ವಸ್ತ್ರಾಪಹರಣದಲ್ಲಿ ದ್ರೌಪದಿಯ ಪ್ರಶ್ನೆಗೆ ಉತ್ತರಿಸಿದ ಭೀಷ್ಮನು "ಸೌಭಾಗ್ಯವತಿ, ಇದು ಧರ್ಮಸೂಕ್ಷ್ಮವಾದ ವಿಚಾರ, ಯುಧಿಷ್ಠರನು ಸತ್ಯವನ್ನು ಬಿಡುವುದಿಲ್ಲ.ಅವನೇ ನಿನ್ನನ್ನು ಪಣಕ್ಕೆ ಇಟ್ಟು ನಾನು ಸೋತೆ ಎಂದು ಒಪ್ಪಿಕೊಂಡಿದ್ದಾನೆ, ನಾನು ಏನೂ ಉತ್ತರ ಹೇಳಲು ಸಾಧ್ಯವಿಲ್ಲ" ಎಂದು ಹೇಳಿಬಿಟ್ಟನು.ಭೀಷ್ಮನು ಈ ಅನಾಹುತವನ್ನು ತಪ್ಪಿಸಲಿಲ್ಲವೆಂಬುದು ನಿಜಕ್ಕೂ ಆಶ್ಚರ್ಯಕರ, ಭೀಷ್ಮನು ಪಾಂಡವರ ಜೊತೆ ಇಂದ್ರಪ್ರಸ್ಥದಲ್ಲಿ ಹೋಗಿ ನೆಲೆಸದೇ, ಹಿರಿಯನಾದ ಧೃತರಾಷ್ಟ್ರನ ಜೊತೆಗೆ ಹಸ್ತಿನಾವತಿಯಲ್ಲೇ ಉಳಿದುದು,ದುರ್ಯೋಧನನ ಅನ್ನ ಋಣದಲ್ಲಿ ಬಿದ್ದುದೇ, ಇದಕ್ಕೆ ಕಾರಣವೆಂದು ಹೇಳಬಹುದು. ವಿಧಿವಿಲಾಸದಂತೆ ಮುಂದೆ ಒದಗಲಿರುವ ಅನಾಹುತವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆಂಬ ಚಿಂತನೆ ಅವನಲ್ಲಿತ್ತು ವಿರಾಟಪರ್ವದ ಗೋಗ್ರಹಣದಲ್ಲಿ ದುರ್ಯೋಧನನು ಭೀಷ್ಮರನ್ನು ಕುರಿತು ಅರ್ಜುನನು ನಮಗೆ ಕಾಣಿಸಿಕೊಂಡನು, ಅವರ ಅಜ್ಞಾತವಾಸದ ಅವಧಿ ಇನ್ನೂ ಮುಗಿದಿಲ್ಲ. ಪಾಂಡವರು ಮತ್ತೆ ಅರಣ್ಯ ವಾಸಕ್ಕೆ ಹೋಗಬೇಕೆಂದು ಹೇಳುತ್ತಾನೆ. ಆಗ ಭೀಷ್ಮರು ಹತ್ತು ವರ್ಷಗಳ ಅವಧಿಯಲ್ಲಿ ಎರಡು ಅಧಿಕಮಾಸ ಬಂದಿದೆ. ಅದನ್ನೂ ಸೇರಿಸಿದರೆ ಅವರ ಅಜ್ಞಾತವಾಸದ ಅವಧಿ ನಿನ್ನೆಗೇ ಮುಗಿದು ಹೋಗಿದೆ. ಅರ್ಜುನನನ್ನು ಕಾಳಗದಲ್ಲಿ ಗೆಲ್ಲಲು ಸಾಧ್ಯವಿಲ್ಲ, ಪಾಂಡವರನ್ನು ಕರೆಸಿ ಸಂಧಿ ಮಾಡಿಕೋ,ಈ ಲೋಕದಲ್ಲಿ ನಿನ್ನ ಸರಿಸಮಾನರು ಇಲ್ಲದಂತಾಗುತ್ತಾರೆ ಎಂದು ದುರ್ಯೋಧನನಿಗೆ ಬುದ್ಧಿವಾದ ಹೇಳಿದನೆಂದು ಕುಮಾರವ್ಯಾಸ ಭಾರತದಲ್ಲಿ ಹೇಳಿದೆ. ಆದರೆ ದುರ್ಯೋಧನನು ಅದಕ್ಕೆ ಒಪ್ಪದೇ ಗೋ ಗ್ರಹಣದ ಯುದ್ಧವನ್ನು ಮುಂದುವರಿಸಲು ಭೀಷ್ಮನು. ಅರ್ಜುನನೊಡನೆ ಸರಿಸಮನಾಗಿ ಯುದ್ಧಮಾಡಿ, ಅರ್ಜುನನ ಬಾಣದಿಂದ ಮೂರ್ಛೆ ಹೋಗುತ್ತಾನೆ. ಉದ್ಯೋಗ ಪರ್ವದಲ್ಲಿ ಕೃಷ್ಣನು ವಿಶ್ವರೂಪವನ್ನು ತೋರಿಸಿದಾಗ ಅದನ್ನು ಭೀಷ್ಮ, ದ್ರೋಣ, ವಿದುರ ಮತ್ತು ಸಂಜಯ ಈ ನಾಲ್ಕು ಜನರು ಮಾತ್ರ ದರ್ಶನ ಮಾಡಿದರು ಎಂದು ಹೇಳಿದೆ. ಭೀಷ್ಮನೂ ಕೂಡಾ ಕೃಷ್ಣನನ್ನು ಕಟ್ಟಿ ಹಾಕುವುದು ಬೇಡ ಎಂದು ಹೇಳುತ್ತಾನೆ.

ಕುರುಕ್ಷೇತ್ರ ಮಹಾಯುದ್ಧದಲ್ಲಿ ಭೀಷ್ಮನಿಗೆ ಸುಮಾರು 95 ವರ್ಷವಾಗಿದ್ದಿರಬಹುದು. ಹದಿನೆಂಟು ದಿನಗಳ ಕಾಲ ನಡೆದ ಯುದ್ಧದಲ್ಲಿ ಕೌರವರ ಪರ ಮೊದಲ ಸೇನಾಧಿಪತಿಯಾಗಿ, ಪ್ರಚಂಡವಾಗಿ ಹತ್ತು ದಿನಗಳ ಕಾಲ ಯುದ್ಧ ಮಾಡಿದನು. ಮೂರನೆಯ ದಿನದ ಯುದ್ಧದಲ್ಲಿ, ದುರ್ಯೋಧನನು ಹಂಗಿಸಲು, ಅದರಿಂದ ಕೆರಳಿದ ಭೀಷ್ಮನು ಉಗ್ರವಾಗಿ ಹೋರಾಡಲು ಆರಂಭಿಸಿದನು. ಭೀಷ್ಮನು ಬಾಣ ಪ್ರಹಾರದಿಂದ ಕೆರಳಿದ ಕೃಷ್ಣನು ಚಕ್ರವನ್ನು ಹಿಡಿದು ಭೀಷ್ಮನನ್ನು ಸಂಹರಿಸುತ್ತೇನೆಂದು ಬಂದನು. ಆಗ ಅರ್ಜುನನು ಕೃಷ್ಣನನ್ನು ಸಮಾಧಾನ ಪಡಿಸಿದನು. ಪರಮ ಭಾಗವತನಾದ ಭೀಷ್ಮನು "ಡಿಂಗರಿಗರೇ ಮಿಗಿಲು, ಡಿಂಗರಿಗರೇ ಬಲ್ಲಿದರು, ನಿಮ್ಮಡಿಯ ಸಿರಿನಾಮವೇ ಮುಕುತಿ ಪಥದಲ್ಲಿ ನನ್ನನ್ನು ಕಾಯುತ್ತದೆ. ನಿನ್ನ ಕೈಯಿಂದ ಸತ್ತರೆ ನನಗೆ ಇಹಪರಗಳೆರಡೂ ಉಂಟು" ಎಂದು ಕೃಷ್ಣನನ್ನು ಸ್ತುತಿಸಿದಾಗ, ಕೃಷ್ಣನು ಭಕ್ತನ ಬಿನ್ನಹಕ್ಕೆ ನಾಚಿ ಚಕ್ರವನ್ನು ಮುಚ್ಚಿದನೆಂದು ಕುಮಾರವ್ಯಾಸನು ಹೇಳುತ್ತಾನೆ. ಒಂಬತ್ತನೆಯ ದಿನದ ಯುದ್ಧದ ರಾತ್ರಿ ಶ್ರೀ ಕೃಷ್ಣನೇ ಪಾಂಡವರನ್ನು ಮುಂದಿಟ್ಟುಕೊಂಡು ಭೀಷ್ಮನ ಪಾಳೆಯಕ್ಕೆ ಹೋಗುತ್ತಾನೆ. ಕೃಷ್ಣನ ಉಪಾಯ ಫಲಿಸುತ್ತದೆ,ಶಿಖಂಡಿಯೊಡನೆ ನಾನು ಯುದ್ಧ ಮಾಡುವುದಿಲ್ಲ. ಆಗ ಅರ್ಜುನನು ನನ್ನನ್ನು ಹೊಡೆಯಲಿ ಎಂಬ ಉಪಾಯವನ್ನು ಭೀಷ್ಮನು ಹೇಳಿಕೊಡುತ್ತಾನೆ.ಹತ್ತನೆಯದಿನ ಯುದ್ಧದಲ್ಲಿ ಭೀಷ್ಮನು ಅರ್ಜುನನ ಬಾಣ ರಾಶಿಯ ಹೊಡೆತದಿಂದ ಶರಶಯ್ಯೆಯಲ್ಲಿ ಮಲಗುತ್ತಾನೆ. ಭೀಷ್ಮನು ಬಿದ್ದ ವಿಚಾರವನ್ನು ಕೇಳಿ ಅವನನ್ನು ವಿರೋಧಿಸುತ್ತಿದ್ದ ಕರ್ಣನೂ ಸಹ ಬಂದು ಭೀಷ್ಮನ ಕಾಲಿಗೆರಗಿ ಕಣ್ಣೀರು ಹಾಕಿ ಕ್ಷಮೆಯಾಚಿಸುತ್ತಾನೆ.ಭೀಷ್ಮನು.ಕರ್ಣನನ್ನು ತಬ್ಬಿಕೊಂಡು "ಕರ್ಣಾ ನೀನು ರಾಧೇಯನಲ್ಲ, ಕೌಂತೇಯ, ಪರಾಕ್ರಮದಲ್ಲಿ ನೀನು ಅರ್ಜುನ ಮತ್ತು ಕೃಷ್ಣನಿಗೆ ಸರಿಸಮಾನನು.ನಿನ್ನ ಹೆಮ್ಮೆಯನ್ನು ತಗ್ಗಿಸಲು ನಿನ್ನ ಬಗ್ಗೆ ನಾನು ಕಠಿಣವಾದ ಮಾತನ್ನಾಡಿದ್ದೇನೆ, ನಿನ್ನ ಶೌರ್ಯಪರಾಕ್ರಮಗಳನ್ನು ನಾನು ಬಲ್ಲೆ" ಎಂದು ಸಮಾಧಾನ ಪಡಿಸುತ್ತಾನೆ. ಇವೆಲ್ಲಾ ಭೀಷ್ಮನ ದೊಡ್ಡ ಗುಣವನ್ನು ತೋರಿಸುವ ಘಟನೆಗಳಾಗಿವೆ.

ಮಹಾಭಾರತ ಯುದ್ಧವೆಲ್ಲಾ ಮುಗಿದು ದುರ್ಯೋಧನನೊಬ್ಬನೇ ಉಳಿದಾಗ, ಅವನು ಭೀಷ್ಮನನ್ನು ಕಂಡು ಅವನ ಸಲಹೆ ಕೇಳುತ್ತಾನೆ. ಆಗಲೂ ಕೂಡಾ ಭೀಷ್ಮನು ನೀನೂ ಈಗಲೂ ಪಾಂಡವರೊಡನೆ ಸಂಧಿಯನ್ನು ಮಾಡಿಕೊ, ನಾನು ಸಂಧಿ ಮಾಡಿಸುತ್ತೇನೆಂದು ಹೇಳಿದನೆಂದು, ದುರ್ಯೋಧನನು ಅದಕ್ಕೆ ಒಪ್ಪದೇ ಇರಲು, ಬಲರಾಮನು ಬರುವವರೆಗೆ ವೈಶಂಪಾಯನ ಸರೋವರದಲ್ಲಿ ಜಲ ಸ್ಥಂಭನದಿಂದ ಮುಳುಗಿರು ಎಂದು ಹೇಳಿಕೊಟ್ಟನೆಂದು ಮಹಾಭಾರತದ ಕೆಲವು ಅವತರಣಿಕೆಗಳಲ್ಲಿ ಬಂದಿದೆ. ಆದರೆ ವ್ಯಾಸಭಾರತದಲ್ಲಿ ಈ ಘಟನೆ ಇಲ್ಲ.

ಮಹಾಭಾರತದ ಶಾಂತಿಪರ್ವವು ಭೀಷ್ಮನ ರಾಜನೀತಿಜ್ಞತೆ, ಜ್ಞಾನ, ಧರ್ಮಪರಾಯಣತೆಯನ್ನು ತಿಳಿಸತಕ್ಕ ಒಂದು ಪರ್ವವೆಂದು ಹೇಳಬಹುದು. ಕಾರಣ ಈ ಪರ್ವದ ಪೂರ್ತಿ ಭೀಷ್ಮನು ಯುಧಿಷ್ಠಿರನಿಗೆ ಬೋಧಿಸಿದ ರಾಜಧರ್ಮದ ವಿವರವೇ ತುಂಬಿದೆ.ಜೊತೆಗೆ ವಿಷ್ಣುಸಹಸ್ರನಾಮ,ಶಿವಸಹಸ್ರನಾಮಗಳನ್ನೂ ಸಹ ಭೀಷ್ಮನು ಯುಧಿಷ್ಠಿರನಿಗೆ ಉಪದೇಶಿಸುತ್ತಾನೆ. ದುರ್ಯೋಧನನೂ ಹತನಾದ ಮೇಲೆ, ಯುಧಿಷ್ಠಿರನು ಪಟ್ಟಾಭಿಷಿಕ್ತನಾಗುತ್ತಾನೆ.ಮರುದಿನ ಧರ್ಮರಾಯನು ಕೃಷ್ಣನ ಬಿಡಾರಕ್ಕೆ ಹೋದಾಗ, ಕೃಷ್ಣನು ಏನೋ ಗಹನವಾದ ಯೋಚನೆಯನ್ನು ಮಾಡುತ್ತಿರುತ್ತಾನೆ. ಯುಧಿಷ್ಠಿರನು ಕೃಷ್ಣಾ ಏನು ಯೋಚನೆ ಮಾಡುತ್ತಿದ್ದೀಯಾ ಎಂದಾಗ, "ಶರಶಯ್ಯೆಯದಲ್ಲಿ ಮಲಗಿರುವ ಭೀಷ್ಮನನ್ನು ಕುರಿತು ಯೋಚಿಸುತ್ತಿದ್ದೇನೆ, ಗಂಗೆಯ ಮಗನಾಗಿ, ವಸಿಷ್ಠರ ಬಳಿ ವೇದಾಧ್ಯಯನ ಮಾಡಿ, ಪರಶುರಾಮನಲ್ಲಿ ಶಸ್ತ್ರಾಸ್ತ್ರ ವಿದ್ಯಾಭ್ಯಾಸವನ್ನು ಮಾಡಿ , ಭೂತ ಭವಿಷ್ಯ ವರ್ತಮಾನವನ್ನು ತಿಳಿದಿರುವಂತಹ ಭೀಷ್ಮ ಮಹಾನುಭಾವನ ಬಗ್ಗೆ ಯೋಚಿಸುತ್ತಿದ್ದೇನೆ, ಅವನು ಬದುಕಿರುವಾಗಲೇ ಅವನ ಹತ್ತಿರ ಹೋಗಿ ರಾಜಧರ್ಮ, ಲೋಕ ಧರ್ಮಗಳನ್ನೆಲ್ಲಾ ಅವನಿಂದ ತಿಳಿದುಕೋ ಎಂದು ಕೃಷ್ಣನು ಸಲಹೆ ನೀಡುತ್ತಾನೆ. ಭೀಷ್ಮನು ಧರ್ಮರಾಯನಿಗೆ ಕ್ಷತ್ರಿಯ ಧರ್ಮ ಮೊದಲಾದವನ್ನು ವಿವರವಾಗಿ ನೂರಾರು ಕತೆಗಳು ಮತ್ತು ಉದಾರಹಣೆಗಳ ಸಮೇತ ವಿವರಿಸುತ್ತಾನೆ.ಇದು ಭೀಷ್ಮನು ಎಂತಹ ಜ್ಞಾನಿ ಎಂಬುದನ್ನು ಸಾಬೀತುಪಡಿಸುತ್ತದೆ. ತಾನು ಉತ್ತರಾಯಣ ಬಂದ ಮೇಲೆ ದೇಹತ್ಯಾಗ ಮಾಡುವುದಾಗಿಯೂ, ಆಗ ಪಾಂಡವರು ಬರುವಂತೆಯೂ ಅವರನ್ನು ಬೀಳ್ಕೊಡುತ್ತಾನೆ.

ಭೀಷ್ಮನು ಹೇಳಿದಂತೆ, ಉತ್ತರಾಯಣ ಪುಣ್ಯಕಾಲದಲ್ಲಿ ವಿದುರ, ಧೃತರಾಷ್ಟ್ರ ಮತ್ತು ಪಾಂಡವರು ಅವನ ಬಳಿಗೆ ಬರುತ್ತಾರೆ. ಆಗ ಭೀಷ್ಮನು 'ಯುಧಿಷ್ಠಿರ ನಾನು ಶರಶಯ್ಯೆಯಲ್ಲಿ ಮಲಗಿ ಇಂದಿಗೆ ಐವತ್ತೆಂಟು ದಿನವಾಗಿದೆ.ಈಗ ಪುಣ್ಯಕರವಾದ ಮಾಘಮಾಸ ಬಂದಿದೆ. ಶುಕ್ಲಪಕ್ಷದಲ್ಲಿ ಇನ್ನೂ ಮುಕ್ಕಾಲು ಪಾಲು ಇದೆ (ಸುಮಾರು 10 ದಿನ) ಎಂದು ಹೇಳುತ್ತಾನೆ. ಧೃತರಾಷ್ಟ್ರನನ್ನು ಕುರಿತು "ಶೋಕಿಸಬೇಡ, ನಡೆಯಬೇಕಾದ್ದು ನಡೆದೇ ಹೋಯಿತು.ಪಾಂಡವರು ಕೂಡಾ ನಿನ್ನ ಮಕ್ಕಳು, ನಿನಗೆ ವಿಧೇಯರಾಗಿ ನಿನ್ನ ಶುಶ್ರೂಷೆ ಮಾಡುತ್ತಾರೆ. ನಿನ್ನ ಮಕ್ಕಳು ಕ್ರೋಧ ಲೋಭ, ,ಅಸೂಯೆಯಿಂದ ಅಧರ್ಮ ಮಾರ್ಗವನ್ನು ಹಿಡಿದು ಹಾಳಾದರು,ಅವರಿಗಾಗಿ ದುಃಖಿಸಬೇಡ" ಎಂದು ಸಮಾಧಾನ ಪಡಿಸುತ್ತಾನೆ. ಕೃಷ್ಣನನ್ನು ಕುರಿತು, "ವಾಸುದೇವ ಪಾಂಡವರನ್ನು ಕಾಪಾಡಿಕೋ ನೀನು ಸಂಧಿಗೆ ಬಂದಾಗ ಕೃಷ್ಣನಿದ್ದೆಡೆ ಜಯವಾಗುತ್ತದೆ. ಸಂಧಿ ಮಾಡಿಕೋ ಎಂದು ದುರ್ಯೋಧನನಿಗೆ ಹೇಳಿದೆ.ಆ ಮೂಢನು ನನ್ನ ಮಾತನ್ನು ಕೇಳಲಿಲ್ಲ,ನೀನು ನಾರಾಯಣನ ಅವತಾರವೆಂದು ನನಗೆ ವ್ಯಾಸ ಮಹರ್ಷಿಗಳು ಮತ್ತು ನಾರದರು ಹೇಳಿದ್ದಾರೆ. ನನಗೆ ದೇಹ ಬಿಡಲು ಅಪ್ಪಣೆ ಕೊಡು, ನೀನು ಅನುಜ್ಞೆ ಕೊಟ್ಟರೆ ನನಗೆ ಸದ್ಗತಿ ಲಭಿಸುತ್ತದೆ" ಎಂದು ಹೇಳುತ್ತಾನೆ. ಆಗ ಕೃಷ್ಣನು "ಭೀಷ್ಮ ನಿನಗೆ ಅನುಜ್ಞೆ ಕೊಟ್ಟಿದ್ದೇನೆ, ಹೋಗು, ಅಷ್ಟವಸುಗಳನ್ನು ಕೂಡಿಕೋ, ನೀನು ನಿರ್ದೋಷಿ, ಪಿತೃಭಕ್ತ ರಾಜರ್ಷಿ, ಮಾರ್ಕಂಡೇಯನ ಸಮಾನ, ಮೃತ್ಯುವು ನಿನ್ನ ಆಜ್ಞೆಗಾಗಿ ಕೈಕಟ್ಟಿಕೊಂಡು ನಿನ್ನ ಬಳಿ ನಿಂತಿದೆ" ಎಂದು ಹೇಳುತ್ತಾನೆ. ಆಗ ಭೀಷ್ಮನು ದೇಹವನ್ನು ಬಿಡುತ್ತಾನೆ. ಅವನ ಪ್ರಾಣವು ಉಲ್ಕೆಯ ರೂಪದಲ್ಲಿ ಆಕಾಶದಲ್ಲಿ ಲೀನವಾಗುತ್ತದೆ. ದೇವ ದುಂದುಭಿಗಳು ಮೊಳಗುತ್ತವೆ. ಪಾಂಡವರು. ವಿದುರನು ಶ್ರೀಗಂಧದ ಚಿತೆಯನ್ನು ಸಿದ್ಧಪಡಿಸಿ, ಭೀಷ್ಮನ ದೇಹವನ್ನು ಪೂಜಿಸಿ, ಪಿತೃಯಜ್ಞವನ್ನು ಮಾಡಿ ಬಳಿಕ ಭೀಷ್ಮನ ದೇಹಕ್ಕೆ ಅಗ್ನಿ ಸಂಸ್ಕಾರ ಮಾಡಿ, ಗಂಗಾತೀರಕ್ಕೆ ಹೋಗಿ ತರ್ಪಣ ಕೊಡುತ್ತಾರೆ. ಆಗ ಗಂಗಾದೇವಿಯು ನದಿಯಿಂದ ಎದ್ದು ಬಂದು ಕಣ್ಣೀರು ಹಾಕುತ್ತಾಳೆ.ಕೃಷ್ಣನು ಭೀಷ್ಮನು ಶಾಪದಿಂದ ಮನುಷ್ಯ ರೂಪ ಪಡೆದಿದ್ದು ವಸು ಎಂಬುದನ್ನು ಜ್ಞಾಪಿಸಿ ಗಂಗೆಯನ್ನು ಸಮಾಧಾನ ಪಡಿಸುತ್ತಾನೆ.

ಈ ರೀತಿ ಪಾಂಡವರು ಭೀಷ್ಮನಿಗೆ ತರ್ಪಣ ಕೊಟ್ಟ ದಿನವೇ ಉತ್ತರಾಯಣ ಪುಣ್ಯ ಕಾಲದ ಶಿಶಿರ ಋತುವಿನ ಮಾಘ ಮಾಸ ಶುಕ್ಲಪಕ್ಷದ ರಥಸಪ್ತಮಿಯ ದಿನ ಬರುವ ಭೀಷ್ಮ ತರ್ಪಣ ದಿವಸ. ಆ ನಂತರ ಬರುವ ಏಕಾದಶಿಯನ್ನು ಭೀಷ್ಮ ಏಕಾದಶಿ ಎಂದು, ಮಾರನೆಯ ದಿವಸ ಬರುವ ದ್ವಾದಶಿಯನ್ನು ಭೀಷ್ಮ ದ್ವಾದಶಿ ಎಂದು ಕರೆಯುತ್ತಾರೆ.ಈ ದಿನಗಳಲ್ಲಿ ರಾಜರ್ಷಿಯಾದ ಭೀಷ್ಮನನ್ನು ಸ್ಮರಿಸಿ,ಅವನು ಯುಧಿಷ್ಠಿರನಿಗೆ ಉಪದೇಶಿಸಿದ ವಿಷ್ಣು ಸಹಸ್ರನಾಮವನ್ನು ಪಠಿಸೋಣ.ಈ ದಿನಗಳಲ್ಲಿ ಮಹಾಭಾರತದ ಶಾಂತಿ ಪರ್ವವನ್ನು ಸಹ ಓದಬಹುದು.



# ವಿಜಯಪುರಿನ ಐತಿಹಾಸಿಕ ಪ್ರಸನ್ನೇಶ್ವರ ದೇವಾಲಯ

– ಶ್ರೀ ರಂಗ ಪುರಾಣಿಕ

ವಿಜಯಪೂರು ನಗರ ಝಂಡಾ ಕಟ್ಟಿಯ ಸಮೀಪದ ಹಳಕೇರಿಗಲ್ಲಿಯ ಗಾಯಿಚಾಳ್‌ನ ಶ್ರೀಪ್ರಸನ್ನೇಶ್ವರ ದೇಗುಲವು ಶತಮಾನಗಳ ಇತಿಹಾಸವಿರುವ ಪುರಾತನ ದೇವಾಲಯವಾಗಿದೆ. ಈ ದೇವಾಲಯ ಕುರಿತ ದಾಖಲೆ ಮಹಾರಾಷ್ಟ್ರದ ಪುಣೆಯ ಪ್ರಾಚ್ಯವಸ್ತು ಇಲಾಖೆಯ ದಾಖಲೆಗಳಲ್ಲಿ ಲಭ್ಯವಾಗಿದ್ದು. ದೇವಾಲಯ ೧೮೬೪ ರಲ್ಲಿ ನಿರ್ಮಾಣವಾಗಿದ್ದು ಎಂದು ಖಚಿತವಾಗಿದೆ. ದತ್ತಂಭಟ್ ಹಾಗೂ ರಾಮಭಟ್ಟ ಎಂಬುವವರು ದೇವಾಲಯದ ವಾರಸುದಾರರು ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ.

### ದೇವಾಲಯದ ಗರ್ಭಗುಡಿ

ಗರ್ಭಗುಡಿಗೆ ಎರಡು ಮೆಟ್ಟಿಲು ಇಳಿದುಹೋಗಬೇಕು. ಹೋದರೆ, ಹಸಿರು ನುಣುಪಾದ ಕಲ್ಲಿನಿಂದ ನಿರ್ಮಿತವಾಗಿರುವ ಈಶ್ವರ ಲಿಂಗ ಅಂದರೆ ಪ್ರಸನ್ನೇಶ್ವರನ ದರ್ಶನವಾಗುತ್ತದೆ. (ಹೊರಭಾಗದಿಂದಲೂ ನೋಡಬಹುದು) ಶಿವಲಿಂಗವು ಸರಿಸುಮಾರು ೨ ಅಡಿ ಉದ್ದ ಹಾಗೂ ೩ ಅಡಿ ಅಗಲವಿದೆ. ಸುಂದರವಾದ ಗರ್ಭಗುಡಿಯಲ್ಲಿ ವಿರಾಜಮಾನವಾಗಿರುವ ಲಿಂಗದ ದರ್ಶನ ಪಡೆದರೆ ಧನ್ಯತಭಾವ ಮೂಡುತ್ತದೆ.ಗರ್ಭಗುಡಿಯ ಮುಂಭಾಗದಲ್ಲಿ ೧೫ ಅಡಿ ಉದ್ದ ೧೮ ಅಡಿ ಅಳತೆಯ ಸಭಾಮಂಟಪವಿದೆ. ಗರ್ಭ ಗುಡಿಯ ಬಲಕ್ಕೆ ಪ್ರಸನ್ನಪ್ರಾಣದೇವರ ಸನ್ನಿಧಿ ಇದೆ. ಇದನ್ನು ಸುಮಾರು ೫೦ ವರ್ಷಗಳಲ್ಲಿ ನಿರ್ಮಿಸಲಾಗಿದ್ದು.

### ಪ್ರಸನ್ನೇಶ್ವರ ಹಾಗೂ ಸುಂದರೇಶ್ವರ ದೇಗುಲಗಳ ಹೋಲಿಕೆ

ವಿಶೇಷವೇಂದರೆ ಪ್ರಸನ್ನೇಶ್ವರ ಹಾಗೂ ಶ್ರೀಚಕ್ರಧಾರಿತ ಸುಂದರೇಶ್ವರ ಶಿವಲಿಂಗಗಳಲ್ಲಿ ಸ್ವಲ್ಪಮಟ್ಟಿಗೆ ಹೋಲಿಕೆ ಇರುವುದು ಗೋಚರಿಸುತ್ತದೆ. ಮೊದಲನೇಯದ್ದಾಗಿ ಪ್ರಸನ್ನೇಶ್ವರ ಹಾಗೂ ಸುಂದರೇಶ್ವರ ಈ ಎರಡು ದೇವಾಲಯಗಳ ಇತಿಹಾಸದ ಮಾಹಿತಿ ಪುಣೆ ಗೆಝೇಟ್‌ನಲ್ಲಿಯೇ ಲಭಿಸಿರುವಂತಹದ್ದು. ಈ ದೇಗುಲಗಳ ಶಿವಲಿಂಗಗಳು ಮನೆಪಾಯ ಅಗೆಯುವಾಗ ಗೋಚರಿಸದಂತವು. ಶಿವಲಿಂಗದ ನಿರ್ಮಿಸಲು ಬಳಸಿದ ಶಿಲೆ ನಡುವೆಯೂ ಹೋಲಿಕೆ ಇದೆ. ಹೀಗಾಗಿ ಇವುಗಳು ಎಷ್ಟನೇ ಶತಮಾನಕ್ಕೆ ಸೇರಿದ್ದು, ಯಾರ ಕಾಲದ್ದು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ, ಈ ಗೌಪ್ಯತೆ ಹಾಗೆ ಉಳಿದಿದೆ. ಆದರೂ, ವಿಜಯಪುರಿನ ಇತಿಹಾಸವನ್ನು ಅವಲೋಕನ ಮಾಡಿದಾಗ, ಈಗ ವಿಜಯಪುರ ಎಂದು ಕರೆಯಲ್ಪಡುವ ಆಗಿನ "ಬಿಜ್ಜನ ಹಳ್ಳಿ" ಮಾಂಡಲೀಕ ರಾಜರ ರಾಜ ಧಾನಿಯಾಗಿತ್ತು. ಬಿಜ್ಜಳ" ವಂಶಸ್ಥರು ವಿಜಯಪುರ ಆಳಿದ ಪ್ರಮುಖ ರಾಜಮನೆತನ. ಮಾಂಡಲಿಕ ರಾಜರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯ, ಬಾದಾಮಿ ಚಾಲುಕ್ಯರ ಮಾಂಡಲೀಕರಾಗಿದ್ದವರು."ಬಿಜ್ಜನಹಳ್ಳಿಯ"ಮಾಂಡಲೀಕರಾಜರು ಅನೇಕ ದೇವಾಲಯಗಳನ್ನು ಕಟ್ಟಿಸಿದ್ದಾರೆ. ಹಾಗೆ ಅನೇಕ ದೇವಾಲಯಗಳಿಗೆ ದಾನ ದತ್ತಿಗಳನ್ನು ನೀಡಿದ್ದಾರೆ. ಈ ಕುರಿತು ಶಾಸನಗಳಲ್ಲಿ ಉಲ್ಲೇಖವಿದೆ. "ಆರೆ ಕಿಲ್ಲಾ" ಬಳಿಯ ಶಾಸನವೂ ಈ ಕುರಿತು ಮತ್ತಷ್ಟು ಸಾಕ್ಷಿವದಗಿಸುತ್ತದೆ. ಅಲ್ಲದೆ ಅದೇ ಅರೆಕಿಲ್ಲಾ ವ್ಯಾಪ್ತಿಯಲ್ಲಿ ಶೈವ, ವೈಷ್ಣವ, ದೇವಾಲಯಗಳಿದ್ದವು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಪ್ರಸನ್ನೇಶ್ವರ ಹಾಗೂ ಸುಂದರೇಶ್ವರ ದೇಗುಲದ ಶಿವಲಿಂಗಗಳು. ಆ ಶೈವ ದೈಗುಲಯಗಳದ್ದೇ ಇರಬಹುದು.? ಎಂದು ಹಲವು ಇತಿಹಾಸಕಾರರು ವ್ಯಕ್ತಪಡಿಸುತ್ತಾರೆ. ಆ ಕುರಿತ ಗೌಪ್ಯತೆ ಇಂದಿಗೂ ನಿಗೂಢವಾಗಿದೆ.

### ವಿಶೇಷ ದಿನಗಳು

ಪ್ರತಿದಿನ ಪೂಜಾ ಕೈಂಕರ್ಯ ನೋಡಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಪ್ರಮುಖ ದಿನಗಳಾದ ಹನುಮ ಜಯಂತಿ. ನೂಲು ಹುಣ್ಣಿಮೆ. ಮಹಾ ಶಿವರಾತ್ರಿ, ಚಂಪಾಷಷ್ಠಿ. ಆಶಾಢ ದ್ವಾದಶಿ, ರಾಯರ ಆರಾಧನೆ, ಪುರಂದರದಾಸರ ಜಯಂತಿ. ರಾಮನವಮಿ ಹಾಗೂ ನೃಸಿಂಹ ಜಯಂತಿ ಈ ದಿನಗಳಂದು ದೇವಾಲಯದಲ್ಲಿ ವಿಶೇಷ ಪೂಜೆ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆಯನ್ನು ದಾನಿಗಳಿಂದ ನಡೆಸಲಾಗುತ್ತಿದೆ.



# ಮಾದನೂರಿನ ಮಾಣಿಕ್ಯಶ್ರೀ ವಿಷ್ಣು ತೀರ್ಥರು

– ಡಾ।। ರಾಮಚಂದ್ರದಾಸ್ ಸಿ.ಜೆ.
94833 84584





ಭರತ ಖಂಡವು ದೇವತೆಗಳು, ಋಷಿಮುನಿಗಳು ಅವತರಿಸಿ ಸಾಧನೆಗೈಯ್ಯಲು ಉಪಕೃತವಾದ ಪವಿತ್ರ ಕರ್ಮ ಭೂಮಿ, ಗೋದಾವರಿಯಿಂದ, ಕಾವೇರಿಯವರೆಗಿನ ಸಾಧನೋಪಯುಕ್ತವಾದ ಪುಣ್ಯ ಭೂಮಿಯಲ್ಲಿ ಅನೇಕ ಯತಿಗಳು ಮತ್ತು ದಾಸವ ರೇಣ್ಯರು ಭಾಗವತ ಧರ್ಮ ಉಳಿಸಿ ಬೆಳೆಸಿ ಪ್ರಚಾರ ಮಾಡಿದ ತಪೋಭೂಮಿ. ಅದರಲ್ಲಿ ಸವಣೂರಿನ ಸಿದ್ಧಾಪುರವೆಂಬ ಗ್ರಾಮದಲ್ಲಿ, ಶಾ.ಶಕ 1678, ಕ್ರಿ.ಶ. ಸುಮಾರು 1756 ರ ಈಶ್ವರ ಸಂವತ್ಸರದ ಶ್ರಾವಣ, ಕೃಷ್ಣಪಕ್ಷ, ಅಷ್ಟಮಿ ದಿನದಂದು, ಅರಣ್ಯಕಾ ಚಾರ್ಯ ರೆಂದೇ ಪ್ರಸಿದ್ಧರಾದ, ಅವಧೂತ ಶಿರೋಮಣಿಗಳಾದ ಶ್ರೀ ವಿಷ್ಣುತೀರ್ಥರು, ಶ್ರೀಮತ್ ಟೀಕಾಕೃತ್ಪಾದರ ಪೂರ್ಣಾನುಗ್ರಹದಿಂದ, ಶ್ರೀ ಬಾಳಾಚಾರ್ಯರು ಮತ್ತು ಭಾಗೀರಥೀ ಬಾಯಿಯವರಲ್ಲಿ ಅವತರಿಸಿ, ಜಯತೀರ್ಥಾಚಾರ್ಯರೆಂಬ ನಾಮಧೇಯದಿಂದ, ಬಿದಿಗೆಯ ಚಂದ್ರನೋಪಾದಿಯಲ್ಲಿ ತಮ್ಮ ರೂಪ, ಗುಣ,ಬುದ್ಧಿಮತ್ತೆಗಳಿಂದ ಎಲ್ಲರ ಕಣ್ಮಣಿ ಗಳಾಗಿ ಪ್ರವೃದ್ಧ ಮಾನಕ್ಕೆ ಬರತೊಡಗಿದರು. ಎಲ್ಲ ಸಂಸ್ಕಾರಗಳು ವ್ಯವಸ್ಥಿತ ರೀತಿಯಲ್ಲಿ ನಡೆದು, ಎಂಟನೇ ವಯಸ್ಸಿನಲ್ಲಿ ತಮ್ಮ ತಂದೆಯಿಂದ ಗಾಯತ್ರಿ ಮಂತ್ರದ ಉಪದೇಶ ಪಡೆದು, ಶ್ರೀಸುಮಧ್ವವಿಜಯದ ನಿತ್ಯ ಪಾರಾಯಣದ ಫಲವಾಗಿ ಕೆಲವು ಸಿದ್ಧಿಗಳು ಅವರಿಗೆ ಪ್ರಾಪ್ತವಾದವು. ಹೆಚ್ಚಿನ ಅಧ್ಯಯನ ಮಾಡಲು, ಗುರುವಿನ ಶೋಧದ ನಿಮಿತ್ತ, ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಸೇವೆಮಾಡಿ, ಅವರಿಂದ ಅನುಗೃಹೀತರಾಗಿ, ಗದ್ವಾಲ ಸೀಮೆಯಲ್ಲಿನ ತುಂಗಭದ್ರಾ ತೀರದ ವೇಣಿಸೋಮ ಪುರದಲ್ಲಿದ್ದ ಐಜೀ ವೆಂಕಟರಾಮಾಚಾರ್ಯರಲ್ಲಿ ಶಿಷ್ಯತ್ವವನ್ನು ವಹಿಸಿದರು. ದೈವಾಂಶ ಸಂಭೂತ ರಾದ (ರುದ್ರಾಂಶ ಸಂಭೂತರೆಂಬ ಐತಿಹ್ಯವಿದೆ.) ಶಿಷ್ಯ ದೊರತಿದ್ದರಿಂದ, ಅಪರೋಕ್ಷ ಜ್ಞಾನಿಗಳು,ಮಹಾತಪಸ್ವಿಗಳೂ, ಬೀಚಪಲ್ಲಿಯಲ್ಲಿನ ಶ್ರೀಮುಖ್ಯ ಪ್ರಾಣನಿಂದ ಅನುಗೃಹೀತರಾಗಿ ವಾಸುದೇವ ವಿಠಲಾಂಕಿತರಾಗಿ ಕನ್ನಡದಲ್ಲಿ ಕೃತಿಗಳನ್ನು ರಚಿಸಿದ ಮಹಾನುಭಾವರಾದ ಐಜೀ ವೆಂಕಟರಾಮಾಚಾರ್ಯರು ಸಂತಸಪಟ್ಟಿದ್ದರಲ್ಲಿ ಆಶ್ಚರ್ಯವೇನಿಲ್ಲ. ಇವರೇ "ವ್ಯಾಸತತ್ವಜ್ಞ" ರೆಂದು ಪ್ರಖ್ಯಾತರಾದ ಮಹಾಮಹಿಮರು, ದೃಷ್ಟದ್ಯುಮ್ನಾಂಶಜರು. "ಪ್ರೀತಿ ಪೂರ್ವಕ ಗುರೂಪ ದೇಶಮೇವ ಫಲತಿ ಎಂಬ, ಶ್ರೀಮದಾಚಾರ್ಯರ ವಾಕ್ಯದಂತೆ, ಸಕಲ ಶಾಸ್ತ್ರಗಳ ರಹಸ್ಯವನ್ನು ತಮ್ಮ ಶಿಷ್ಯನಿಗೆ ಪ್ರೀತಿ ಪೂರ್ವಕವಾಗಿ ಧಾರೆಯೆರೆದು ಉಪದೇಶಿಸಿದರು. ತತ್ಫಲವಾಗಿ ಶ್ರೀಜಯತೀರ್ಥಾ ಚಾರ್ಯ (ಭಾವೀ ಶ್ರೀ ವಿಷ್ಣುತೀರ್ಥರು) ರಿಂದ ಅನೇಕ ಉತ್ತಮ ಗ್ರಂಥಗಳು ರಚಿತವಾಗಿ ಸಜ್ಜನರಿಗೆ ಉಪಕಾರವಾಗಿ, ಮಾರ್ಗದರ್ಶಕವಾಗಿವೆ.

ಮುಖ್ಯವಾಗಿ, ಶ್ರೀಮದ್ಭಾಗವತದಲ್ಲಿನ ಧರ್ಮಗಳ ಸಾರವಾದ, ಮುನ್ನೂರ ಅರವತ್ನಾಲ್ಕು ಶ್ಲೋಕಗಳನ್ನಾರಿಸಿ, ಮೂವತ್ತು ಪ್ರಕರಣಗಳಾಗಿ ವಿಂಗಡಿಸಿ, ನಿತ್ಯ ಪಾರಾಯಣಕ್ಕೆ ಅನುಕೂಲವಾಗಲೆಂದು "ಶ್ರೀಮದ್ಭಾಗವತ ಸಾರ" ವೆಂಬ ಗ್ರಂಥವನ್ನು ರಚಿಸಿದರು. ಆದರೆ ಪ್ರಸ್ತುತ ಪಚಲಿತವಾಗಿರುವ "ಭಾಗವತ ಸಾರೋದ್ಧಾರ" ವೆಂಬ ಹೆಸರು ಈ ನಡುವಿನ ಅವಧಿಯಲ್ಲಿ ರೂಢವಾಗಿ ಬಿಟ್ಟಿದೆ.

ಪುರುಷಜೀವನವೆಂಬ ಯಜ್ಞದಲ್ಲಿ, ಮರಣವನ್ನು ಅವಭೃತ ಸ್ನಾನವೆಂಬುದಾಗಿ ಭಾವಿಸಬೇಕು ಎಂದು ಉಪದೇಶಿಸಿದರು.

ಆಚಾರ್ಯರ ಗುರು ಭಕ್ತಿ ಪಾಲನೀಯ, ಐಜೀ ಆಚಾರ್ಯರು ಅಶ್ವಾರೂಢರಾಗಿ, ತಮ್ಮ ಒಬ್ಬ ಶಿಷ್ಯನ ಮನೆಗೆ ನಡು ಬೇಸಿಗೆಯ ಬಿಸಿಲಲ್ಲಿ ಹೊರಟಿದ್ದರು. ಶಿಷ್ಯೋತ್ತಮರಾದ ಜಯ ತೀರ್ಥಾಚಾರ್ಯರು ಬರಿಗಾಲಿನಲ್ಲಿ ನಡೆದುಕೊಂಡು ಹಿಂಬಾಲಿಸುತ್ತಿದ್ದರು. ಬರಿಗಾಲದಲ್ಲಿ ನಡೆಯುತ್ತಿರುವ ಶಿಷ್ಯನನ್ನು ನೋಡಿದ ಗುರುಗಳು, ತಮ್ಮ ಪಾದರಕ್ಷೆಗಳನ್ನು ತೊಡಲು ಸೂಚಿಸಿ, ನೀಡಿದರು. ಆದರೆ ಜಯತೀರ್ಥಾಚಾರ್ಯರು ಅವುಗಳನ್ನು ಕಾಲಿನಲ್ಲಿ ಧರಿಸದೆ, ಭಕ್ತಿಯಿಂದ ತಮ್ಮ ತಲೆಯ ಮೇಲೆ ಧಾರಣಮಾಡಿ ನಡೆಯುತ್ತಿದ್ದರು. ಇದನ್ನು ನೋಡಿದ ಗುರುಗಳು ಅವರಿಗೆ ಪರಮಾನುಗ್ರಹ ಮಾಡಿದರು.

ವಿದ್ಯಾಭ್ಯಾಸ ಪೂರೈಸಿದ ನಂತರ ಗುರುಗಳ ಅನುಜ್ಞೆ ಪಡೆದು, ನಂತರ ಗೃಹಸ್ಥಾಶ್ರಮಿಗಳಾದರು. ಪತಿ ಭಕ್ತೆಯಾದ ಮಡದಿಯೊಡನೆ, ಸ್ವಗ್ರಾಮದಲ್ಲಿ ಆನಂದದಿಂದ ಕಾಲಾಯಾಪನೆ, ಜೊತೆಗೆ ಶಿಷ್ಯರಿಗೆ ಪಾಠಪ್ರವಚನಗಳು ನಡೆಯುತ್ತಿದ್ದವು. ಪತ್ನಿಯ ಆಕಾಂಕ್ಷೆಯಂತೆ ಕೃಷ್ಣನೆಂಬ ಪುತ್ರನಿಗೆ ಜನ್ಮ ನೀಡಿದರು.

ಸಂಚಾರತ್ವೇನ ಕಿನ್ನಾಳಕ್ಕೆ ಆಗಮಿಸಿದರು. ಅಲ್ಲಿನ ದೇಸಾಯಿಯವರಿಗೆ ಊಟ ಮಾಡುವಾಗ, ಆಹಾರದಲ್ಲಿ ಬರೀ ಕ್ರಿಮಿಗಳು ಕಾಣುತ್ತಿದ್ದವು. ಇದನ್ನರಿತ ಆಚಾರ್ಯರು ತಾವು ಊಟಕ್ಕೆ ಕುಳಿತಾಗ ತಮ್ಮ ಎಲೆಯೊಳಗಿಂದ ಒಂದು ಹಿಡಿ ಅನ್ನವನ್ನು ದೇಸಾಯಿಯ ಎಲೆಯಲ್ಲಿ ಹಾಕಿ ಶ್ರೀ ಹರಿಧ್ಯಾನ ಮಾಡಿದಾಗ, ಕ್ರಿಮಿಗಳ ಪೀಡೆಯಿಂದ ಅವನನ್ನು ಮುಕ್ತಗೊಳಿಸಿದರು. ನಂತರ ಮಲಾಪಹಾರಿ ನದಿಯ ತೀರದ ಮುನವಳ್ಳಿಯಲ್ಲಿ ಕೆಲವು ವರ್ಷಗಳ ಕಾಲ ತಪವನ್ನು ಆಚರಿಸಿದರು. ಆ ಸಮಯದಲ್ಲಿ ಶ್ರೀಮನ್ನ್ಯಾಯಸುಧೆಗೆ ಲಘುರಸರಂಜನಿ ಎಂಬ ಟಿಪ್ಪಣಿಯನ್ನು, ತತ್ವ ಪ್ರಕಾಶಿಕಾ ಟಿಪ್ಪಣಿ, ಸುಧಾಸ್ತೋತ್ರ, ಆತ್ಮ ಸುಖಬೋಧಿನಿ, ಶೋಡಷೀ, ಚತುರ್ದಶೀ, ಆಧ್ಯಾತ್ಮ ರಸರಂಜನಿ, ಸುಮಧ್ವವಿಜಯ ಪ್ರಮೇಯ ಸಂಗ್ರಹ ಮಾಲಿಕಾ, ಶ್ರೀರಮಾಸ್ತೋತ್ರ, ಗೀತಾಸಾರೋದ್ಧಾರ ಮೊದಲಾದ ಗ್ರಂಥಗಳನ್ನು ರಚನೆ ಮಾಡಿ, ಆಸ್ತಿಕರಿಗೆ ಮಹದುಪಕಾರ ಮಾಡಿದ್ದಾರೆ.

ಕೃಷ್ಣಾ ತೀರದಲ್ಲಿ ಮೊರಬವೆಂಬುದೊಂದು ಗ್ರಾಮ. ರುದ್ರ ದೇವರೇ ಸೂಚಿಸಿದ ಒಬ್ಬ ಸದ್ವಿಪ್ರನಿಗೆ ಗಂಗಾದೇವಿಯು ಮರದ ಬಾಗಿನವನ್ನು ಕೊಟ್ಟಿದ್ದರಿಂದ ಆ ಸ್ಥಳಕ್ಕೆ "ಮೊರಬ" ಎಂಬ ಹೆಸರು ಬಂದಿದೆ. ಅಲ್ಲಿ ಮಹಾಪಂಡಿತರು ಹಾಗೂ ಹೊಸೂರು ಎಂಬ ಗ್ರಾಮದಲ್ಲಿದ್ದ ಮುಖ್ಯಪ್ರಾಣದೇವರಲ್ಲಿ ತಮ್ಮ ಸ್ವರೂಪೋದ್ಧಾರಕ ಗುರುಗಳನ್ನು ಕರುಣಿಸುವಂತೆ ಸೇವೆಗೈಯ್ಯುತ್ತಿದ್ದರು. ಜಯ ತೀರ್ಥಾಚಾರ್ಯರೆಂಬುವರು ಸಂಚಾರತ್ವೇನ ನಿಮ್ಮಲ್ಲಿಗೆ ಬರುತ್ತಾರೆ. ಅವರೇ ನಿಮ್ಮ ಸ್ವರೂಪೋದ್ಧಾರಕರು ಎಂಬುದಾಗಿ ಮುಖ್ಯ ಪ್ರಾಣದೇವರ ಸೂಚನೆಯ ಅನುಸಾರ, ಆಚಾರ್ಯರಲ್ಲಿ ಶಿಷ್ಯತ್ವವನ್ನು ವಹಿಸಿ, ಶ್ರೀಮದಾಚಾರ್ಯರ ಸಚ್ಛಾಸ್ತ್ರಗಳ ಉಪದೇಶ ಪಡೆಯುತ್ತಿದ್ದರು. ಶಿಷ್ಯರನ್ನು ಉದ್ದೇಶ ಮಾಡಿಕೊಂಡು "ಉಪದೇಶ ಪತ್ರ"ದಲ್ಲಿ ಯುಗಾಧಿಪನಾದ ಕಲಿಯು, ಪತ್ನಿ, ಪುತ್ರರಲ್ಲಿ ಆವಿಷ್ಟನಾಗಿ ಒಳಗೆ ನಿಂತು ಹೇಗೆ ಅಡ್ಡದಾರಿಗೆ ಎಳೆಯುವನೆಂಬುದನ್ನು ಹಾಗೂ ಜೀವನದ ಸಫಲ ತೆಗೆ ಮಾರ್ಗದರ್ಶಕವಾಗುವಂತಹ ವಿಷಯಗಳನ್ನು ತಿಳಿಸಿದ್ದಾರೆ.

ಕಿನ್ನಾಳದ ಸುತ್ತ ಮುತ್ತಲ ಗ್ರಾಮಗಳಲ್ಲಿ ಭೀಕರಕ್ಷಾಮ ತಲೆದೋರಿದಾಗ, ಪೂಜಾ ಸಮಯದಲ್ಲಿ ತಾವು ಉಪಾಸಿಸುತ್ತಿದ್ದ ವಿಗ್ರಹದ ಕೆಳಗೆ ತಾಮ್ರದ ನಾಣ್ಯಗಳನ್ನಿಟ್ಟು, ತಾವೇ ರಚಿಸಿದ ರಮಾ ಸ್ತೋತ್ರಭಕ್ತಿಯಿಂದ ತುತಿಸಿ, ಶ್ರೀಹರಿಯನ್ನು ಪ್ರಾರ್ಥಿಸುತ್ತಿರುತ್ತಿದ್ದರು. ಪೂಜೆಯ ನಂತರ ಅದು ಬಂಗರವಾಗಿ ಪರಿವರ್ತಿತವಾಗುತ್ತಿತ್ತು, ಅದನ್ನು ಮಾರಿ ಬಂದ ಹಣದಿಂದ ಎಲ್ಲ ಗ್ರಾಮಸ್ಥರಿಗೆ ಒದಗಿದ ಅನ್ನದ ಕೊರತೆಯನ್ನು ನೀಗಿಸುತ್ತಿದ್ದರು, ಬರಗಾಲ ಮುಗಿದ ಮೇಲೆ ಈ ಕ್ರಿಯೆ ಮುಂದುವರೆಸಲು (ಈ ಘಟನೆ ಯತ್ಯಾಶ್ರಮ ಸ್ವೀಕರಿಸಿದ ನಂತರ ನಡೆದದ್ದು ಎಂಬ ಐತಿಹ್ಯವಿದೆ.)

ಆಚಾರ್ಯರು ಒಮ್ಮೆ ಹಂಸ ತೂಲಿಕಾ ತಲ್ಪದಲ್ಲಿ ಮಲಗಿದ್ದಾಗ, ಕಾಲಕರ್ಮ ಸಂಯೋಗದಿಂದ ಇವರನ್ನು ಪ್ರವೃತ್ತಿ ಮಾರ್ಗದಿಂದ ನಿವೃತ್ತ ಮಾರ್ಗಕ್ಕೆ ತಿರುಗಿಸಲು, ಶ್ರೀಹರಿಯ ಕ್ರೀಡೆಯಂತೆ, "ಮಂಚಬಾರದು, ಮಡದಿ ಬಾರಳು, ಕಂಚು ಕನ್ನಡಿ ಬಾರದು... ಮುಂಚೆ ಮಾಡಿರೋ ಧರ್ಮವ..." ಎಂಬ ದಾಸರ ನುಡಿಯು ಕಿವಿಗೆ ಬಿದ್ದಿತು. ತಕ್ಷಣವೇ, ಅವರಲ್ಲಿ ಗುಪ್ತಗಾಮಿನಿಯಾಗಿದ್ದ ವೈರಾಗ್ಯವು ಪುಟಿದೆದ್ದು ವೈರಾಗ್ಯಶಾಲಿಗಳಾದರು. ಪತ್ನಿಯ ವಿಯೋಗವನ್ನು "ಪುರುಷಜೀವನವೆಂಬ ಯಜ್ಞದಲ್ಲಿ, ಮರಣವನ್ನು ಅವಭೃತ ಸ್ನಾನ" ವೆಂಬುದಾಗಿ ಭಾವಿಸಬೇಕು ಎಂದು ಉಪದೇಶಿಸಿದರು.

ನಾಮಗೊಂಡಲು ಎಂಬ ಗ್ರಾಮದಲ್ಲಿ ಶ್ರೀಮದುತ್ತರಾದೀ ಮಠದ ಶ್ರೀ ಸತ್ಯವರ ತೀರ್ಥ ಶ್ರೀಪಾದರಿಂದ ಸನ್ಯಾಸವನ್ನು ಪಡೆದು"ಶ್ರೀ ವಿಷ್ಣುತೀರ್ಥರು" ಎಂಬ ಆಶ್ರಮನಾಮದಿಂದ ವಿರಾಜಮಾನರಾದರು. ಆದರೆ ಅವರು ಮೂಲ ಸಂಸ್ಥಾನದಲ್ಲಿ ಸ್ಥಾಯಿಕರಾಗಿ ನಿಲ್ಲದೆ ಸುಧಾದಿ ಗ್ರಂಥಗಳ ಪ್ರವಚನ, ಸಂಚಾರತ್ವೇನ ಮಾದನೂರಿನಲ್ಲಿ ಬಂದು ನೆಲೆಸಿದರು. ಅವರ ಪ್ರವಚನದ ಸಮಯದಲ್ಲಿ ಸುತ್ತಲೂ ಸುಗಂಧ ಪಸರಿಸುತ್ತಿತ್ತು. ಇವರಿಗೆ ಬದರಿಯಾತ್ರೆ ಮಾಡಬೇಕೆಂಬ ಹಂಬಲವಾದಾಗ, ಶ್ರೀಮತ್ ಟೀಕಾಕೃತ್ಪಾದರು, ಇವರಿಗೆ ಸ್ವಪ್ನದಲ್ಲಿಯೇ ಸಂಪೂರ್ಣ ಬದರಿಯಾತ್ರೆಯನ್ನು ಮಾಡಿಸಿದ್ದಾರೆ. ಒಮ್ಮೆ ಸುಧಾ ಮಂಗಳದ ಕೊನೆಯಲ್ಲಿ , ಶ್ರೀಬದರಿನಾರಾಯಣನು ಸ್ವಪ್ನದಲ್ಲಿ "ಇಂಥ ಜಾಗದಲ್ಲಿ ನಾನೂ ಇರುವೆ" ಎಂದು ಹೇಳಿ ಅದೃಶ್ಯನಾದನು. ಮರುದಿನ ಆ ಸ್ಥಳದ ಉತ್ಖನನ ಮಾಡಿದಾಗ ಬದರಿನಾರಾಯಣನ ವಿಗ್ರಹ ದೊರೆಯಿತು. ಮಾದನೂರಿನಲ್ಲಿಯೇ ಅದನ್ನು ಪ್ರತಿಷ್ಠಾಪಿಸಿದರು.

ಅಣ್ಣಿಗೇರಿಯ ಅಮೃತೇಶ್ವರ ಗುಡಿಯಲ್ಲಿನ ಒಂದು ಉತ್ತಮ ಶಿಲೆಯಿಂದ ವೃಂದಾವನವು, ಮಾದನೂರಿನಲ್ಲಿ ಬದರಿನಾರಾಯಣನ ಸಮ್ಮುಖದಲ್ಲಿ ನಿರ್ಮಾಣವಾಯಿತು ಶಾ.ಶಕ 1728 ಮಾಘ ಕೃಷ್ಣ ತ್ರಯೋದಶಿ ಪರ್ವಕಾಲದಂದು ತಮ್ಮ ಆಹ್ನಿಕ ಪೂಜೆ, ಜಪ,ತಪ, ಪ್ರವಚನ ಇತ್ಯಾದಿಗಳನ್ನು ಪೂರೈಸಿ ಹರಿಸ್ಮರಣೆ ಮಾಡುತ್ತ ಭೂಲೋಕದ ವ್ಯಾಪಾರವನ್ನು ಪೂರೈಸಿದರು. ನಂತರ ವೃಂದಾವನದ ಮೇಲ್ಭಾಗ ಮುಚ್ಚಿ, ವೈದಿಕ ಸಂಪ್ರದಾಯದಂತೆ ಪೂಜಾ ಇತ್ಯಾದಿ ಕ್ರಮಗಳು ಸಾಂಗವಾಗಿ ನೆರವೇರಿದವು. ಇಂದಿಗೂ ಶ್ರೀವಿಷ್ಣುತೀರ್ಥರು ವೃಂದಾವನದಲ್ಲಿದ್ದು ಭಕ್ತರಭೀಷ್ಟಗಳನ್ನು ಪೂರೈಸುತ್ತಿದ್ದಾರೆ. ಈ ಕ್ಷೇತ್ರದ ದರುಶನದಿಂದ ಬದರಿಯಾತ್ರೆಯ ಫಲ ಬರುವುದೆಂಬ ನಂಬಿಕೆ ಆಸ್ತಿಕರದಲ್ಲಿದೆ.

**ಎಡದಿಂದ ಬಲಕ್ಕೆ**

1.ಕುಲಶೇಖರ ಆಳ್ವಾರ್

2.ತಿರುಮಳಿಶೈ ಆಳ್ವಾರ್

3.ಮಧುರ ಕವಿ

4. ತಿರುಪ್ಪಾಣಾಳ್ವಾರ್

**ಬಲದಿಂದ ಎಡಕ್ಕೆ**

5.ತೊಂಡರ ಡಿಪ್ಪೊಡಿ

6.ಪೊಯ್ಗೈ

7.ಗೋದಾದೇವಿ

8.ಪೆರಿಯಾಳ್ವಾರ್

9.ಪೂದತ್ತಾಳ್ವಾರ್

10.ತಿರುಮಂಗೈ ಆಳ್ವಾರ್

**ಮೇಲಿಂದ ಕೆಳಕ್ಕೆ**

11.ನಮ್ಮಾಳ್ವಾರ್

**ಕೆಳಗಿನಿಂದ ಮೇಲಕ್ಕೆ**

12.ಪೇಯ್

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ಕು | ಲ | ಶೇ | ಖ | ರ | ಆ | ಳ್ವಾ | ರ್ |
| 2 | ಯ್ಗೈ | 6 ಪೊ | ಡಿ | ಪ್ಪೊ | ಡಿ | ರ | ಡ | 5 ತೊಂ |
| 3 | 2 ತಿ | ರು | ಮ | ಳಿ | ಶೈ | ಆ | ಳ್ವಾ | ರ್ |
| 4 | 3 ಮ | ಧು | ರ | ಕ | ವಿ | ದೇ | ದಾ | 7 ಗೋ |
| 5 | 11 ನ | | | ರ್ | ಳ್ವಾ | ಯಾ | ರಿ | 8 ಪೆ |
| 6 | ಮ್ಮಾ | 4 ತಿ | ರು | ಪ್ಪಾ | ಣಾ | ಳ್ವಾ | ರ್ | |
| 7 | ಳ್ವಾ | ರ್ | ಳ್ವಾ | ತ್ತಾ | ದ | 9 ಪೂ | | ಯ್ |
| 8 | ರ್ | ಳ್ವಾ | ಆ | ಗೈ | ಮಂ | ರು | 10 ತಿ | 12 ಪೇ |

# ಎಂಥಾ ಬಲವಂತನೋ ಕುಂತಿಯ ಸಂಜಾತನೋ....

– ಶ್ರೀಮತಿ. ಪ್ರಿಯ ಪ್ರಾಣೇಶ ಹರಿದಾಸರು



ವೇದವ್ಯಾಸರು ಮೂಲಮಹಾಭಾರತದಲ್ಲಿ ಹೇಳಿರುವಂತೆ ವಾಯುದೇವರ ದ್ವಾಪರದ ಅವತಾರವೇ ಭೀಮಸೇನ ಅವತಾರ. ಮಹಾಭಾರತದಲ್ಲಿನ ಪ್ರಮುಖ ಪಾತ್ರ.

ಧರ್ಮದ ರಕ್ಷಣೆ ಜ್ಞಾನ ಮತ್ತು ಬಾಹು ಬಲ ಎರಡು ಬೇಕು.

ಅಂತಯೇ ದೇವೇಷು ವಾಯುಃ

ಪುರುಷೋತ್ತಮಾದ್ಯೃತೇ " ಎಂದಿದ್ದಾರೆ.

ಅಂದರೆ ಭಗವಂತನ ನಂತರದಲ್ಲಿ ಈ ಜ್ಞಾನ ಮತ್ತು ಬಾಹುಬಲದಲ್ಲಿ ಶ್ರೇಷ್ಟರಾದವರು ವಾಯುದೇವರು. ಅದಕ್ಕಾಗಿ ಪಾಂಡುರಾಜನು ಕುಂತಿಯ ಮುಖಾಂತರ ವಾಯುದೇವರ ಅಂಶದಿಂದ ಭೀಮನನ್ನು ಪಡೆದನು.

"ಭೀಮಸೇನ" "ಭೀ" ಎಂದರೆ ಭೃತ

"ಮಾಃ" ಎಂದರೆ ಸಕಲ ವಿದ್ಯಾಪಾರಂಗತನು, "ಸೇನ" ಎಂದರೆ

ಭಗವಂತನ ಸನ್ನಿಹಿತನು . ಭೀಮಸೇನ ದೇವರ ಇನ್ನೊಂದು ಹೆಸರು "ವೃಕೋದರ".

೧೦,೦೦೦ ಸಾವಿರ ಆನೆಗಳ ಬಲವನ್ನು ಹೊಂದಿದ್ದನು ಬಲ ರಾಮನಿಂದ ಗಧಾಯುದ್ಧದಲ್ಲಿ ಪರಿಣಿತಿ ಹೊಂದಿರುತ್ತಾನೆ.

ಭೀಮಸೇನ ದೇವರಿಗೆ ೨೪ ಪತ್ನಿಯರು ದ್ರೌಪದಿ, ಕಾಳಿ, ಹಿಡಿಂಬಾದೇವಿ, ೧೦ ದಿಗ ಅಭಿಮಾನಿಗಳು, ೧೦ ವಸುದೇವ ಪುತ್ರಿಯರು (ಇವರೆಲ್ಲರಲ್ಲಿಯೂ ಭಾರತಿದೇವಿ ಅಂಶ ಇರುತ್ತದೆ.)

ಹನ್ನೆರಡು ವರುಷ ಅಜ್ಞಾತವಾಸದಲ್ಲಿದ್ದಾಗ ವಿರಾಟರಾಜನ ಹತ್ತಿರ ಪಾಂಡವರು ಒಂದೊಂದು ಕಾರ್ಯಭಾರಕ್ಕೆ ನೇಮಕರಾಗಿ ಸೇರಿಕೊಂಡರು. ಆಗ ಭೀಮನು',ಬಲ್ಲವನಾಗಿ ಬಾಣಸಿಗನಾಗಿ ಸೇರಿಕೊಂಡರು ಅಂದರೆ ಇವರು ಶ್ರೇಷ್ಠ ನಳ ಮಹಾರಾಜರಾಗಿದ್ದರು ಎಂದು ತಿಳಿಸಿ ಕೊಡುತ್ತದೆ.

### ಇನ್ನೊಂದು ಪ್ರಸಂಗದಲ್ಲಿ

ಒಂದು ದಿನ ಮಧ್ಯರಾತ್ರಿಯಲ್ಲಿ ಧರ್ಮರಾಜನನ್ನು ಭೇಟಿಯಾಗಿ ಬ್ರಾಹ್ಮಣಯಾಗಕ್ಕೆ ದ್ರವ್ಯದ ಸಹಾಯ ಬೇಡುತ್ತಾನೆ. ಈಗ ಮಧ್ಯರಾತ್ರಿಯಾಗಿದೆ. ಬೆಳಗ್ಗೆ ಕೊಡುವೆ ಬಾ ಎಂದು ಹೇಳಿ ಕಳುಹಿಸುತ್ತಾನೆ. ಮುಂದೆ ಆ ಬ್ರಾಹ್ಮಣ ಭೀಮ ಹತ್ತಿರ ಹೋಗಿ, ವಿಷಯ ಹೇಳಿ ಸಹಾಯ ಬೇಡಿದಾಗ, ತಕ್ಷಣ ಕೈಲಿದ್ದ ಕಡಗವನ್ನು ಕೊಡುತ್ತಾನೆ. ಬ್ರಾಹ್ಮಣ ಸಂತೋಷದಿಂದ ಹೋಗುತ್ತಾನೆ. ಆಗ ಭೀಮ ನಗಾರಿಯನ್ನು ಬಾರಿಸುತ್ತಾನೆ. ಇದರಿಂದ ಎಚ್ಚರಗೊಂಡ ಯುಧಿಷ್ಟರನು ಭೀಮನಿಗೆ,ಈ ಮಧ್ಯರಾತ್ರಿಯಲ್ಲಿ ನಗಾರಿ ಬಾರಿಸಿರುವ, ವಿಚಾರ ಕೇಳಿದಾಗ, ಭೀಮನು ವಿನೋದದಿಂದ ಅಣ್ಣ ನೀನು ಮತ್ತು ಬ್ರಾಹ್ಮಣ ಇರುತ್ತಿರೆಂದು ಬಲವಾದ

ವಿಶ್ವಾಸವಿದೆ. ಆದರೆ ನನಗೆ ಈ ಗಳಿಗೆ ಇರುತ್ತಿನೋ. ಇಲ್ಲವೋ ಗೊತ್ತಿಲ್ಲ. ಅದಕ್ಕೆ ನಾನು ಬ್ರಾಹ್ಮಣನಿಗೆ ಈಗ ಸಹಾಯ ಮಾಡಿದೆ. ಅದಕ್ಕೆ ಈ ನಗಾರಿ ಬಾರಿಸಿದ್ದು ಎಂದು ಹೇಳಿದನು. ಆಗ ಧರ್ಮ ರಾಜನಿಗೆ ತನ್ನ ತಪ್ಪಿನ್ನ ಅರಿವಾಯಿತು. ಸಹಾಯ ಯಾಚಿಸಿ ಬಂದವರಿಗೆ ಎಂದು ಮುಂದೂಡ ಬಾರದೆಂದು ತಿಳಿ ಯಿತು. ತನ್ನ ತಮ್ಮನ ಮೇಲೆ ಅಭಿಮಾನದಿಂದ ನೋಡಿನು.

ಹೀಗೆ ಅನೇಕ ನೀತಿ ರೀತಿಗಳನ್ನು ಪ್ರತಿಪಾದಿಸುವ ಭೀಮಸೇನ ದೇವರ ಕುರಿತಾಗಿ ವರ್ಣನೆಯನ್ನು ಶ್ರೀ ಪಾದ ರಾಜರು ರಚಿಸಿದ 'ಮದ್ವನಾಮದಲ್ಲಿ ಅಪ್ರತಿಮವಾಗಿ ಮೂಡಿ ಬಂದಿದೆ.

ಇದರಲ್ಲಿ ಭೀಮಸೇನದೇವರ ಎಲ್ಲ ವಿಷಯಗಳ ಸಾರ ಇದೆ.

"ಆ ಮಾರತನೆ ಭೀಮನೆಂದೆನಿಸಿ ದ್ವಾಪರದಲ್ಲಿ
ಸೋಮಕುಲದೊಳು ಜನಸಿ ಪಾರ್ಥರೊಡನೆ
ಭೀಮವಿಕ್ರಮ ರಕ್ಕಸರ ಮುರಿದಟ್ಟಿದ
ಆ ಮಹಿಮ ನಮ್ಮ ಕುಲಗುರು ರಾಯನು
ಅಂದರೆ ತ್ರೇತೆಯ ವಾಯುದೇವರೇ

ದ್ವಾಪರದ ಚಂದ್ರವಂಶದಲ್ಲಿ ಪೃಥಾದೇವಿಯ ಮಗ ನಾಗಿ ಹುಟ್ಟಿ,

ಪಾಂಡವರಲ್ಲಿ ವಿಕ್ರಮ, ಪರಾಕ್ರಮನೆಸಿದವರು.

"ಕರದಿಂದ ಶಿಶುಭಾವನಾದ ಭೀಮನ ಬಿಡಲು
ಗಿರಿಯೊಡೆದು ಶತಶೃಂಗವೆನಿಸಿತು
ಹರಿಹರಿಗಳಾ ಹರಿಗಳಿಂ ಕರಿಗಳಾ ಕರಿಗಳಿಂ
ಅರೆವ ವೀರನಿಗೆ ಸುರನರರು ಸರಿಯೆ

ಹುಟ್ಟಿದ ತಕ್ಷಣವೇ ಇವರ ಮಹಿಮೆ ಪ್ರಾರಂಭ ವಾಯಿತು.

ಹುಲಿ ಗರ್ಜನೆ ಕೇಳಿ ಎದ್ದಾಗ ತೊಡೆಯ ಮೇಲೆ ಮಲಗಿದ್ದ ಮಗು ಜಾರಿ ಕೆಳಗೆ ಬಿದ್ದಾಗ ಶತಶೃಂಗ ವೆಂಬ ದೊಡ್ಡ ದಾದ ಬಂಡೆ ನೂರಾರು ತುಂಡು ಗಳಾದವು. ಕುದರೆ ಮತ್ತು ಆನೆಗಳನ್ನು ಮರ್ಧಿಸುವ ವೀರನಿಗೆ ನರಸುರರು ಸಮವಿಲ್ಲ ಎಂದಿದ್ದಾರೆ.

"ಕುರುಪ ಗರಳವನಿಕ್ಕೆ ನೆರೆಯುಂಡ ತೇಗಿ
ಉರಗಗಳ ಮೇಲ್ಬಿಡಲು ಅವನೊರಿಸಿದ
ಅರಗಿನಮನೆಯಲ್ಲಿ ಉರಿಯನಿಕ್ಕಿತಾ ವೀರ
ಧರಿಸಿ ಜಾಹ್ನವಿಗೊಯ್ದ ತನ್ನನುಜರ

ಬಾಲ್ಯದಲ್ಲಿ ಭೀಮನ ಮೇಲಿನ ಅಸೂಯ್ಯೆ ಮತ್ತು ದ್ವೇಷ ದಿಂದ ದುರ್ಯೋಧನನು ಭೀಮನಿಗೆ ವಿಷ ಕುಡಿಸಿ ಮೇಲೆ ವಿಷ ಸರ್ಪಗಳನ್ನು ಬಿಟ್ಟನು. ಆದರೆ ಪರಾಕ್ರಮಿಯಾದ ಭೀಮ ವಿಷ ವನ್ನು ಅರಗಿಸಿಕೊಂಡು ಸರ್ಪಗಳನ್ನು ಕೊಂದನು. ಅರಗಿನ ಮನೆಯಿಂದ ತಾಯಿ ಸಹೋದರರನ್ನು ರಕ್ಷಿಸಿ, ಅರಗಿನ ಮನೆಗೆ ತಾನೇ ಉರಿಯನ್ನಿಟ್ಟು ಅವರನ್ನು ತನ್ನ ಭುಜದ ಮೇಲೆ ಹೊತ್ತು ಕೊಂಡು ಗಂಗೆಯ ತಟಕ್ಕೆ ಬಂದನು.


ಅಲ್ಲಿರ್ದ ಬಕಹಿಡಿಂಬಕರೆಂಬ ರಕ್ಕಸರ
ನಿಲ್ಲದೊರಸಿದ ಲೋಕಕಂಟಕರನು
ಬಲ್ಲಿದ್ದ ಸುರರಗೆಲಿದು ದ್ರೌಪದಿಯ ಕರವಿಡಿದು
ಎಲ್ಲ ಸುಜನರಿಗೆ ಹರ್ಷವ ಬೀರಿದ

ಲೋಕಕಂಟಕರಾದ ಬಕಹಿಡಿಂಬಕ ರಾಕ್ಷಸರನ್ನು ಸಂ ಹರಿಸಿ ಅಸುರರನ್ನು

ಗೆದ್ದು, ಹಿಡಿಂಬನ ತಂಗಿಯಾದ ಹಿಡಿಂಬಿಕಾಳನ್ನು ಮದುವೆಯಾಗಿ ಎಲ್ಲರಿಗೂ ಹರುಷವನಿತ್ತರು.

ರಾಜಕುಲವಜ್ರನೆನಿಸಿದ ಮಗಧನ ಸೀಳಿ
ರಾಜಸೂಯಾಗವನು ಮಾಡಿಸಿದನು
ಅಜಿಯಲಿ ಕೌರವರ ಬಲವ ಸವರುವನೆಂದು
ಮೂಜಗಾವರಿಯೆ ಕಂಕಣ ಕಟ್ಟಿದ

ರಾಜಕುಲದ ವಜ್ರನೆನಿಸಿದ ಮಗಧ ದೇಶದ ಜರಾಸಂಧ ನನ್ನು ಸಂಹರಿಸಿ ಧರ್ಮರಾಜನ ರಾಜಸೂಯಾಗವನ್ನು ನಿರ್ವಿಘ್ನ ರೀತಿಯಿಂದ ನಡೆಯುವಂತೆ ಮಾಡಿದನು ಮತ್ತು ಯುದ್ಧದಲ್ಲಿ ಕೌರವರ ಸೋಲಿಸುವ ಮೂಜಗಕ್ಕೆ ತಿಳಿಯು ವಂತೆ ಪ್ರತಿಜ್ಞೆಯ ದೀಕ್ಷೆ ತೊಟ್ಟನು.



ಮಾನನಿಧಿ ದ್ರೌಪದಿಯ ಮನದಿಂಗಿತವನರಿತು
ದಾನವರ ಸವರಬೇಕೆಂದು ಬೇಗ
ಕಾನನವ ಪೊಕ್ಕು ಕಿರ್ಮಿರಾದಿಗಳ ತರಿದು
ಮಾನಿನಿಗೆ ಸೌಗಂಧಿ ಕುಸುಮ ತಂದೆ

ಮಾನನಿಧಿಯಾದ ದ್ರೌಪದಿ ಮನದ ಆಸೆಯಂತೆ ಸೌಗಂಧಿಕ ಪುಷ್ಪ ತರಲು ಹೋಗುವಾಗ ಕೀರ್ಮಿರಾದಿ (ಬಕಾಸುರನ ತಮ್ಮ) ಅನೇಕ ರಾಕ್ಷಸರನ್ನು ಸಂಹರಿಸಿ ದ್ರೌಪದಿಗೆ ಸೌಗಂಧಿಕ ಪುಷ್ಪವನ್ನು ತಂದು ಕೊಟ್ಟನು.

ದುರಳ ಕೀಚಕತಾನು ದ್ರೌಪದಿಯು ಚಲುವಿಕೆಗೆ
ಮರುಳಾಗಿ ಕರಕರೆಯ ಮಾಡಲವ
ಗರುಡಿಯಾಮನೆಯಲ್ಲಿ ಒರೆಸಿ ಅವನನ್ವಯವ
ಕುರುಪನಟ್ಟಿದ ಮಲ್ಲಕುಲವ ಸದೆದ

ವಿರಾಟರಾಜನ ಪತ್ನಿ ಸುದೇಷ್ಣೆಯ ಸಹೋದರ ಕೀಚಕ. ಪಾಂಡವರು ಅಜ್ಞಾತವಾಸ ಕಳೆಯಲು ಒಂದೊಂದು ವೇಷದಲ್ಲಿ ವಿರಾಟರಾಜನ ಹತ್ತಿರ ಕೆಲಸ ಮಾಡುತ್ತಿದ್ದರು. ದ್ರೌಪದಿಯು ಸೈರೇಂಧ್ರಿಯಾಗಿ,ಸುಧೇಷ್ಣೆಯ ಅಪ್ತಸಖಿಯಾಗಿದ್ದಳು.ಕೀಚಕ ಇವಳನ್ನು ನೋಡಿ ಮೋಹಗೊಂಡು ದ್ರೌಪದಿಗೆ ಕಿರುಕಳ ನೀಡುತ್ತಿದ್ದನು ಭೀಮಸೇನ ದೇವರು ಗರುಡಿ ಮನೆಯಲ್ಲಿ ಮರ್ದಿಸಿದನು. ಹೀಗೆ ಮಲ್ಲ ಕುಲವನ್ನು ಸಂಹರಿಸಿದನು.

ವೈರಿದುಶ್ಯಾಸನನ ತೊಡೆಯಮೇಲಡ್ಡ ಗೆಡಹಿ
ವೀರನರಹರಿಯೆ ಲೀಲೆಯ ತೋರಿದ
ಕೌರವರ ಒಲಸವರಿ ವೈರಿಗಳನೆಗ್ಗೊತ್ತಿ
ಓ ರಂತೆ ಕೌರವರ ಕುಲವ ತರಿದೆ

ನರಸಿಂಹ ದೇವರು ಹಿರಣ್ಯ ಕಶ್ಯಪನನ್ನು ಸಂಹರಿಸಿದಂತೆ ದುಶ್ಯಾಸನನ್ನು ಅಡ್ಡಗೆಡವಿ ಸಂಹರಿಸಿದರು. ಒಬ್ಬೊಬ್ಬರಂತೆ ಯಾರನ್ನು ಬಿಡದೆ ಕೌರವ ಕುಲವನ್ನು ನಾಶ ಮಾಡಿದರು.

ಗುರುಸುತನು ಸಂಗರದಿ ನಾರಾಯಣಾಸ್ತ್ರವನು
ಉರುವಣಿಸಿ ಬಿಡಲು ಶಸ್ತ್ರವ ಬಿಸುಟರು
ಹರಿಕೃಪೆಯ ಪಡೆದಿರ್ದ ಭೀಮ ಹುಂಕಾರದಿಂ
ಎರಗದಲೆ ದಿವ್ಯಾಸ್ತ್ರವನ್ನು ನೆರೆ ಅಟ್ಟಿದ

ತಂದೆಯ ಸಾವಿನ ಸೇಡು ತೀರಿಸಿಕೊಳ್ಳಲು ಅಶ್ವಥಾಮನು ನಾರಾಯಣ ಅಸ್ತ್ರ ಬಿಟ್ಟಾಗ,ಕೃಷ್ಣನ ಮಾತಿನಂತೆ ಪಾಂಡವರಾದಿ ಎಲ್ಲರೂ ತಮ್ಮ ಶಸ್ತ್ರಾಸ್ತ್ರಗಳನ್ನು ಬಿಟ್ಟು ಶರಣಾಗತಿ ಹೋದರೆ ಭೀಮಸೇನ ದೇವರು, ಕ್ಷತ್ರಿಯ ಧರ್ಮಕ್ಕೆ ಇದು ತರವಲ್ಲ ಎಂದು ಆ ನಾರಾಯಣ ಅಸ್ತ್ರವನ್ನು ಕೃಷ್ಣ ಕೃಪಾ ಕಟಾಕ್ಷದಿಂದಲೇ ಅಟ್ಟಿದರು.

ನಾರಿರೋಧನ ಕೇಳಿ ಮನಮರುಗಿ ಗುರುಸುತನ
ಹಾ ಹಿರಡಿದು ಶಿರೋರತ್ನ ಕಿತ್ತಿ ತೆಗೆದ
ನೀರೊಳಡಗಿದ್ದ ದುರ್ಯೋಧನನ ಹೊರಗೆಡಹಿ
ಊರದ್ವಯ ತನ್ನ ಗದೆಯಿಂದ ಮುರಿದ

ಕೌರವರ ಪ್ರೀತಿಗಾಗಿ ಉಪಪಾಂಡವರು ಮಲಗಿದ್ದಾಗ ಸಪಹರಿಸುತ್ತಾರೆ. ಇದನ್ನು ನೋಡಿ ದ್ರೌಪದಿ ರೋಧಿಸುತ್ತಿರಲು, ಭೀಮಸೇನ ದೇವರು ವೇಗವಾಗಿ ಓಡಿ ಹಿಡಿದು ನದಿ ರೋರತ್ನವನ್ನು ಕೀತ್ತುತ್ತಾರೆ. ಮತ್ತು ಯುದ್ಧದಲ್ಲಿ ಮಡಿದವರನ್ನು ಬದುಕಿಸುವ ಸಲುವಾಗಿ ಮಂತ್ರವೊಂದನ್ನು ಜಪಿಸುತ್ತಾ ದುರ್ಯೋಧನ ಕುಳಿತಿರುತ್ತಾನೆ.ಆಗ ಅಲ್ಲಿಗೆ ಹೋಗಿ ದುರ್ಯೋಧನ ಎರಡು ತೊಡೆಯನ್ನು ಮುರಿಯುತ್ತಾನೆ.

ಚಂಡವಿಕ್ರಮನು ಗದೆಯನು ಪಿಡಿದು
ಭೂಮಂಡಲದೊಳಿದಿರಾದ ಖಳರೆನ್ನೆಲ್ಲ
ಹಿಂಡಿ ಬಿಸುಟಿಹ ವೃಕೋದರನ ಪ್ರತಾಪವನು
ಕಂಡು ನಿಲ್ಲುವರಾರು ತ್ರಿಭುವನದೊಳು

ಚಂಡವಿಕ್ರಮನಾದ ಪರಾಕ್ರಮಿಯಾದ ಭೂಮಂಡಲದ ಎಲ್ಲ ದುಷ್ಟರನ್ನು ವಧಿಸಿ, ನಿಶ್ಶೇತರನ್ನಾಗಿ ಮಾಡಿ ಬಿಸಾಡಿದ ವೃಕೋಧರನ ಪ್ರತಾಪವನ್ನು ಈ ಮೂರು ಲೋಕೊದಳಗೆ ಯಾರು ಸಾಟಿಯಿಲ್ಲಿ ಎಂದು ಹೇಳಿದ್ದಾರೆ.

ಭೀಮಸೇನದೇವರ ಬಗ್ಗೆ ತಿಳಿಯುವುದೆನೆಂದರೆ

ಭಕ್ತಿ ಜ್ಞಾನಂ ಸ ವೈರಾಗ್ಯ ಪ್ರಜ್ಞಾ ಮೇಧಾ ಧೃತಿ ಸ್ಥಿತಿಃ
ಯೋಗಃ ಪ್ರಾಣೋ ಬಲಂ ಚೈವ ವೃಕೋದರ

**ಇತಿ ಸ್ಮೃತಃ**

ಏತದ್ಧಶಾತ್ಮಕೋ ವಾಯುಃ ತಸ್ಮಾತ್ ಭೀಮಸ್ತದಾತ್ಮಕಃ

ಇವರಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಪ್ರಜ್ಞಾ, ಮೇಧಾ, ಧೃತಿ ಸ್ಥಿತಿ ಯೋಗ, ಪ್ರಾಣ, ಬಲ, ಈ ಹತ್ತುಗುಣ ಪೂರ್ಣರಾದ ಭೀಮಸೇನದೇವರ ಫಾಲ್ಗುಣ ಶುದ್ಧ ತ್ರಯೋದಶಿಯಂದು ಭೀಮ ಜಯಂತಿ ಇರುವುದರಿಂದ ಅವರ ಸ್ಮರಣೆ ಮಾಡೋಣ ನಮ್ಮನ್ನು ಆಧ್ಯಾತ್ಮದ ಸಾಧನೆಯಲ್ಲಿ ಜ್ಞಾನ ಭಕ್ತಿ ವೈರಾಗ್ಯದಿಂದ ನಡೆಯೋಣ.



# ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ "ತಾಯಿ ತಂದೆ ಗೋವಿಂದಾ" ಆತ್ಮನಿವೇದನೆ ಕೀರ್ತನೆಯ ಒಳನೋಟ

– ಡಾ॥ ಸುಭಾಸ ಕಾಖಂಡಕಿ

79754 42458



ಗೋವಿಂದಾ ಗೋವಿಂದಾ ಗೋವಿಂದಾ ನನ್ನ।
ತಾಯಿ ತಂದೆ ಗೋವಿಂದಾ ॥ಪ॥

ಶ್ರೀ ಪ್ರಸನ್ನ ವೆಂಕಟದಾಸರ ಈ ಕೀರ್ತನೆಯಲ್ಲಿ ''ಗೋವಿಂದ'' ಎನ್ನುವ ನಾಮಸ್ಮರಣೆಯಲ್ಲಿಯೇ, ಸರ್ವ ಸಮರ್ಪಣ ಭಾವವನ್ನು ಕಾಣಬಹುದು. ಈ ಸರ್ವ ಸಮರ್ಪಣ ಭಾವ ಅವರು ತಮ್ಮ ಜೀವನದಲ್ಲಿ ಅಳವಡಿಸಿ ಕೊಂಡಿರುವುದನ್ನು ತಿಳಿಯಬಹುದು. ಶ್ರೀಪ್ರಸನ್ನವೆಂಕಟ ದಾಸರ ಜೀವನಚರಿತ್ರೆ. ಅವಲೋಕಿಸಿದಾಗ , ಬಾಲ್ಯದಲ್ಲಿ ಅವರ ತಾಯಿ ಬಿತ್ತಿದ "ನಿನ್ನ ಕಾಪಾಡುವ ನಿಜವಾದ ತಾಯಿ - ತಂದೆ ಎಂದರೆ ತಿರುಪತಿ ತಿಮ್ಮಪ್ಪ, ಅವನನ್ನು ನಂಬಿ ಭಜಿಸು'' ಎಂಬ ಸಮರ್ಪಣ ಭಾವದ ಭಕ್ತಿ ಬೀಜವನ್ನು ಅಂತರಂಗದಲ್ಲಿ ಬೆಳೆಸಿ ಕೇವಲ ತಮ್ಮ ಸರ್ವ ಸಮರ್ಪಣ ಭಾವದ ಭಕ್ತಿಯ ಪರಾಕಾಷ್ಠತೆಯಿಂದ ಶ್ರೀನಿವಾಸನನ್ನು ಸಾಕ್ಷಾತ್ಕರಿಸಿಕೊಂಡವರು. ಈ ಭಕ್ತಿಯ ಪರಾಕಾಷ್ಠತೆ ಭಾವವೇ ಅವರನ್ನು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಅನುವಾಯಿತು. ಈ ಭಾವವು ಕೀರ್ತನೆಯಲ್ಲಿ ಮಡುಗಟ್ಟಿದೆ.

**ಮುಂದಿನ ನುಡಿಯಲ್ಲಿ**

ತಿರುಗಿ ಭವದಲಿ ಗೋವಿಂದಾ ವೃಥಾ
ಮರುಗಿ ಬಳಲಿದೆನೊ ಗೋವಿಂದಾ
ಕರಗಿ ತಾಪದಿ ಗೋವಿಂದಾ ಸಿಡಿ -
ಲೆರಗಿಸಿ ಕೊಂಡೆನೊ ಗೋವಿಂದಾ ॥೧॥

ವೈರಾಗ್ಯ ಮೂರ್ತಿಯಾದ ದಾಸರು ಕೂಡ, ಇಲ್ಲಿ ಲೌಕಿಕ ಭವದಲ್ಲಿ ಹೇಗೆ ವೃಥಾ-ತೊಳಲಿ-ಬಳಲಿ, ಆ ಭವದ ತಾಪದಲ್ಲಿ ನೊಂದು ಬಳಲಿದ್ದೇನೆ'' ಎಂದಿದ್ದಾರೆ. ಅಲ್ಲದೆ ಈ ತಾಪ ಎಷ್ಟರ ಮಟ್ಟಿಗೆ ಕಾಡಿದೆಯೆಂದರೆ ಸಿಡಿಲು ಎರಗಿ ಹೇಗೆ ಅಗ್ನಿ ಜ್ವಾಲೆಯಂತೆ ಸುತ್ತುವರಿದು ಸುಡುತ್ತದೆಯೋ ಹಾಗೆ. ಆ ಲೌಕಿಕದ ಬಂಧನಗಳು ಅವರನ್ನು ಕಾಡಿ ಕುಗ್ಗಿಸಿ ಬೆಂಕಿಯಂತೆ ಸುಡುತ್ತಿವೆ. "ನಿನ್ನ ಬಿಟ್ಟರೆ ನನಗೆ ಯಾರಿಲ್ಲ ಸ್ವಾಮಿ! ಇಂಥ ಬೇಗುದಿಯಿಂದ ನನ್ನನ್ನು ಪಾರು ಮಾಡು''ಎಂದು ಅನನ್ಯ ಭಾವದ ಆತ್ಮನೀವೇದನೆಯ ಧ್ವನಿಯಲ್ಲಿ ಭಗವಂತನನ್ನು ಕೇಳಿಕೊಂಡಿದ್ದಾರೆ.

**ನುಡಿ- ೨ ರಲ್ಲಿ**

ಎಚ್ಚರ ಹಾರಿತು ಗೋವಿಂದ ನಾ
ಮೆಚ್ಚಿದೆ ವಿಷಯಕೆ ಗೋವಿಂದಾ
ಹುಚ್ಚು ಮಾಡಿತು ಮನಗೋವಿಂದಾ ನಿ
ನ್ನು ಚ್ಚರಣಡಗಿತು ಗೋವಿಂದಾ ॥೨॥

ಇಲ್ಲಿ 'ಮೆಚ್ಚಿದ ವಿಷಯಗಳು' ಅಂದರೆ ''ಕಾಮ-ಕ್ರೋಧ-ಲೋಭ-ಮದ-ಮತ್ಸರ-ಮೋಹ'' ವೆಂಬ ಅರಿಷಡ್ವರ್ಗಗಳು ಮನುಷ್ಯನ ಒಳಗಿನ ಶತ್ರುಗಳಾದ ಈ ವಿಷಯ ವಾಸನೆಗಳು ಬಯಕೆಗಳು ಮನುಷ್ಯನನ್ನು ಎಚ್ಚರ ತಪ್ಪಿಸಿ ಬಿಡುತ್ತವೆ. ಅಂದರೆ ನೀತಿ ನಿಯಮಗಳಿಂದ ದೂರಮಾಡಿ ಬಿಡುತ್ತವೆ. ಅವುಗಳನ್ನು ಪಡೆಯುವ ಹಂಬಲದಲ್ಲಿ ನೀತಿ - ನಿಯಮಗಳನ್ನು ಮೀರಿ ಹುಚ್ಚನಾಗಿ ಬಿಡುತ್ತಾನೆ. ತನ್ನನ್ನು ಉದ್ಧಾರ ಮಾಡುವ ಭಗವಂತನ ನಾಮಸ್ಮರಣೆಯನ್ನೂ ಮರೆತು ಬಿಡುತ್ತಾನೆ. ಹಾಗೆ ಮಾಡಬೇಡ ಸ್ವಾಮಿ ಎಂಬ ಆರ್ತರ ಭಾವದಿಂದ ಪ್ರಾರ್ಥಿಸಿದ್ದಾರೆ. ಈ ಎಲ್ಲ ಅಂಶಗಳನ್ನು ದಾಸರು ಆತ್ಮನಿವೇದನೆಯ ರೀತಿಯಲ್ಲಿ ತಮ್ಮನ್ನು ಸಂಬೋಧಿಸಿಕೊಂಡು ಬೇಡಿಕೊಂಡರು, ಅದು ಸಮಾಜಕ್ಕೆ ನೀತಿಯ ಉಪದೇಶಿದಂತಿರುವ ಧ್ವನಿಯನ್ನು ಇಲ್ಲಿ ಕಾಣಬಹುದು.

**ಇನ್ನು ಕೊನೆಯ ನುಡಿಯಲ್ಲಿ**

ಆಶೆಯ ಬಿಡಿಸೈ ಗೋವಿಂದಾ ನಿನ್ನ
ದಾಸರೊಳಿರಿಸೈ ಗೋವಿಂದಾ
ಪ್ರಸನ್ನ ವೆಂಕಟ ಗೋವಿಂದಾ ಭವ।
ಘಾಸಿಯ ತಪ್ಪಿಸು ಗೋವಿಂದ ॥೩॥

ಮೊದಲಿನ ಎರಡು ನುಡಿಗಳಲ್ಲಿ ದಾಸರು ತಮ್ಮಲ್ಲಿರುವ ತಪ್ಪುಗಳನ್ನು ನಿವೇದಿಸಿಕೊಂಡರೆ, ಈ ಕೊನೆಯ ನುಡಿಯಲ್ಲಿ ಮತ್ತೆ ಶ್ರೀಹರಿಯನ್ನು ಶರಣು ಹೋಗಿ, ಅನನ್ಯವಾಗಿ ಹಂಬಲಿಸಿ ಬೇಡಿಕೊಂಡಿದ್ದಾರೆ.

"ಭಗವಂತಾ! ಇಂಥಹ ಎಲ್ಲ ಭವಗಳಲ್ಲಿ, ನಾನು ತೊಳಲಿ - ಬಳಲಿದ್ದೇನೆ. ನನ್ನನ್ನು ಸುತ್ತುವರಿದ ಆಶೆಗಳಿಂದ ನನ್ನನ್ನು ವಿಮುಕ್ತನಾಗಿ ಮಾಡು. ಸದಾ ನಿನ್ನ ಭಕ್ತರ ಸಂಗದಲ್ಲಿರಿಸಿ ನನ್ನಲ್ಲಿ ಸದಾಚಾರದ ಸ್ಮೃತಿಗಳನ್ನು ಸ್ಫುರಿಸುವಂತೆ ಮಾಡಿ ಅವರನ್ನು ಅನುಕರಿಸುವ ಹಾದಿ ತೋರಿಸು! ಎನ್ನುವ ದಾಸರು ಮತ್ತೆ ಮತ್ತೆ ಈ ಭವಬಂಧನಗಳಿಂದ ಬಿಡಿಸಿ ತನ್ನನ್ನು ಘಾಸಿಗೊಳಿಸುವ ಹಾದಿಯಿಂದ ತಪ್ಪಿಸು ! ನೀನೆ ನನ್ನ ತಾಯಿ - ತಂದೆ, ಮಕ್ಕಳನ್ನು ಸರಿಯಾದ ದಾರಿಯಲ್ಲಿ ನಡೆಸುವಂತೆ ನನ್ನನ್ನು ಸನ್ಮಾರ್ಗದಲಿ ನಡೆಸು '' ಎಂದು ಗೋವಿಂದನಲ್ಲಿ ಅನನ್ಯವಾಗಿ ಬೇಡಿಕೊಂಡಿದ್ದಾರೆ ದಾಸರು.

# ಆಯುರ್ವೇದ ಮತ್ತು ನಾವು





- ಡಾ ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

8



ನಾವೀಗ ಬೃಹತ್ತ್ರಯೀ, ಮತ್ತು ಲಘುತ್ರಯೀಗಳ ಬಗ್ಗೆ ತಿಳಿದುಕೊಳ್ಳೋಣ.

ಬೃಹತ್ತ್ರಯೀ : ಚರಕ ಸಂಹಿತ, ಸುಶ್ರುತ ಸಂಹಿತ, ವಾಗ್ಭಟ ಸಂಹಿತ.

ಲಘುತ್ರಯೀ : ಮಾಧವನಿದಾನ, ಭಾವಪ್ರಕಾಶ, ಶಾರಂಗಧರ ಸಂಹಿತ.

ಇವುಗಳಲ್ಲಿ ಮಾಧವ - ನಿದಾನವನ್ನು ಹೊರತು ಪಡಿಸಿ ಉಳಿದ ಎಲ್ಲಾ ಗ್ರಂಥಗಳಲ್ಲಿ ಎಲ್ಲ ಅಷ್ಟಾಂಗಗಳನ್ನೂ ವಿವರಿಸಿದೆ ಆದರೂ ಚರಕ ಸಂಹಿತೆಯು ಚಿಕಿತ್ಸೆಗೆ, ಸುಶ್ರುತ ಸಂಹಿತೆಯು ಶಲ್ಯಶಾಲಾಕ್ಯ ತಂತ್ರಕ್ಕೆ, ಮಾಧವನಿದಾನವು ರೋಗನಿಧಾನಕ್ಕೆ ಪ್ರಸಿದ್ಧ. ಶಾರಂಗಧರ ಸಂಹಿತೆಯು ಭೈಷಜ್ಯಕಲ್ಪದಲ್ಲಿಯೂ, ಭಾವಪ್ರಕಾಶವು ದ್ರವ್ಯಗುಣದಲ್ಲಿಯೂ ಪ್ರಸಿದ್ಧ ವಾಗಿದೆ. ರಸಶಾಸ್ತ್ರದ ಬಗ್ಗೆ ರಸರತ್ನ ಸಮುಚ್ಚಯ ಎಂಬುದು ಪ್ರಸಿದ್ಧಗ್ರಂಥ.

ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಭಿಕ್ಷುರಾತ್ರೇಯನೆಂಬ ಪ್ರಸಿದ್ಧ ಪ್ರಾಧ್ಯಾಪಕನೋರ್ವ ತಕ್ಷ ಶಿಲೆಯ ವಿಶ್ವವಿದ್ಯಾನಿಲಯದಲ್ಲಿದ್ದ. ಈತನ ಶಿಷ್ಯನಾದ ಜೀವಕ ಎಂಬವನು ತಕ್ಷಶಿಲೆಯಲ್ಲಿ ವ್ಯಾಸಂಗಮಾಡಿ ಮಗಧ ದೇಶದ ಅನೇಕ ಕಡೆಗಳಲ್ಲಿ ಸಂಚರಿಸಿ ವೈದ್ಯ ವೃತ್ತಿಯನ್ನು ನಡೆಸಿದ ಅನಂತರ ಬುದ್ಧದೇವನ ಆಸ್ಥಾನದ ಹೆಸರಾಂತ ವೈದ್ಯನಾದ ಬೌದ್ಧಮತ ಪ್ರಚಾರದ ಮೂಲಕ ಆಯುರ್ವೇದ ಚಿಕಿತ್ಸೆ ಹಳ್ಳಿಹಳ್ಳಿಯಲ್ಲೂ ನಡೆಯು ತ್ತಿತ್ತು. ಉಚಿತ ಚಿಕಿತ್ಸಾಲಯಗಳು ತೆರೆಯಲ್ಪಟ್ಟವು. ಆದರೆ ಶಸ್ತ್ರ ಚಿಕಿತ್ಸೆ ಹಿಂದುಳಿಯಿತು.

ಶೈವ ಪಂಥದಲ್ಲಿ ವೈದ್ಯರು ಪಾದರಸವನ್ನೆ ಶಿವರೂಪವೆಂದು ರಸಲಿಂಗ ಮಾಡಿ ಅದನ್ನು ಪೂಜಿಸುತ್ತಿದ್ದರು. ರಸವಾದದಲ್ಲಿ ಪರಾಕಾಷ್ಠೆ ಯನ್ನು ಪಡೆದು ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದರು. ರಸ, ತಾಮ್ರ ಮುಂತಾದುವನ್ನು ಚಿನ್ನವಾಗಿ ಪರಿವರ್ತಿಸುವುದನ್ನು ಸಾಧಿಸಿದ್ದರು. ಲೋಹಾದಿಗಳನ್ನು ಭಸ್ಮ ಮಾಡಿ ಅವುಗಳಿಂದ ತಯಾರಿಸಿದ ಔಷಧಿಗಳಿಂದ ರೋಗಗಳನ್ನು ಹೋಗಲಾಡಿಸುತ್ತಿದ್ದರು.

ದೇವ ಮತ್ತು ಋಷಿಗಣಗಳಲ್ಲಿ ಅನೇಕಾನೇಕ ವೈದ್ಯಶ್ರೇಷ್ಠರು ಆಯು ರ್ವೇದವನ್ನು ಪ್ರಸಾರ ಮಾಡಿದರು. ಇವರೆಲ್ಲರೂ ಹೆಚ್ಚಾಗಿ ಗಿಡ ಮೂಲಿಕೆ ಮತ್ತು ಪ್ರಾಣಿಜನ್ಯ ದ್ರವ್ಯಗಳನ್ನೇ ಉಪಯೋಗಿಸುತ್ತಿದ್ದರು. ಪಾದರಸ ಲೋಹಾದಿಗಳ ಪ್ರಯೋಗ ಬಹಳ ವಿರಳವಾಗಿತ್ತು.

ಕ್ರಿ.ಶ. ಒಂದು ಅಥವಾ ಎರಡನೆಯ ಶತಮಾನದವರೆಗೆ ಕಾಯ ಬಾಲ, ಗ್ರಹ, ಶಾಲಾಕ್ಯ, ಶಲ್ಯ, ವಿಷ, ರಸಾಯನ ಮತ್ತು ವಾಜೀಕರಣಗಳೆಂಬ ಆಯುರ್ವೇದದ ಎಂಟು ಭಾಗಗಳು ಶಾಸ್ತ್ರೀಯವಾಗಿ ಅಭ್ಯಸಿಸಲ್ಪಡುತ್ತಿದ್ದವು. ಅಲ್ಲಿಂದ ಮುಂದೆ ಇನ್ನೂರು ವರ್ಷಗಳಲ್ಲಿ ದೇಶದ ರಾಜಕೀಯ ಮತ್ತು ಮತೀಯ ಗೊಂದಲಗಳಿಂದ ಶಾಸ್ತ್ರಾಭಿವೃದ್ಧಿ ನಿಂತು ಹೋಯಿತು. ಗ್ರಂಥಗಳು ಖಿಲವಾಗುತ್ತ ಬಂದವು.

ಕ್ರಿಶ. ಸುಮಾರು ನಾಲ್ಕನೆಯ ಶತಮಾನದಲ್ಲಿ ಸಿಂಧೂದೇಶದ ಸಿಂಹ ಗುಪ್ತನ ಮಗನಾದ ವಾಗ್ಭಟ ಅಷ್ಟಾಂಗ ಸಂಗ್ರಹ ಮತ್ತು ಅಷ್ಟಾಂಗ ಹೃದಯಗಳನ್ನು ಬರೆದ. ಆಯುರ್ವೇದ ಇತಿಹಾಸದಲ್ಲಿ 'ವಾಗ್ಭಟ'ನೆಂದು ಕರೆಯಲ್ಪಡುವ ಇನ್ನೊಬ್ಬನಿದ್ದಾನೆ. ಈತ 'ರಸರತ್ನ ಸಮುಚ್ಚಯದ ಗ್ರಂಥಕರ್ತೃ ಈತನ ಶೈಲಿ, ತತ್ವಗಳು ಬೇರೆಯಾಗಿರುವುದರಿಂದ ಈ ನಿರ್ಧಾರಕ್ಕೆ ಬಂದಿ ದ್ದಾರೆ. ಅಷ್ಟಾಂಗ ಹೃದಯದಲ್ಲಿ ರಸಪ್ರಯೋಗ ಅಥವಾ ಭಸ್ಮಪ್ರಯೋಗ ಗಳಿಲ್ಲ. ಒಂದೆರಡು ಕಡೆ ಧಾತುಗಳ ಪ್ರಯೋಗವಿದ್ದರೂ ಅವು ಪ್ರತ್ಯೇಕ ವಾದವು.

ಆಯುರ್ವೇದ ನಿರ್ಮಾಣದಲ್ಲಿ ಕಾಲದಿಂದ ಕಾಲಕ್ಕೆ ಹೆಚ್ಚು ಕಲ್ಪಗಳು ಯೋಗಗಳು ಮತ್ತು ರೀತಿಗಳು ಹೆಚ್ಚುತ್ತಾ ಬಂದಿವೆ. ಚರಕಸಂಹಿತೆಗೆ ಚಕ್ರಪಾಣಿ (11 ನೇ ಶತಮಾನ) , ಸುಶ್ರುತಕ್ಕೆ ಡಲ್ಹಣ (11 ನೇ ಶತಮಾನ) ಅಷ್ಟಾಂಗ ಸಂಗ್ರಹಕ್ಕೆ ಇಂದು (9ನೇ ಶತಮಾನ) ಅಷ್ಟಾಂಗ ಹೃದಯಕ್ಕೆ ಅರುಣದತ್ತ (12 ನೇ ಶತಮಾನ) ಮತ್ತು ಹೇಮಾದ್ರಿ (13 ನೇ ಶತಮಾನ) ವ್ಯಾಖ್ಯಾನಗಳನ್ನು ಬರೆದು ಇವು ಹೆಸರುವಾಸಿಯಾಗಿವೆ.



ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

(ಕಳೆದ ಸಂಚಿಕೆಯಿಂದ)

"ಘುಷ್ಯತೇ ಸಂಘುಶಶ್ಶೋಚ್ಚೈರ್ಗೋವಿಂದೇತಿ ಪುನಃ ಪುನಃ"

(ಭಕ್ತರು ಗುಂಪು ಗುಂಪುಗಳಲ್ಲಿ ಸೇರಿ ಗೋವಿಂದಾ, ಗೋವಿಂದಾ! ಎಂದು ಉಚ್ಚ ಸ್ವರಗಳಲ್ಲಿ ಘೋಷಿಸುತ್ತಿದ್ದರು)

ಹೇಳಿದ ವಿಧಾನದಲ್ಲೇ ನೈಮಿಷಾರಣ್ಯ ವಾಸಿಗಳಲ್ಲಿ ಹಲವರು ಮಹರ್ಷಿಗಳು ಶುಕಮಹರ್ಷಿ ಮುಖೇನ ಶ್ರೀವೆಂಕಟಾಚಲ ಮಹಾತ್ಮೆಯನ್ನು ಕೇಳಿ ಶ್ರೀವೆಂಕಟಾಚಲ ಯಾತ್ರೆಯನ್ನು ಮಾಡುವಾಗ (ಅನರ್ಹ) ನಾಮ ಗಳನ್ನು ಬಿಟ್ಟು "ಸದಾ ಗೋವಿಂದ ಕೀರ್ತನಂ" ಎಂಬಂತೆ ಗೋವಿಂದಾ! ಎಂಬ ನಾಮವನ್ನೇ ಮಾತು ಮಾತಿಗೆ ಉಚ್ಚರಿಸುತ್ತಾ ಯಾತ್ರೆಯನ್ನು ಮಾಡಿ ದ್ದಾರೆಂದು ಶ್ರೀವರಾಹ ಪುರಾಣದಲ್ಲಿಯ ಅರ್ಥ ವಿಶೇಷವನ್ನು ಮನಸ್ಸಿನಲ್ಲಿ ಅಂದುಕೊಂಡು ಈ ವೆಂಕಟಾಚಲವು ದೇವತಾಂತರ ಸಂಬಂಧದ ಗಂಧವಿರದ ವಿಷ್ಣು ಕ್ಷೇತ್ರವೆಂದು ಲೋಕದಲ್ಲಿರುವ ಎಲ್ಲಾ ಪಂಡಿತ ಪಾಮ ರರು,ಎಲ್ಲಾ ಸಾಮಾನ್ಯರೂ ತಿಳಿಯಲೆಂದು, ಲೋಕದ ಸಮಸ್ತ ಯಾತ್ರಿ ಕರಿಗೆ, ಪರಮ ಭಾಗವತರಿಗೆ ತಿಳಿಯಲೆಂದು, ಈ ಋಷಿಗಳಿಂದಲೇ ಹೆಜ್ಜೆ ಹೆಜ್ಜೆಗೂ ಗೋವಿಂದ ನಾಮೋಚ್ಚಾರಣೆಯನ್ನು ಮಾಡುತ್ತಾ ಯಾತ್ರೆಯನ್ನು ಸಾಗಿಸುವಂತೆ ನಿಯಮವನ್ನು ವಿಧಿಸಿದ್ದಾರೆ.

"ಕೃತಮಾಲಾ ನದೀ ತೀರೇ ವಿಶ್ವಂಭರಕೃತೇ ಹರಿಃ

ಆವಿರಾಸೀದ್ರಘುವರೋ ವಿಭೀಷಣಭಯಾ ಪಹಃ"

(ವಿಶ್ವಂಭರ ಮಹಾಮುನಿಗಾಗಿ ಕೃತಾಮಾಲ ನದಿಯ ವೈಗೈ ಎಂಬ ತೀರದಲ್ಲಿ ಶ್ರೀಹರಿ (ಶರಣಾಗತ ) ವಿಭೀಷಣನ ಭಯವನ್ನು ಹೋಗಲಾಡಿಸಿದ ರಘುವರ ನಾಗಿ ಆವಿರ್ಭವಿಸಿದ್ದಾನೆ)

ಅಂದ ಹಾಗೆ ವಾಸಿಷ್ಠ ರಾಮಾಯಣದಲ್ಲಿ ಪ್ರತಿ ಪಾದಿಸಿದ ಹಾಗೆ ವೈಗೈ (ಕೃತಮಾಲ) ಎಂಬುವವನು ನದೀ ತೀರದಲ್ಲಿರುವ ದಕ್ಷಿಣ ಮಧುರಾಪುರಕ್ಕೆ ಪಶ್ಚಿಮ ದಿಕ್ಕಿನಲ್ಲಿರುವ ಕಲವಿಂಕಪುರ (ಕುರುವಿತ್ತುವೈ) ಎಂಬ ನಗರದಲ್ಲಿ ವಿಶ್ವಂಭರ ನಾಮಧೇಯದ ಒಬ್ಬ ಮಹಾ



ಮುನಿ 'ಚಕ್ರವರ್ತಿಸುತ' (ಶ್ರೀರಾಮಚಂದ್ರನು) ಸಮುದ್ರ ತೀರದಲ್ಲಿ ವಿಭೀಷಣ ವಿಷಯವಾಗಿ -

"ಅನಯ್ಯೆನಂ ಹರಿಶ್ರೇಷ್ಠ ದತ್ತಮಾಸ್ಯಾಽ ಭಯಾಂ ಮಯಾ"

(ಓ ವಾನರೋತ್ತಮಂ! ಆತನಿಗೆ (ವಿಭೀಷಣನಿಗೆ) ನೀನೇ ಅಭಯನಿತ್ತಿರುವಿ. ಆತನಿಗೆ ನಿನ್ನೊಡನಾಟವನ್ನೂ ಕೊಟ್ಟೆ")

ಎಂದು ಅಭಯ ಪ್ರದಾನವನ್ನು ಮಾಡಿದ ಅನುಗ್ರಹ ವೃತ್ತಾಂತವನ್ನು ಅರಿತು ಆಸಕ್ತನಾಗಿ ಅಂತಹ ಸನ್ನಿವೇಶವನ್ನು ತನಗೂ ತೋರಿಸಿ ಅನುಗ್ರಹಿಸಬೇಕೆಂದು ತಾನೂ ಸಹ ಭಗವಂತನನ್ನು ಕುರಿತು ತಪಗೈದಿದ್ದಾನೆ. ಆಗ ಭಗವಂತನು ಆ ಆಶ್ರಿತನನ್ನು ಕುರಿತು ಕೃಪೆ ತೋರಿ ಆತನ ಸ್ವಪ್ನದಲ್ಲಿ ತಾನೂ ಹಾಗೂ ತನ್ನ ತಮ್ಮನೂ ಧನುರ್ಧಾರಿಗಳಾದಂತೆ ಕಾಣಿಸಲು ಆತನ ಸನ್ನಿಧಾನದಲ್ಲಿ,

"ವಿಭೀಷಣಕೃತೇ ಸರ್ವಂ ವಿಜ್ಞಾಪ್ಯ ಹರಿಪುಂಗವಃ

ಯಥೇಷ್ಟಂ ಕುರು ರಾಜೇಂದ್ರೇ ತ್ಯುಚ್ಚರನ್ನಂಜಲಿಂ ವ್ಯ ಧಾತ್"

ಕಪಿ ಶ್ರೇಷ್ಠ (ಸುಗ್ರೀವ) ವಿಭೀಷಣರ ಕೋರಿಕೆಯ ಮೇರೆಗೆ ಸಮಸ್ತ ವಿಷಯಗಳನ್ನು ಕೇಳಿಸಿ "ರಾಜೇಂದ್ರ! ನಿನ್ನ ಅಭೀಷ್ಟೆಯನ್ನು ಹೇಳಿದರೆ ಅದರಂತೆ ಮಾಡುವೆ" ಎಂದು ಹೇಳಿ ತಿಲಾಂಜಲಿಯನ್ನು ಹಾಕಿದನು.

ಅದರಂತೆಯೇ ಮಹಾರಾಜನಿಗೆ ವಿಭೀಷಣಾಳ್ವಾನ್ (ವಿಭೀಷಣ)ನ ಕೋರಿಕೆಯ ಮೇರೆಗೆ ಕೊಂಚಮಾತನಾಡಿ ಮನಕ್ಕೆ ತೋಚಿದ ರೀತಿಯಲ್ಲಿ ಒದ್ದಾಂಜಲಿಯುತವಾಗಿ ಸೇವೆ ಸಲ್ಲಿಸಿದುದನ್ನು ಶ್ರೀ ಆಂಜನೇಯ ಸ್ವಾಮಿಯು " ಸ ಏಷ ದೇಶಃ ಕಾಲಶ್ಚ" (ಅನುಕೂಲಕರವಾದ ಹಾಗೂ ದೇಶಾನುಸಾರ) ಎಂದು ವಿಭೀಷಣನನ್ನು ಸ್ವೀಕರಿಸಲು ಉಚಿತವಾದ ಹಲವು ವಿಜ್ಞಾಪನೆಗಳನ್ನು ರಾಮಚಂದ್ರರ ಸನ್ನಿಧಿಯ ಬಳಿ ನಿಂತು ಮಾಡಲನುವಾದನು.

"ವಾಲಿಸೂನುರ್ಮಹಾತೇಜಃ- ವಿಭೀಷಣ ಮುಪಸ್ಥಿತಂ

ದರ್ಶಯಂತಂ ತದಾಕಾಶೇ ನಿರ್ದಿಶ್ಯೋದ್ಧೃತಪಾಣಿನಾ "

ಅಂದಂತೆ ಅಂಗದನು ಆಕಾಶದಿಂದ ಒಂದು ನಿಂತಿಂದ್ದ ವಿಭೀಷಣನ ತೋರ್ಬೆರಳೆ ನಿರ್ದೇಶನಗೈಯುತ್ತಿರುವಂತೆ ವಸಿಷ್ಠ ರಾಮಾಯಣದಲ್ಲಿ ಉಲ್ಲೇಖಗೊಂಡಿರುವಂತೆ ದರ್ಶನವನ್ನು ನೀಡಲು,ಕಣ್ತುಂಬಿಕೊಂಡು,ಈ ವಿಶೇಷ ಸನ್ನಿವೇಶವು ತಮಗೆಲ್ಲರಿಗೂ ನಿತ್ಯೋಪಾಸನೆ ಕ್ರಮಗಳಲ್ಲಿರಲೆಂದು ಅರ್ಚನಾ ಮೂರ್ತಿಯನ್ನು ನಿರ್ಮಿಸಿಕೊಂಡು ಆದಿಕಾಲದಿಂದಲ್ಲೂ ಆರಾಧಿಸಲ್ಪಟ್ಟಿರುವ ಶ್ರೀರಾಮಚಂದ್ರ ಶ್ರೀಲಕ್ಷ್ಮಣ ಸ್ವಾಮಿಯನ್ನು ಕಲವಿಕಪುರದಲ್ಲಿರುವ ಆದಿತ್ಯ ನಗರ ಸ್ಥಿತಿ ಮತಾಂತರಿಗಳ ಉಪದ್ರವ ಕಾರಣದಿಂದಾಗಿ ಒಬ್ಬ ಭಕ್ತನ ಮುಖೇನ ತಮ್ಮನ್ನು ತಿರುಪತಿ ಸಂಸ್ಥಾನಕ್ಕೆ ಕೊಂಡೊಯ್ಯುವುದಾಗಿ ತಿಳಿಸಿದರು. ಆ ಭಕ್ತನು ಅವರ ಮಾತಿನಂತೆಯೇ ಭಕ್ತಿಯಿಂದ ಕೊಂಡೊಯ್ದು ತಿರುಪತಿಯಲ್ಲಿರುವ ಶ್ರೀಭಗವದ್ರಾಮಾನುಜರ ಸನ್ನಿಧಿಗೆ ಸೇರಿಸಿದ್ದಾನೆ. ಆ ಶ್ರೀರಾಮಾನುಜಾಚಾರ್ಯರ ಶ್ರೀಶೈಲ ಪೂರ್ಣರ ಸನ್ನಿಧಿಯಲ್ಲಿ ಪ್ರವಚನ ಮಾಡುತ್ತಿದ್ದ ಶ್ರೀರಾಮಾಯಣದಲ್ಲಿನ ವಿಭೀಷಣನಿಗೆ ಅಭಯವನ್ನೀಯುವ ಸಂದರ್ಭವದಾಗಿತ್ತು. ತಿರುಮಲನಂಬಿಯು (ಶ್ರೀಶೈಲಪೂರ್ಣರು) ಶ್ರೀ ಭಗವದ್ರಾಮಾನುಜರನ್ನು ಇವರು (ರಾಮಲಕ್ಷ್ಮಣಾದಿಗಳು) ಅನೂಹ್ಯವಾದ ವಿಜಯವನ್ನು ಗೈದಿರಲೆಂದು ಉಲ್ಲೇಖನಗೊಂಡ ನಿಟ್ಟಿನಲ್ಲಿ ಅವರು ಬರದೇ ತೀರದೆಂದೂ ಒಂದು ಸುದ್ಧಿಯನ್ನು ಕೇಳಿ ಹರ್ಷಗೊಂಡು ಅಂದು ವಿಭೀಷಣನಿಗೆ ಅಭಯ ಪ್ರದಾನ ಮಾಡಿದ ಇಂದು ಅದೇ ಸಂದರ್ಭದಲ್ಲಿ ನಮ್ಮನ್ನು ಅನುಗ್ರಹಿಸಲು ಬಂದಿರುವುದಾಗಿ ನಿರ್ಣಯಿಸಿದ್ದಾರೆ. ರಾವಣನರ ಮನೆಯಿಂದ ಜಾನಕಿದೇವಿಯು ಬಂದು ಶ್ರೀರಾಮನನ್ನು ಸೇರುವಂತೆ ಇವರಿಗೆ ವಿವಾಹ ಮಹೋತ್ಸವವನ್ನು ಜರುಗಿಸಬೇಕೆಂದು ನಿರ್ಧರಿಸಿ ಸೀತಾದೇವಿ ವಿಗ್ರಹವೊಂದನ್ನೇ ನಿರ್ಮಿಸುವುದಾಗಿ ಸಂಕಲ್ಪಿಸಿ ಶ್ರೀರಾಮಚಂದ್ರನಿಗೆ ವಿವಾಹವನ್ನು ಜರುಗಿಸಿ ಪ್ರಾಣಪ್ರತಿಷ್ಠಾಪನೆ ಮಾಡಿ ಮಂಗಳ ಶಾಸನ ಉಚ್ಚರಿಸಿ ಕ್ಷೀರಸಾಗರದಿಂದ ಕಾಲನೇಮಿಯನ್ನು ಸಂಹರಿಸಿ ತಂದ ಎಂದು ಆರಂಭಗೊಂಡು ಸಪ್ತಸಾಗರಗಳನ್ನು ಭೇದಿಸಬಲ್ಲ ಬಾಣಗಳನ್ನು ಪ್ರಯೋಗಿಸಿ ವೇಂಕಟಾದ್ರಿಯನ್ನು ಸೇರಿದ ಭಗವಂತನ ದಿವ್ಯ ಪಾದಗಳನ್ನು ಹೊಂದಿ ಸದಾಕಾಲ ಜೀವಿಪೆನು ಎಂಬ ಪದ್ಯ ಭಾಗದಲ್ಲಿ ನಮ್ಮಾಳ್ವಾರರನ್ನು ಅನುಗ್ರಹಿಸಿದ ಶ್ರೀಸೂಕ್ತ ಸತ್ಯವಾದುದೆಂಬಂತೆ ತಿರುಮಲೆಯಲ್ಲಿ ಶ್ರೀವೇಂಕಟಾಚಲ ಪತಿಯ ಸನ್ನಿಧಾನದಲ್ಲಿ ಪ್ರತಿಷ್ಠಾಪಿಸಿ ನಿತ್ಯಾರಾಧನೆಗೈಯುವ ಪರಿಪಾಠವನ್ನು ವಿಧಿಸಿದ್ದಾರೆ.

(-ಮುಂದುವರೆಯುತ್ತದೆ.)

# ವಿದ್ಯಾ ಸರಸ್ವತಿಯ ವಸಂತ ಪಂಚಮಿ



-ಮೀರಾ. ಎಸ್. ಜೋಷಿ

ಹಿಂದೂ ಪಂಚಾಂಗದ ಪ್ರಕಾರ ಮಾಘ ಶುದ್ಧ ಪಂಚಮಿ ವಸಂತಪಂಚಮಿಯನ್ನು ಆಚರಿಸಲಾಗುತ್ತದೆ. ಈ ದಿನವನ್ನು ಶ್ರೀ ಪಂಚಮಿಯೆಂದೂ ಕರೆಯುತ್ತಾರೆ. ಶ್ರೀ ಪಂಚಮಿಯು ವಿದ್ಯೆಯ ದೇವತೆಯಾದ ಸರಸ್ವತಿ ದೇವಿಯು ಅವತರಿಸಿದ ದಿನ ಎಂಬ ನಂಬಿಕೆ ಇದೆ. ಅಂದು ಸರಸ್ವತಿಯನ್ನು ನೆನೆದು ಆಚರಿಸುವ ಹಬ್ಬವೇ ವಿದ್ಯಾ ಸರಸ್ವತಿಯನ್ನು ಆರಾಧಿಸಲಾಗುತ್ತದೆ.

## ವಸಂತ ಪಂಚಮಿಯ ಹಿನ್ನೆಲೆ ಮಹತ್ವ

ವಸಂತಪಂಚಮಿಯ ಆಚರಣೆಯು ದ್ವಾಪರಯುಗದಲ್ಲೂ ಆಚರಣೆಯಿದ್ದುದು ತಿಳಿಯುತ್ತದೆ. ಭಾಗವತದ ಪ್ರಕಾರ ಗೋವರ್ಧನಗಿರಿಯಲ್ಲಿ ಮಾಘಶುದ್ಧ ಪಂಚಮಿಯಂದು ಅದ್ದೂರಿಯಾಗಿ ವಸಂತ ಪಂಚಮಿಯ ನಡೆದಿದಿತ್ತು ಎಂಬುದಕ್ಕೆ ಉಲ್ಲೇಖಗಳಿವೆ. ವಸ್ತು ಅರ್ಪಿಸಿ ಪೂಜೆಯ ಸಮಯದಲ್ಲಿ "ಶ್ರೀ ಹ್ರೀಂ ಸರಸ್ವತ್ಯೈಸ್ವಾಹಾ" ಎನ್ನುವ ಅಷ್ಟಾಕ್ಷರ ಮಂತ್ರದೊಂದಿಗೆ ಶ್ರೀ ಸರಸ್ವತಿಗೆ ಅರ್ಪಿಸಿ ಅಂತಿಮವಾಗಿ ಸರಸ್ವತಿಗೆ ಆರತಿ ಮಾಡಿ ಅವಳನ್ನು ಸ್ತುತಿಸಿ ಮಂತ್ರಪಠಣೆಯ ಹೊರತಾಗಿ ಸಂಗೀತಸೇವೆ ಮಾಡುವ ಮೂಲಕ ಭಗವತಿಗೆ ಗಂಧ,ಪುಷ್ಪ,ಮೃಷ್ಟಾನ್ನ ಅರ್ಪಿಸಿ ಪುಸ್ತಕ, ಪೆನ್ನು ಸರಸ್ವತಿಯ ವಾಸಸ್ಥಾನವೆಂದು ಪರಿಗಣಿಸ ಲಾಗುತ್ತದೆ.ಮಾಘ ಶುದ್ಧ ಪಂಚಮಿಯನ್ನು ಅನಧ್ಯಾಯವೆಂದೂ ಕರೆಯುತ್ತಾರೆ. ಸರಸ್ವತಿಯನ್ನು ಪೂಜಿಸುವಾಗ ಹೆಚ್ಚಿನ ವಸ್ತುಗಳು ಬಿಳಿ ಬಣ್ಣದವುಗಳಾಗಿರಬೇಕು.



ಹಾಲು,ಮೊಸರು, ಬೆಣ್ಣೆ, ಅಕ್ಕಿ, ಬಿಳಿ ಎಳ್ಳಿನ ಉಂಡೆ, ಕಬ್ಬು, ಕಬ್ಬಿನರಸ, ಮಾಗಿದ ಬೆಲ್ಲ, ಜೇನುತುಪ್ಪ, ಬಿಳಿ ಶ್ರೀಗಂಧದ ಮರ, ಬಿಳಿಹೂಗಳು, ಬಿಳಿ ಉಡುಗೆ, ಖೋವಾ, ಶುಂಠಿ, ಮೂಲಂಗಿ, ಸಕ್ಕರೆ, ಅಕ್ಷತೆ, ಮೋದಕ, ಧೃತ, ಮಾಗಿದಬಾಳೇಹಣ್ಣು, ದ್ವಿದಳ ಧಾನ್ಯ,ತೆಂಗಿನಕಾಯಿ, ತೆಂಗಿನನೀರು, ಶ್ರೀಫಲ, ಬದರೀಫಲ ಇತ್ಯಾದಿ ವಸ್ತು ಗಳನ್ನು ಪೂಜೆಯಲ್ಲಿ ಬಳಸುತ್ತಾರೆ.

## ವಸಂತ ಪಂಚಮಿಯ ಪ್ರಾಮುಖ್ಯತೆ

ಧರ್ಮಗ್ರಂಥಗಳ ಪ್ರಕಾರ ಶ್ರೀಮನ್ ನಾರಾಯಣನು ವಾಲ್ಮೀಕಿಗೆ ಸರಸ್ವತಿಯ ಮಂತ್ರ ತಿಳಿಸಿದ್ದಾನೆ.ಮಹರ್ಷಿ ವಾಲ್ಮೀಕಿ, ವ್ಯಾಸ, ವಶಿಷ್ಟ, ವಿಶ್ವಾಮಿತ್ರ ಮುಂತಾದ ಋಷಿಮುನಿಗಳು ಅವರ ಆಧ್ಯಾತ್ಮಿಕ ಅಭ್ಯಾಸದಿಂದ ಸರಸ್ವತಿ ದೇವಿಯನ್ನು ಆಹ್ಲಾದಗೊಳಿಸಿ ವಿಶ್ವ ವಿಜಯವೆಂಬ ಸರಸ್ವತಿಯ ರಕ್ಷಾಕವಚದ ರಕ್ಷಣೆಯ ವರವನ್ನು ಪಡೆದುಕೊಂಡರು. ಭಗವತಿ ಸರಸ್ವತಿಯ ಈ ಅದ್ಭುತ ವಿಶ್ವವಿಜಯ ರಕ್ಷಾಕವಚವನ್ನು ಧರಿಸಿ ಮುನಿಗಳು ಸಾಧನೆ ಮಾಡಿದರು. ಸಂಪತ್ತಿನ ಮೂಲಕವೇ ವಿದ್ಯೆ ಎಂದು ಹೇಳಲಾಗುತ್ತದೆ.

**ತಾಯಿ ಸರಸ್ವವತಿಯ ಆರಾಧನೆ -** ವೇದ,ಪುರಾಣ, ರಾಮಾಯಣ, ಗೀತೆ, ಪಠ್ಯಗಳನ್ನು ಗೌರವಿಸಬೇಕು.ದೇವಿಯ ದೈವಿಕ ವಿಗ್ರಹ ಪವಿತ್ರ ಸ್ಥಳದಲ್ಲಿಟ್ಟು ಪೂಜಿಸಬೇಕು.ಬೆಳಗ್ಗೆ ಎದ್ದ ತಕ್ಷಣ ವಿದ್ಯಾರ್ಥಿಗಳು ವಿಶೇಷವಾಗಿ ಸರಸ್ವತಿಯನ್ನು ಧ್ಯಾನಿಸ ಬೇಕು.





**ಧಾರಾವಾಹಿ**

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

## ಹಿಂದಿನ ಸಂಚಿಕೆಯಿಂದ

ಮೊದಲಾಳ್ವಾರ್‌ಗಳು, ಮೊತ್ತಮೊದಲಿಗೆ ತಮ್ಮ ಪ್ರಬಂಧಗಳಲ್ಲಿ ವೇಂಗಡದ ವರ್ಣನೆಯನ್ನು ಹೆಚ್ಚು ಸಂಖ್ಯೆಯ ಪಾಶುರಗಳಲ್ಲಿ ವಿವರಿಸುತ್ತಾರೆ. ಈ ಮಲೆಯ ಮಹಿಮೆಯಲ್ಲಿ ಪ್ರಾಕೃತಿಕ ಚಿತ್ರಗಳೇ ಹೆಚ್ಚಾಗಿದೆ. ಬೆಟ್ಟದ ಮೇಲಿನ ದೇವರಿಗೆ ಈ ಪಾಶುರಗಳು ಹೆಚ್ಚಾಗಿ ಬಳಸಲ್ಪಟ್ಟಿಲ್ಲವೆನ್ನುವುದನ್ನು ಗಮನಿಸಬೇಕಾಗಿದೆ. ಈ ಪರ್ವತದ ಸೊಬಗಿಗೆ ಮನಸೋತು ಪರಮಾತ್ಮನು ಇದರ ಮೇಲೆ ನೆಲಸಿರುವನೆಂಬ ಅರ್ಥ ಇಲ್ಲಿ ವ್ಯಕ್ತಗೊಳ್ಳುವುದೇ ವಿನಹ ದೇವರ ನೆಲೆಯಿಂದ ಈ ಗಿರಿಗೆ ಪ್ರಾಶಸ್ತ್ಯ ಲಭಿಸಿದೆ ಎನ್ನುವ ಭಾವನೆ ಲಭ್ಯವಾಗುವುದಿಲ್ಲ. ಇದೊಂದು ವಿಚಿತ್ರವಾದ ವಿಚಾರವೇ! ಈ ಕುತೂಹಲಕಾರಿ ಅಂಶವನ್ನು ಮುಂದಿಟ್ಟುಕೊಂಡು ನಾವು ಈ ಅಧ್ಯಯನವನ್ನು ನಡೆಸಿದಾಗ ಹಲವು ರೀತಿಯ ವಿಚಿತ್ರ ವಿವರಗಳು ನಮಗೆ ದೊರೆಯುತ್ತವೆ. ಈ ವಿಚಿತ್ರಗಳು ಅದ್ಭುತವೂ, ರಮ್ಯವೂ ಆಗಿವೆ. ತಿರುವೇಂಗಡವು ಏಕೆ ಪರಮ ಪೂಜನೀಯವಾದ ಬೆಟ್ಟ, ಮಹಿಮಾನ್ವಿತವೆನಿಸಿದೆ ಎನ್ನುವುದು ಪುರಾಣದಲ್ಲಿ ನಮಗೆ ಗೋಚರಗೊಳ್ಳುವಂತೆ ಇಲ್ಲಿ ತಿಳಿಯುವುದಿಲ್ಲ.

"ಶ್ರೀಶೇಷಶೈಲ, ಗರುಡಾಚಲ, ವೆಂಕಟಾದ್ರಿ, ನಾರಾಯಣಾದ್ರಿ, ವೃಷಭಾದ್ರಿ, ಅಂಜನಾದ್ರಿ, ವೃಷಾದ್ರಿ ಮುಖ್ಯಾನ್"

ಎನ್ನುವ ಹೆಸರುಗಳನ್ನು ಹೊಂದಿರುವ, 'ಸಪ್ತಗಿರಿ' ಎಂದು ಹೆಸರಾದ ಏಳು ಪರ್ವತಗಳ ಗುಚ್ಛಕ್ಕೆ ಈ ಪ್ರತಿ ಹೆಸರಿನ ಹಿಂದೆಯೂ ಒಂದೊಂದು ಭವ್ಯ ಉಪಾಖ್ಯಾನವೇ ಪುರಾಣಗಳಲ್ಲಿ ವರ್ಣಿತಗೊಂಡಿದೆ. ಇದಕ್ಕೆ ವೃಷಶೈಲವೆಂದು ಕೃತಯುಗದಲ್ಲೂ, ಅಂಜನಾದ್ರಿಯೆಂದು ತ್ರೇತ್ರಾಯುಗದಲ್ಲಿಯೂ, ಶೇಷಾಚಲ ಎಂಬುದಾಗಿ ದ್ವಾಪರದಲ್ಲೂ, ವೇಂಕಟಾಚಲವೆಂದು ಕಲಿಯುಗದಲ್ಲೂ ಹೆಸರಿರುವುದಾಗಿ ಭವಿಷ್ಯೋತ್ತರ ಪುರಾಣಾದಿಗಳಲ್ಲಿ ವಿವರಣೆಗೊಂಡಿದೆ. ಈ ಮಲೆಯನ್ನು ದರ್ಶಿಸಿದಾಗ ಆದಿಶೇಷವು ಮೈಚಾಚಿ ಉದ್ದಕ್ಕೂ ಮಲಗಿದಂತೆ ಬಂಡೆಗಳ ವಿನ್ಯಾಸವಿರುವುದನ್ನು ಗಮನಿಸಬಹುದು.

ಆದರೆ ಆಳ್ವಾರುಗಳು ಮಾತ್ರ ಈ ನಾಮ ಮಹಿಮೆಗಳಿಂದ ಆಕರ್ಷಿತರಾಗಿಲ್ಲ. ಅವರು ಒಮ್ಮೆಯೂ ಎಲ್ಲೂ ಸಹ ಈ ಹೆಸರುಗಳನ್ನು ಬಳಸದೇ ಇರುವುದು. ಆಶ್ಚರ್ಯವೇ ಸರಿ. ಈ ಮಲೆ ಪ್ರದೇಶವನ್ನು ಕೇವಲ ವೇಂಗಡ ಅಥವಾ ತಿರುವೇಂಗಡವೆಂದೇ ಎಲ್ಲ ಆಳ್ವಾರುಗಳೂ ಬಳಸಿರುವುದು ಮತ್ತು ವಿಚಿತ್ರವಾದ ವಿಚಾರವೇ ಎನ್ನಬೇಕು. ಆಳ್ವಾರುಗಳಿಗೆ ಈ ಪುರಾಣ ಪರಿಚಯವಿರಲಿಲ್ಲವೆ? ಆಳ್ವಾರುಗಳ ಕಾಲಕ್ಕಿಂತ ಈ ಪುರಾಣಗಳು ಪ್ರಾಚೀನವೆ? ಅಥವಾ ಆಳ್ವಾರುಗಳಿಗೆ ಪುರಾಣ ವಾಕ್ಯಗಳ ಮೇಲೆ ಆಸಕ್ತಿ ಇರಲಿಲ್ಲವೇ? ಸಂಸ್ಕೃತ ಭಾಷೆಯ ಮೇಲೆಯೇ ತಾತ್ಸಾರವೇ, ದ್ವೇಷವೇ? ಎನ್ನುವ ವಿಚಾರಗಳು ಅರ್ಥವಾಗುವುದಿಲ್ಲ. ಈ ಪುರಾಣಗಳಲ್ಲಿ ಉಕ್ತವಾಗಿರುವ ಹೆಸರುಗಳೇ ಕಾಲ್ಪನಿಕವೇ, ಕಟ್ಟುಕತೆಯೇ ಅಥವಾ ಈ ಬೇರೆಯವರು ಅರ್ಥಾತ್ ಪುರಾಣಗಳನ್ನು ಬರೆದವರು ಉತ್ತರ ಭಾರತೀಯರು ಎನ್ನುವ ಅಭಿಪ್ರಾಯದಿಂದ ಈ ತಮಿಳುನಾಡಿನ ಜನ ಅವರು ಹೇಳಿರುವುದನ್ನು ಮಾನ್ಯ ಮಾಡಲಿಲ್ಲವೆ? ಅಂತೂ ಭಾರತೀಯರು ಯಾವ ನಾಮಧೇಯದಿಂದಲಾದರೂ ಕರೆದುಕೊಳ್ಳಲಿ,ಆದರೆ ಈ ಮಲೆಗೆ ಅನಾದಿಯಾಗಿ ಈ ದ್ರಾವಿಡ ಪ್ರಾಂತ್ಯದಲ್ಲಿ ಬಳಕೆಯಾಗಿರುವ ಒಂದೇ ಹೆಸರು ವೇಂಗಡ ಅಥವಾ ತಿರುವೇಂಗಡ, ಹಾಗಾದರೆ ಆಳ್ವಾರು ಪ್ರಬಂಧಗಳು ಪುರಾಣಯುಗಕ್ಕಿಂತ ಪ್ರಾಚೀನವೇ? ಎನ್ನುವ ವಿಚಾರವೂ ಉದ್ಭವಿಸದೇ ಇರುವುದಿಲ್ಲ. ಮತ್ತೆ ಈ ಪುರಾಣಗಳಲ್ಲಿ ಉಕ್ತವಾಗಿರುವ ವೆಂಕಟಾಚಲ ಮಾಹಾತ್ಮ್ಯೆಯ ಕತೆಯನ್ನಂತೂ ಯಾವ ಆಳ್ವಾರುಳಗಳೂ ಮಾನ್ಯ ಮಾಡಿಯೇ ಇಲ್ಲ. ಇದೊಂದು ಆಶ್ಚರ್ಯದ ಸಂಗತಿಯೇ ಸರಿ!ಈ ಮಹಾತ್ಮ್ಯಗಳ ಬಗ್ಗೆ, ಈ ಕತೆಯ ಬಗ್ಗೆ ಅಪ್ಪಿ ತಪ್ಪಿಯಾದರೂ ಪಾಶುರಗಳಲ್ಲಿ ಪ್ರಾಸ್ತಾಪವಿಲ್ಲ, ವಿಚಾರ ವಾಹಿನಿಯಿಲ್ಲ, ಈ ಮಾಹಾತ್ಮ್ಯವೇ ಹೆಣೆಯಲ್ಪಟ್ಟ ಕಟ್ಟು ಕತೆಯಂತಿದ್ದು, ಸ್ವರ್ಗ ಮತ್ತು ಭೂಲೋಕದ ಜನರ ಮಧ್ಯೆ ಸಂಬಂಧ ಕಲ್ಪಿಸುವಂತಹುದಾಗಿದೆಯಲ್ಲವೆ ಈಕಲಿಯುಗದಲ್ಲಿ! ಈ ದೇವರನ್ನು ಆಳ್ವಾರರುಗಳು ಒಮ್ಮೆಯಾದರೂ ಅವನ ಬಳಕೆಯ ಹೆಸರುಗಳಾದ ಶ್ರೀನಿವಾಸ, ವೇಂಕಟೇಶ, ಸಪ್ತಗಿರೀಶ, ಅಲಮೇಲುಮಂಗಾಸಮೇತ ಎಂಬುದಾಗಿ ತಮ್ಮ ಪಾಶುರಗಳಲ್ಲಿ ಸಂಬೋಧಿಸಿಯೇ ಇಲ್ಲ ! ಇದೂ ಆಶ್ಚರ್ಯವೇ ! ಎಲ್ಲೋ ! ಒಮ್ಮೆ "ಅಲರ್‌ಮೇಲ್ ಮಂಗೈ ಉರೈಮಾರ್ಬಾ" ಎನ್ನುವ ವಿಶೇಷಣದಿಂದ ಅವರು ಕರೆದಿದ್ದಾರೆ. (ಎಂದರೆ ಹೂವಿನ ಮೇಲಿನ ಸ್ತ್ರೀಯನ್ನು ಎದೆಯಲ್ಲಿ ಸೂಡಿರುವವನೇ ಎಂದರ್ಥ). ಎಂದಾಗ ಈ ಅಲರ್ ಮೇಲ್‌ಮಂಗೈ ಎಂದರೆ ಲಕ್ಷ್ಮಿಗೆ ಅನ್ವಯಗೊಳ್ಳುವ ಅರ್ಥವಾಗುವುದೇ ವಿನಃ ಶ್ರೀನಿವಾಸನ ಮತ್ತೊಬ್ಬ ಪತ್ನಿ ಎಂದು ವರ್ಣಿತವಾಗಿರುವ ಪದ್ಮಾವತಿಗೆ ಅನ್ವಯಿಸುವುದಿಲ್ಲ. ಪುರಾಣಗಳ ಪ್ರಕಾರ ಪದ್ಮಾವತಿಯೇ ಬೇರೆ ಲಕ್ಷ್ಮೀಯೇ ಬೇರೆ, ಅಂತೂ ಎಲ್ಲ ಆಳ್ವಾರರೂ, ವೇಂಗಡವನ್,ವೇಂಗಡತ್ತಾನ್, ವೇಂಗಡತ್ತ್ಯಾನ್, ವೇಂಗಡ ಮುಡಿಯಾನ್, ತಿರುವೇಂಗಡತ್ತಾಯನ್ ಎಂಬುದಾಗಿ ಈ ಪರ್ವತದ ನಾಮನಿರ್ದೇಶನದೊಂದಿಗೇ ಈ ದೇವರಿಗೆ ಸಂಬಂಧ ಕಲ್ಪಿಸುತ್ತಾರೆ ಎಂದಾಗ ಈ ದೇವರಿಗಿಂತ ಈ ಪರ್ವತದಲ್ಲೇ ಒಂದು ಹೆಚ್ಚಳಿಕೆಯನ್ನು ಆಳ್ವಾರುಗಳು ಕಂಡುಕೊಂಡಿರುವುದು ಸ್ಪಷ್ಟಪಡುತ್ತದೆ ಎಂದರೆ ಆಳ್ವಾರುಗಳ ಪಾಲಿಗೆ ಈ ಪ್ರಾಕೃತ ಪರ್ವತವು ಸುಂದರವಾದ, ಚೆಲುವಾದ, ಮಹಿಮಾನ್ವಿತವಾದ, ಪಾಪಹರವಾದ, ಆಕರ್ಷಣೆಯಿಂದ ಕೂಡಿದ ಒಂದು ವಸ್ತು ಮಹಿಮಾನ್ವಿತವಾದ,ಪಾಪಹರವಾದ, ಆಕರ್ಷಣೆಯಿಂದ ಕೂಡಿದ ಒಂದು ವಸ್ತುವಾಗಿದೆ. ದೇವನು ಈ ಪರ್ವತದ ಸೊಬಗಿಗೆ ಮನಸೋತು ಇಲ್ಲಿ ಬಂದು ನೆಲೆಸಿರುವವನೆನ್ನುವ ಭಾವಕ್ಕೆ ಇಂಬು ದೊರೆಯುತ್ತದೆ. ಈ ಪರ್ವತದ ಮೇಲೆ ನೆಲೆಸಿದ್ದರಿಂದ ಪರಮಾತ್ಮನಿಗೆ ಶ್ರೇಷ್ಠತ್ವವುಂಟಾಯಿತೋ ಅಥವಾ ಪರಮಾತ್ಮನ ಸಾನ್ನಿಧ್ಯದಿಂದ ಈ ಪರ್ವತಕ್ಕೆ ಪಾವಿತ್ರ್ಯ ಒದಗಿತೋ ಎನ್ನುವ ಪ್ರಶ್ನೆ ಈ ಆಳ್ವಾರ್ ಪಾಶುರಗಳಿಂದ ಪರಿಹಾರ ಕಂಡುಕೊಳ್ಳುವುದಿಲ್ಲ. ಅಂತೂ ಈ ಬೆಟ್ಟಕ್ಕೇ ಆಶ್ರಿತವತ್ಸಲತೆ, ಭಕ್ತರ ಇಷ್ಟಗಳನ್ನು ಪೂರೈಸುವ ಗುಣ, ಪಾಪಪರಿಹಾರ ಮಾಡುವ ವೈಶಿಷ್ಟ್ಯ ಮುಂತಾದ ಮಹಿಮೆಗಳು ಮೈಗೂಡಿಕೊಂಡಿರುವುದನ್ನು ವಾಚಕರು ಆಳ್ವಾರ್ ಪಾಶುರಗಳಿಂದ ಕಂಡು ಕೊಳ್ಳಬಹುದು.



## ಶ್ರೀ ಗುರುಭ್ಯೋ ನಮಃ

**ಕಾರಣವಿಲ್ಲದೆ ಗುರು ಏನನ್ನು ನೀಡುವುದಿಲ್ಲ**

**ಕಾರಣವಿಲ್ಲದೆ ಗುರು ಏನನ್ನು ನುಡಿಯುವುದಿಲ್ಲ**

**ಕಾರಣವಿಲ್ಲದೆ ಗುರು ಏನನ್ನು ಮಾಡಿಸುವುದಿಲ್ಲ**

**ಕಾರಣವಿಲ್ಲದೆ ಗುರು ಯಾವ ಜವಾಬ್ದಾರಿ ನೀಡುವುದಿಲ್ಲ.**

**ಕಾರಣವಿಲ್ಲದೆ ಗುರು ಏನನ್ನು ಕೇಳುವುದಿಲ್ಲ.**

ಧಾರಾವಾಹಿ

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಶ್ರೀಮತಿ ಬಿ. ಪದ್ಮಜ



ಭೀಮನ ಹೆಸರು ಹೇಳಬೇಕು ಅದು ಬಿಟ್ಟು ಸಾತ್ಯಕಿ ಎನ್ನುವುದರ ಮೂಲಕ ಯಾವ ಸೂಚನೆ ಕೊಡುತ್ತಿದ್ದಾನೆ? ಅಂದರೆ ಸಾತ್ಯಕಿಗೆ ದುರ್ಯೋಧನನಿಗೆ ಒಂದು ವ್ಯತ್ಯಾಸ ಇದೆ. ಈ ಯುದ್ದದ ಸಿದ್ಧತೆಗೆ ಮೊದಲು ದುರ್ಯೋಧನ ಅರ್ಜುನ ಇಬ್ಬರೂ ಶ್ರೀಕೃಷ್ಣಪರಮಾತ್ಮನ ಬಳಿಗೆ ಬಂದರು ಶ್ರೀಕೃಷ್ಣನನ್ನು ತಮಗೆ ಸಹಾಯ ಮಾಡಬೇಕೆಂದು ಕೇಳಿಕೊಂಡರು. ಅರ್ಜುನನು ಪರಮಾತ್ಮನನ್ನು ತನ್ನ ಪಕ್ಷದಲ್ಲಿರಬೇಕೆಂದು ಕೇಳಿಕೊಂಡ ದುರ್ಯೋಧನ ಶ್ರೀಕೃಷ್ಣ ಪರಮಾತ್ಮನ ಯಾದವಸೈನ್ಯಾನ್ನಿ ಬೇಡಿಕೊಂಡ. ಯಾದವ ಸೈನ್ಯಕ್ಕೆ ಶ್ರೀಕೃಷ್ಣಪರಮಾತ್ಮನು ದುರ್ಯೋಧನನ ಪಕ್ಷದಲ್ಲಿ ನಿಂತು ಯುದ್ಧ ಮಾಡಿರಿ ಎಂದು ಆದೇಶಿಸಿದ. ಆದರೆ ಅವರಲ್ಲಿ ಸಾತ್ಯಕಿ ಶ್ರೀಕೃಷ್ಣಪರಮಾತ್ಮನಿಗೆ ಈ ರೀತಿ ಹೇಳಿದ. ನಾನು ಅಧರ್ಮದ ಪಕ್ಷದಲ್ಲಿರುವುದಿಲ್ಲ. ನಾನು ಪಾಂಡವರ ಪಕ್ಷದಲ್ಲಿರುತ್ತೇನೆ. ನಿನ್ನೊಂದಿಗೇ ಇರುತ್ತೇನೆ ಎಂದು ಶಪಥ ಮಾಡಿ ಯುದ್ಧಕ್ಕೆ ಬಂದ. ಶ್ರೀಕೃಷ್ಣಪರಮಾತ್ಮನ ಸೈನ್ಯ ಕೌರವರ ಪಕ್ಷದಲ್ಲಿತ್ತು. ಆದರೆ ಸಾತ್ಯಕಿ ಮಾತ್ರ ಪಾಂಡವರ ಪಕ್ಷಕ್ಕೆ ಹೋದ. ಧರ್ಮದೀಕ್ಷೇ ಇವನೊಬ್ಬನಿಗೆ ಮಾತ್ರವೇ? ರಾಜನ ಆಜ್ಞೆಯನ್ನು ಧಿಕ್ಕರಿಸಿ ಪಾಂಡವರ ಕಡೆಗೆ ಬಂದಿದ್ದಾನೆ ಇವನೊಬ್ಬನಿಂದ ಏನಾಗಬಹುದು? ಮೊದಲು ಸಾತ್ಯಕಿ ನಂತರ ಎರಡನೆಯ ಹೆಸರು ವಿರಾಟಶ್ಚ ಎಂದರು. ವಿರಾಟರಾಜ ನಮಗೆ ಚೆನ್ನಾಗಿ ತಿಳಿದಿರುವ ಹೆಸರು. ಆ ವಿರಾಟರಾಜ ಸಾಧಾರಣ ವೀರ. ದುರ್ಯೋಧನನಿಗೆ ಮಾಡಬಾರದ ಅಪಕಾರ ಮಾಡಿದ್ದಾನೆ. ಅಜ್ಞಾತವಾಸದಲ್ಲಿ ಪಾಂಡವರಿಗೆ ಆಶ್ರಯವನ್ನು ನೀಡಿದ್ದಾನೆ. ಬೇರೆಯಕಡೆ ಇವರು ಅಜ್ಞಾತವಾಸ ಮಾಡಿದ್ದರೆ ನಾನು ಹೇಗೋ ಕಂಡು ಹಿಡಿಯುತ್ತಿದ್ದೆ ಆ ಅವಕಾಶ ಸಿಗದಂತೆ ಮಾಡಿದ ದುರ್ಮಾರ್ಗಿ ಅವನು, ಪಾಂಡವರು ಅವರ ಸಾಮಾರ್ಥ್ಯಕ್ಕೆ ಸರಿಯಾಗಿ ಅಜ್ಞಾತವಾಸವನ್ನು ಪೂರ್ತಿ ಮಾಡಲಿಲ್ಲ. ವಿರಾಟ ಎನ್ನುವ ಒಂದು ಸೊಳ್ಳೆ ಪಾಂಡವರೆಂಬ ಆನೆಗೆ ಆಶ್ರಯವನ್ನು ನೀಡಿದೆ. ಆದರಿಂದ ಅವರು ಆಜ್ಞಾತವಾಸವನ್ನು ಮಾಡಿದರು. ನಾನು ಆ ಅಜ್ಞಾತವಾಸಾನ್ನಿ ಭಂಗ ಮಾಡಿದ್ದರೆ ಪುನಃ ಹದಿಮೂರು ವರ್ಷ ಕಳೆಯುತ್ತಿತ್ತು. ಯುದ್ಧ ಮಾಡುವ ಸಂದರ್ಭ ಬರುತ್ತಿರಲಿಲ್ಲ. ಆದ್ದರಿಂದ ಯುದ್ಧಕ್ಕೆ ಕಾರಣನಾದವನೇ ಈ ವಿರಾಟರಾಜ ! ಮೂರನೆಯ ಹೆಸರು ದ್ರುಪದ. ದ್ರುಪದನಿಗೂ ದ್ರೋಣಾಚಾರ್ಯರಿಗೆ ವೈರವಿದೆ. ಆದರೆ ದ್ರೋಣಾಚಾರ್ಯನಿಗೆ, ದ್ರುಪದನಿಗೆ ಶತ್ರುಭಾವನೆ ಇಲ್ಲ. ಆದರೆ ದ್ರುಪದ ಹೇಗಾದರೂ ನನ್ನ ಪುತ್ರನಾದ ದ್ರುಷ್ಟದ್ಯುಮ್ನ ದ್ರೋಣಚಾರ್ಯನ ಶಿರಸ್ಸನ್ನು ಖಂಡಿಸಬೇಕೆಂದು ಪ್ರತಿಜ್ಞೆ ಮಾಡಿದ್ದಾನೆ. ಎಂಬ ಉದ್ದೇಶದಿಂದ ಹೇಳಿದ. ಆ ವಿಷಯ ಅಲ್ಲಿರುವವರಿಗೆಲ್ಲಾ ಗೊತ್ತು. ಅವರೆಲ್ಲಾ ಮಹಾವೀರರು ಮಹಾರಾಜರು ಸಹಜವಾಗಿಯೇ ಪ್ರತಿಜ್ಞೆಗಳನ್ನು ಮಾಡಿರುತ್ತಾರೆ. ಮಾತನಾಡುತ್ತಿರುತ್ತಾರೆ. ಹೊರಗೆ, ಒಳಗೆ ಏನು ಮಾತನಾಡಿಕೊಳ್ಳುತ್ತಿದ್ದಾನೆಂದು ದ್ರೋಣಾಚಾರ್ಯರಿಗೆ ಗೊತ್ತು ದ್ರುಪದಃ ಎನ್ನುತ್ತಿದ್ದಾರೆ. ಇನ್ನೊಂದು ಬಾರಿ ದ್ರುಪದ ಪುತ್ರಃ ಎಂದು ದ್ರುಪದನ ಮಗನನ್ನು ತೋರಿಸುತ್ತಿದ್ದಾರೆ. ಇದು ಪರವೀರರನ್ನು ಕಡಿಮೆ ಅಂದಾಜು ಮಾಡಿ ಮಾತನಾಡುವುದು. ಅದು ಅಲ್ಲದೇ ಇನ್ನೂ ವೀರರನ್ನು ಹೆಸರನ್ನು ದುರ್ಯೋಧನನು ಹೇಳುತ್ತಿದ್ದಾನೆ.

ದೃಷ್ಟಕೇತುಶ್ಚೇಕಿತಾನಃಕಾಶಿರಾಜಶ್ಚ ವೀರ್ಯವಾನ್

ಪುರುಜಿತ ಕುಂತಿಭೋಜಶ್ಚ ಶೈಬ್ಯಶ್ಚ ನರಪುಂಗವಃ

ದೃಷ್ಟಕೇತುವು ಚೇತಕಿತಾನ'' ಅಂದು ಪುರುಜಿತ್. ಕುಂತಿಭೋಜಃ ಎಂದು ಪಾಂಡವರಿಗೆ ಸೋದರಮಾವನ ವರಸೆಯಲ್ಲಿರುವ ಇಬ್ಬರು ವೀರರು. ಶೈಬ್ಯ ಎಂಬ ಶಿಬಿದೇಶದ ರಾಜ. ಇವರ ಹೆಸರುಗಳಲ್ಲಿನ ಆಂತರ್ಯ ದೃಷ್ಟಕೇತು ಚೇದಿದೇಶ ರಾಜ. ಚೇದ್ಯಃ ಎಂದು ಅವನ ಕರೆಯುತ್ತಿದ್ದರು. ಈ ದೃಷ್ಟಕೇತು ಶಿಶುಪಾಲನ ಮಗ ಶಿಶುಪಾಲ ಅಂದರೆ? ಮಹಾಕೃಷಿದ್ವೇಷಿ, ಜೀವನ ಪರ್ಯಂತವೂ ಕೃಷ್ಣನ ಜೀವನದ ಕೊನೆಯವರೆಗೂ ಹಳಿದು ಕೊಳಿಗೆ ಕೃಷ್ಣುನ ಸುದರ್ಶನ ಚಕ್ರಕ್ಕೆ ಬಲಿಯಾದವನು. ಅವರನ ಮಗ ದೃಷ್ಟಕೇತು ತಂದೆಯಂತೆ ಪಾಂಡವರು , ಕೃಷ್ಣನ ದ್ವೇಷಿಯಾಗದೇ ಪಾಂಡವರ ಪಕ್ಷಕ್ಕೆ ಸೇರಿದ. ತನ್ನ ಸೋದರಿಯಾದ ಶೃಣು ಮತಳನ್ನು ನಕುಲನಿಗೆ ಕೊಟ್ಟು ಮದುವೆ ಮಾಡಿದ ಬಾಂಧವ್ಯಕ್ಕಾಗಿ ಧಾರ್ಮಿಕರೊಂದಿಗೆ ಸಹಜೀವನ ಮಾಡಬೇಕು. ನಮ್ಮ ತಂದೆ ತಪ್ಪು ಮಾಡಿದರೆ ನಾನು ತಪ್ಪು ಮಾಡಬೇಕಾಗಿಲ್ಲ. ಎಂಬ ತೀರ್ಮಾನಕ್ಕೆ ಬಂದವನ ಬಗೆಗೆ ದುರ್ಯೋಧನ ಪ್ರತ್ಯೇಕವಾಗಿ ಚರ್ಚಿಸಿದ. ಶಿಶುಪಾಲನಿಗೆ ಹುಟ್ಟಿದ ಈ ದೃಷ್ಟಕೇತು ನನ್ನ ಪಕ್ಷದಲ್ಲಿ ಸೇರದೇ ಆ ಪಾಂಡವರ ಪಕ್ಷದಲ್ಲಿ ಸೇರುತ್ತಾನೆಯೇ? ಇವನು ಮಾತ್ರ ಪಾಂಡವರ ಪಕ್ಷಕ್ಕೆ ಹೇಗೆ ಹೋಗುತ್ತಾನೆ?ಆ ನಕುಲನಿಗೆ ತನ್ನ ಸೋದರಿಯನ್ನು ಕೊಟ್ಟು ಮದುವೆಯಾಕೆ ಮಾಡಿದ? ಎಂದು ಹೇಳಿ ಚೇಕಿತಾನಃ'' ಎಂಬ ಒಬ್ಬ ಮಹಾವೀರ. ಈತ ಯುದ್ಧರಂಗದಲ್ಲಿ ವಿನೋದಿಸುವುದಕ್ಕಾಗಿ ಹುಟ್ಟಿದವನು. ಇವನಿಗೆ ಯುದ್ಧವೆಂದರೆ ಒಂದು ತಪಸ್ಸು ಮಾಡಿದಂತೆ. ಅರ್ಜುನನಿಗೆ ಸ್ನೇಹಿತ ಅರ್ಜುನನ ಪಕ್ಷಪಾತಿ. ಅಂತಹಾ ಚೇಕಿತಾನ ಕಾಶಿರಾಜ. ಆ ರೀತಿ ಉಚ್ಚಾರಣೆ ಮಾಡಿದರೆ ಮಹಾಪುಣ್ಯ ಬರುತ್ತದೆ. ಅಂತಹಾ ಕಾಶೀಕ್ಷೇತ್ರದಲ್ಲಿ ಇರುವಂತಹಾ ರಾಜ ಆತ. ಈ ಕಾಶಿರಾಜಶ್ಚ ವೀರ್ಯವಾನ್ ಪರಾಕ್ರಮ ವಂತರಾಗಿ ಹುಟ್ಟುತ್ತಾರೆ. ಕೆಲವರು ಉತ್ತಮವಾದ ವಂಶದಲ್ಲಿ ಹುಟ್ಟಿದರು ಎಂತಹಾ ಸತ್ಕಾರ್ಯಗಳನ್ನೂ ಮಾಡುವುದಿಲ್ಲ. ಇನ್ನೂ ಕೆಲವರು ಉತ್ತಮವಾದ ವಂಶದಲ್ಲಿ ಹುಟ್ಟುವುದು ಮಾತ್ರವಲ್ಲದೇ ಅಂತಹಾ ಉತ್ತಮವಾದ ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಅಂತಹಾ ವಂಶಗಳಲ್ಲಿ ಹುಟ್ಟುತ್ತಾರೆ. ಅಂತಹಾ ಕೆಲವೇ ಕೆಲವು ವಂಶಗಳು ಇರುತ್ತವೆ.

(-ಮುಂದುವರೆಯುತ್ತದೆ.)

ಧಾರಾವಾಹಿ

# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ



## ಬುಧ ಗ್ರಹದ ಪರಿಚಯ

1. ಬುಧಗ್ರಹದ ಸರಾಸರಿ $58 X 10^{6}$ ಕಿ.ಮೀ. ಸೂರ್ಯನಿಂದ ದೂರವಿದೆ.

2. ಬುಧಗ್ರಹವು ಸೂರ್ಯನ ಹತ್ತಿರವಿರುವುದರಿಂದ ಬರಿಗಣ್ಣಿಗೆ ಕಾಣಿಸುವುದಿಲ್ಲ.

3. ಬುಧಗ್ರಹದ ವ್ಯಾಸ 4868 ಕಿ.ಮಿ.

4. ಬುಧಗ್ರಹದಲ್ಲಿ ಉಪಗ್ರಹಗಳಿಲ್ಲ.

5. ಬುಧಗ್ರಹವನ್ನು ಹಿಂದೂಗಳು ಕೇಶವ, ನಾರಾಯಣ ಮಾಧವನೆಂದು ಪೂಜಿಸುತ್ತಾರೆ.

6.ಬುಧಗ್ರಹವು ನವಗ್ರಹಗಳ ಯುವರಾಜನೆಂದು ಪರಿಗಣಿಸ ಲಾಗಿದೆ.

7.ಬುಧಗ್ರಹವು ಮಗುವಿನಂತೆ ಮತ್ತು ಬೇರೆ ಗ್ರಹದ ಸಹಾಯದಿಂದ ಕಾರ್ಯವಹಿಸುತ್ತದೆ ಎಂದು ಪರಿಗಣಿಸಲಾಗಿದೆ.

8. ಬುಧಗ್ರಹವು ಕಾಲಪುರುಷನ ಮನಸ್ಸು, ನೆನಪು, ಬುದ್ದಿ ಶಕ್ತಿ, ಚುರುಕು ಬುದ್ಧಿ, ಜ್ಞಾನ, ಗ್ರಹಣಶಕ್ತಿ , ತಿಳಿವಳಿಕೆ , ಕಲ್ಪನೆಯ ಫಲವತ್ತತೆ, ವಾಣಿಜ್ಯ ವಿಷಯದಲ್ಲಿ ಬುದ್ಧಿವಂತಿಕೆ, ವಿದ್ಯಾಭ್ಯಾಸ, ಬರವಣಿಗೆ ಹಾಗೂ ಶಿಲ್ಪಕಲೆಯ ವಿಷಯಗಳಲ್ಲಿ ಆದಿಪತ್ಯ ವಹಿಸಿದೆಯಂದು ಪರಿಗಣಿಸಲಾಗಿದೆ.

9, ಬುಧಗ್ರಹವು ಕಾಲ ಪುರುಷನಿಗೆ ಹೆಚ್ಚು ಭಾಷೆಗಳಲ್ಲಿ ಪ್ರವೀಣನನ್ನಾಗಿ ತರ್ಕಶಾಸ್ತ್ರ, ಗಣಿತ ಮತ್ತು ಲೆಕ್ಕ ಮಾಡುವ ಉದ್ಯೋಗದಲ್ಲಿ ಇಚ್ಛೆ ಉಳ್ಳವನಾಗಿ ಮಾಡುತ್ತದೆ.


10. ಬುಧಗ್ರಹವು ಕಾಲಪುರುಷನನ್ನು ಬುದ್ಧಿವಂತನನ್ನಾಗಿ, ಹೆಚ್ಚು ಮಾತುಗಾರನನ್ನಾಗಿ, ವಿದ್ವಾಂಸನನ್ನಾಗಿ ಮಾಡುತ್ತದೆ.

11. ಬುಧಗ್ರಹವು ಒಂದು ವ್ಯತ್ಯಾಸವಾದ, ಪರಿವರ್ತನೀಯ ಸ್ತ್ರೀಜಾತಿಯ ನಿಷ್ಪಕ್ಷಪಾತಿ ದ್ವಂದವಾದಕ್ಕೆ ಸಂಬಂಧಿಸಿದ ಗ್ರಹ.

12. ಬುಧಗ್ರಹವು ಉತ್ತರ ದಿಕ್ಕಿನ ಅಧಿಪತಿ ಮತ್ತು ಶರದೃತುವಿನ ಕಾರುಬಾರ ಮಾಡುತ್ತದೆಯೆಂದು ಪರಿಗಣಿಸಲಾಗಿದೆ.

13. ಬುಧಗ್ರಹದ ಬಣ್ಣ ಹಸಿರು.

14. ವ್ಯಾಪಾರ, ಪುಸ್ತಕ ವ್ಯಾಪಾರ, ಜನಾರೋಗ್ಯ, ದೈವತ್ವದ ಮೇಲೆ, ಆಹಾರ, ಸಾಹಿತ್ಯ, ಕೊಡಿಟ್ಟ ಹಣ ಇವುಗಳ ಮೇಲೆ ಅಧಿಕಾರವಹಿಸುವುದೆಂದು ಪರಿಗಣಿಸಲಾಗಿದೆ.



- ಆರ್. ಶ್ರೀನಿಧಿ
99705 65978

15. ಬುಧಗ್ರಹದ ಪ್ರಭಾವದಿಂದ ಕಾಲ ಪುರುಷ ಹಸಿರು ಬಣ್ಣದ ಛಾಯೆಯುಳ್ಳವನಾಗಿ ಉತ್ತಮ ಮಾತುಗಾರನಾಗಿ, ಹಾಸ್ಯ ಅಭಿರುಚಿಯುಳ್ಳ ವನಾಗಿ, ಅಗಲವಾದ ಕೆಂಪು ಕಣ್ಣುವುಳ್ಳವನಾಗಿ, ಎತ್ತರವಾದ ಅಕಾರವುಳ್ಳವ ನಾಗಿ ಮಾಡುತ್ತದೆ.

16. ಬುಧಗ್ರಹವು ಮೂಗು, ಮೆದುಳು, ಕೈಗಳು, ನಾಲಿಗೆ, ಶ್ವಾಸಕೋಶ ಹಾಗೂ ನರಗಳ ಮೇಲೆ ಅಧಿಕಾರ ವಹಿಸುವುದೆಂದು ಪರಿಗಣಿ ಸಲಾಗಿದೆ.

17.ಬುಧಗ್ರಹವು ಚರ್ಮದ ಒಡೆಯನೆಂದು ಪರಿಗಣಿಸಲಾಗಿದೆ.

18. ಬುಧಗ್ರಹವು ನೀಚತ್ವದಲ್ಲಿರುವಾಗ ಕಾಲಪುರುಷನನ್ನು ಚತುರನನ್ನಾಗಿ, ಕಪಟಿಯಾಗಿ, ಕೀಟಲೆ ಮಾಡವನನ್ನಾಗಿ, ಅನಾಮಧೇಯ ಪತ್ರ ಬರೆಯುವನನ್ನಾಗಿ, ಜಗಳವಾಡುವನನ್ನಾಗಿ, ಜೂಜುಗಾರನನ್ನಾಗಿ, ಸುಳ್ಳುಗಾರನನ್ನಾಗಿ ಮಾಡುತ್ತದೆ.

19. ಬುಧಗ್ರಹವು ಉಚ್ಚತ್ವದಲ್ಲಿರುವಾಗ ಕಾಲಪುರುಷನನ್ನು ಬುದ್ಧಿವಂತನಾಗಿ ಬಹು ಭಾಷೆ ಪಾಂಡಿತ್ಯವುಳ್ಳವನಾಗಿ , ವಿದ್ವಾಂಸನನ್ನಾಗಿ ಮತ್ತು ವ್ಯಾಪಾರದಲ್ಲಿ ವಿಜಯಿಯಾಗಿ ಮಾಡುತ್ತಾನೆ.

20. ಬುದ್ಧಿಭ್ರಮಣೆ, ಮೂಕನಾಗುವ, ಷಂಡನಾಗುವ, ಕುಂದುಕೊರತೆವುಳ್ಳನಾಲಿಗೆ, ಕಿವುಡುತನ, ತೊನ್ನು, ತಲೆನೋವು, ನಿದ್ರೆ ನಾಶ ಸನ್ನಿ ಹುಚ್ಚು ಹಿಡಿಯುವ ಕಾಯಿಲೆಗಳು ಬುಧ ಗ್ರಹದ ಪ್ರಭಾವದಿಂದಾಗುತ್ತದೆ.

21. ವಿಳ್ಳೆದೆಲೆ, ಎಣ್ಣೆಯುಳ್ಳ ಕಾಯಿಗಳು, ಬಾದ್ಯವಲೆ, ಎಲ್ಲಾ ಗಿಡಗಳನ್ನು ಬಾದಮಿ ಮರ, ಶ್ರೀಫಲ, ಶಿಕ್ಕೆಯೋಪಾದಿವಿಲೆಗಳ್ಳುಳ್ಳ ಗಿಡ, ಶಹಾಜೀರಿಗೆ ಸೊಪ್ಪಿನಗಿಡ, ಬೆಣ್ಣೆ, ಎಣ್ಣೆಗಳು ಹಸಿರು ಬಣ್ಣದಕಾಳುಗಳು. ಹಸಿರು ಬಣ್ಣದ ಬಟ್ಟೆಗಳನ್ನು ಪ್ರತಿನಿಧಿಸುತ್ತದೆ.

22. ನಾಯಿ, ಕೋತಿ, ನರಿ, ಗಿಳಿ ಹರಿದಾಡುವ ಜಂತು ಗಳನ್ನು ಪ್ರತಿನಿಧಿಸುತ್ತದೆ.

23. ವಿಶ್ವವಿದ್ಯಾನಿಲಯ, ಪಾಠಶಾಲೆ , ಶಾಲೆ, ವ್ಯಾಪಾರಸ್ಥಳ, ಆಟದ ಮೈದಾನ, ಮತ್ತು ಬೇಟೆಯಾಡುವ ಸ್ಥಳಗಳನ್ನು ಬುಧಗ್ರಹವು ಪ್ರತಿನಿಧಿಸುತ್ತದೆ.

24.ಕಂಚು, ಹಿತ್ತಾಳೆ, ಪಚ್ಚೆ, ಪಂಚಲೋಹ, ಸುಣ್ಣದ ಕಲ್ಲು ಗಳನ್ನು ಬುಧಗ್ರಹವು ಪ್ರತಿನಿಧಿಸುತ್ತದೆ.

ಕ್ವಿಜ್

## ರಸಪ್ರಶ್ನೆ

ಅ)ಸಪ್ತಋಷಿಗಳು ಅಂದರೆ ಎಷ್ಟು ಜನ?

1. ಏಳು    2. ಆರು
3. ಆರು    4.ಮೂರು

ಆ) ವಸಿಷ್ಠ ಮಹರ್ಷಿಯ ಧರ್ಮ ಪತ್ನಿ ಯಾರು?

1.ಆದಿತಿ    2.ದಿತಿ
3.ಕದ್ರು    4.ಆರುಂಧತಿ

ಇ) ವಿಶ್ವಾಮಿತ್ರ ಮಹರ್ಷಿಯ ಮೊದಲ ಹೆಸರೇನು?

1. ಕುಶಿಕ    2. ಕೌಶಿಕ
3.ಅಗಸ್ತ್ಯ    4.ಜಮದಗ್ನಿ

ಈ) ವಿಶ್ವಾಮಿತ್ರ ಮಹರ್ಷಿಯ ಧರ್ಮಪತ್ನಿ ಯಾರು?

1.ದೃಷದ್ವತಿ    2. ಅನಸೂಯ
3. ಅಹಲ್ಯ    4. ಮೇನಕಾ

ಉ) ಜಮದಗ್ನಿ ಮಹರ್ಷಿಯ ಧರ್ಮಪತ್ನಿ ಯಾರು?

1.ದಮಯಂತಿ    2. ರೇಣುಕಾದೇವಿ
3.ಅನಸೂಯ    4. ದಿತಿ

ಊ) ಗೌತಮ ಮಹರ್ಷಿಯ ಧರ್ಮಪತ್ನಿ ಯಾರು?

1. ಅನಸೂಯ    2. ಅಹಲ್ಯ
3. ವಿನುತ    4. ಶುಚಿದೇವಿ

ಋ) ಶ್ರೀರಾಮನಿಂದ ಶಾಪವಿಮುಕ್ತಳಾದ ಸ್ತ್ರೀ ಯಾರು?

1. ಶಬರಿ    2. ಅಹಲ್ಯ
3.ದ್ರೌಪದಿ    4. ತ್ರಿಜಟಿ

ಉತ್ತರಗಳು:
ಅ) 1 ಆ) 4 ಇ) 2 ಈ) 1 ಉ) 2 ಊ) 2 ಋ) 2

## ನೀತಿ ಕಥೆ

# ನಾಳೀ ಜಂಘ

– ಡಾ|| ಎಸ್. ಆರ್. ಲೀಲಾ



ಮಧ್ಯದೇಶಲ್ಲೊಬ್ಬ ಬಡ ಬ್ರಾಹ್ಮಣನಿದ್ದನು, ಹೆಸರು ಗೌತಮ, ವೇದಾಧ್ಯಯನವಿಲ್ಲ, ಬ್ರಾಹ್ಮಣ ತೇಜಸ್ಸಿಲ್ಲ, ಕಳ್ಳನೊಬ್ಬನ ಆಶ್ರಯದಲ್ಲಿದ್ದ ಬೇಟೆಯಾಡಿ ಜೀವಿಸುತ್ತಿದ್ದ, ಅತಿಯಾದ ದುಡ್ಡಿನಾಸೆಯಿತ್ತು.

ಅವನೊಮ್ಮೆ ಕಾಡಿನ ಮಧ್ಯ ಭಾಗಕ್ಕೆ ಬಂದನು. ಹಸಿವು ಬಾಯಾರಿಕೆಗಳಿಂದ ಬಳಲಿದ್ದನು. ಹಾಗೆಯೇ ಮುಂದೆ ನಡೆಯುತ್ತಿದ್ದಾಗ ಸುಂದರವಾದ ಮತ್ತೊಂದು ಕಾಡನ್ನು ಪ್ರವೇಶಿಸಿದನು. ಪಕ್ಷಿಗಳ ಇಂಪಾದ ಕಲರವವೂ ಸುಂದರ ಪುಷ್ಪಗಳ ಕಂಪೂ ಅಲ್ಲಿ ತುಂಬಿತ್ತು.ವನಕ್ಕೆ ಹಿಡಿದ ಛತ್ರಿಯಂತಿದ್ದ ಒಂದು ದೊಡ್ಡ ಮರದ ಕೆಳಗೆ ಬಂದನು. ಸುಸ್ತಾಗಿ ಬಿದ್ದನು. ಮರದ ಮೇಲೆ "ನಾಳೀ ಜಂಘ" ವೆಂಬ ಹೆಸರಿನ ಹಂಸವಿತ್ತು. ಅದಕ್ಕೆ "ರಾಜಧರ್ಮ"ವೆಂಬ ಬಿರುದೂ ಇತ್ತು. ಮರದ ಮೇಲಿದ್ದ ಹಂಸವು ಬಳಲಿದವನನ್ನು ಕಂಡು ಬಳಿಗೆ ಬಂದಿತು. ಅತಿಥಿಯು ತಾನಾಗಿಯೇ ಬಂದನೆಂದು ತಿಳಿದು ಸಂತೋಷಿಸಿತು. ಮೃದು ಮಾತುಗಳಿಂದ ಉಪಚರಿಸಿತು. ಹಣ್ಣು-ನೀರನ್ನು ಕೊಟ್ಟು ಸತ್ಕರಿಸಿತು. ಹೂ, ಚಿಗುರುಗಳಿಂದ ಮೃದುವಾದ ಹಾಸಿಗೆಯನ್ನು ಸಿದ್ಧ ಮಾಡಿತು. ತನ್ನ ರೆಕ್ಕೆಗಳಿಂದಲೇ ಗಾಳಿ ಬೀಸಿ ಸಂತೋಷಪಡಿಸಿತು. ಅವನ ಆಗಮನವನ್ನು ಕುರಿತು ವಿಚಾರಿಸಿತು.

"ಬ್ರಾಹ್ಮಣ ನಿನಗೆ ಬೇಕಾದುದೇನು? ಈ ಕಡೆಗೆ ಏಕೆ ಬಂದೆ?"

ನಾನು ಬಡವ, ಧನಾರ್ಥಿಯಾಗಿ ಬಂದಿದ್ದೇನೆ?".

ಹಂಸವು " ಇಲ್ಲಿಯೇ ತಂಗಿ, ನಾಳೆ ಹೊರಡು, ಧನಪ್ರಾಪ್ತಿಗೆ ನಾಲ್ಕು ಮಾರ್ಗಗಳಿವೆ. ಪರಂಪರೆಯಿಂದಲೂ ದೈವ ಬಲದಿಂದಲೂ ಸತ್ಕರ್ಮಾದಿಂದಲೂ ಮತ್ತು ಗೆಳೆತನದಿಂದಲೂ ಹಣವನ್ನು ಗಳಿಸಬಹುದು. ನಿನಗೆ ಮೈತ್ರಿಯಿಂದ ಧನಪ್ರಾಪ್ತಿಯಾಗುವುದು. ವಿರೂಪಾಕ್ಷ ನೆಂಬ ರಾಕ್ಷಸರಾಜನು ನನ್ನ ಗೆಳೆಯನು. ಈ ಕಾಡಿನ ಅಂಚಿನಲ್ಲಿ ಅವನ ರಾಜ್ಯವಿದೆ. ಅವನಲ್ಲಿಗೆ ಹೋಗಿ ನಿನ್ನ ಗೆಳಯನಾದ ರಾಜ ಧರ್ಮವೆಂಬ ಹಂಸವು ನನ್ನನ್ನು ಕಳುಹಿಸಿರುವನೆಂದು ತಿಳಿಸು."

ಮರುದಿನ ಗೌತಮನು ವಿರೂಪಾಕ್ಷನ ಬಳಿ ಬಂದು ಪರಿಚಯ ವನ್ನು ಹೇಳಿಕೊಂಡನು. ಪ್ರಿಯ ಮಿತ್ರನಿಂದ ಸತ್ ಕೃತನಾಗಿ ಬಂದಿರುವನೆಂದು ತಿಳಿದು ರಾಕ್ಷಸರಾಜನು ಸಂತೋಷಗೊಂಡನು. ಹಂಸದ ಮೇಲಿನ ಸ್ನೇಹದಿಂದ ಇಚ್ಛೆಯಿಲ್ಲದ್ದಿರೂ ಇವನನ್ನು ಸತ್ಕರಿಸಿ ಅಪಾರವಾದ ಹಣವನ್ನು, ವಸ್ತ್ರಾಭರಣಗಳನ್ನು ಕೊಟ್ಟು ಕಳುಹಿಸಿದನು. ಗೌತಮನು ಅತಿ ಆಸೆಯಿಂದ ಹೆಚ್ಚು ಹೆಚ್ಚು ಹೊತ್ತು ತಂದನು. ಹಿಂದಿರುಗುವಾಗ ಪುನಃ ಹಂಸವಿದ್ದ ಮರದ ಕೆಳಗೆ ಬಂದನು. ಹಂಸವು ಸ್ನೇಹದಿಂದ ಮಾತನಾಡಿಸಿತು. ಪುನಃ ಸತ್ಕರಿಸಿತು.

ಗೌತಮನು ಹಿಂದೆ, ಅನೇಕ ಹಿಂಸಾಕೃತ್ಯಗಳನ್ನು ಮಾಡಿದ್ದನು. ಹಂಸವು ಮಾಡಿದ ಉಪಕಾರದಿಂದ ಇವನಿಗೆ ಬುದ್ಧಿ ಬರಲಿಲ್ಲ. ಪುನಃ ದುಷ್ಟಯೋಚನೆಗಳೇ ತಲೆಯಲ್ಲಿ ಓಡುತ್ತಿದ್ದವು. ಹಣದ ಗಂಟನ್ನು ಹೊರಲಾರದೆ ಕಷ್ಟಪಟ್ಟು ಹೊತ್ತು ತಂದಿದ್ದನು." ಈ ಭಾರವನ್ನು ಇನ್ನು ಮುಂದೆ ಹೊರುವುದು ಕಷ್ಟ, ತಿನ್ನಲು ಆಹಾರವಿದ್ದರೆ ಹೇಗೋ ಕಷ್ಟಪಟ್ಟು ಊರನ್ನು ಸೇರಬಹುದು" ಎಂದು ಕೊಂಡನು.ಬಹಳ ಹೊತ್ತು ಆಹಾರ ಸಂಪಾದನೆಗಾಗಿ ಯೋಚಿಸಿದನು.ಅನಂತರ ಹಂಸವನ್ನೇ ಕೊಂದು ಕೊಂಡೊಯ್ಯುವುದಾಗಿ ನಿಶ್ಚಯಿಸಿದನು. ರಾಜ ಧರ್ಮ ಮಲಗುವುದನ್ನೇ ಕಾಯುತ್ತಿದ್ದು ಹಿಡಿದು ಅನಂತರ ಅದನ್ನು ಕೊಂದು, ರೆಕ್ಕೆಗಳನ್ನು ಕಿತ್ತು ಹಂಸವು ತನ್ನ ಚಳಿ ನಿವಾರಣೆಗೆ ಹಾಕಿದ್ದ ಬೆಂಕಿಯಲ್ಲಿಯೇ ಸುಟ್ಟು ಕೈಯಲ್ಲಿ ಹಿಡಿದು ಹೊರಟನು.

ಪ್ರತಿದಿನವೂ ವಿರೂಪಾಕ್ಷನನ್ನು ರಾಜಧರ್ಮವು ಭೇಟಿಯಾಗುತ್ತಿತ್ತು. ಎರಡು ದಿನಗಳಾದರೂ ಅದು ಬಾರದಿದ್ದನ್ನು ಕಂಡು ತನ್ನ ಸೇವಕರನ್ನು ಕಳುಹಿಸಿದನು. ಮರದ ಕೆಳಗೆ ಅದರ ರೆಕ್ಕೆಗಳು ಸಿಕ್ಕಿದವು. ಸಿಟ್ಟುಗೊಂಡ ಸೇವಕರು ಬ್ರಾಹ್ಮಣನದೇ ಕೆಲಸವಿರಬೇಕೆಂದು ತಿಳಿದು ಹುಡುಕಿದರು. ಅವನನ್ನು ಹಿಡಿದು ರಾಜನ ಮುಂದೆ ನಿಲ್ಲಿಸಿದರು. ಮಿತ್ರ ದ್ರೋಹಿಯಾದ ಅವನನ್ನು ಕೊಲ್ಲಲು ವಿರೂಪಾಕ್ಷನ ಆಜ್ಞೆಯಾಯಿತು. ಗೌತಮನನ್ನು ಕೊಂದು ಅವನ ಹೆಣವನ್ನು ಹದ್ದುಗಳಿಗೆ ಎಸೆದರು.

ಹಂಸದ ಮೂಳೆಗಳನ್ನು ಸಂಸ್ಕಾರ ಮಾಡಲು ಸಂಗ್ರಹಿಸಿದರು. ಇಂದ್ರನು ಪ್ರತ್ಯಕ್ಷನಾಗಿ ಹಂಸವನ್ನು ಬದುಕಿಸಿದನು. ಹಂಸವು ಗೌತಮನನ್ನು ಬದುಕಿಸಬೇಕೆಂದು ಪ್ರಾರ್ಥಿಸಿತು. ಇದರ ಉದಾರಗುಣವನ್ನು ಮೆಚ್ಚಿ ಇಂದ್ರನು ಅನುಗ್ರಹಿಸಿದನು ಬದುಕಿದ ಗೌತಮನು ಹಣದ ಚೀಲವನ್ನು ಹೊತ್ತು ತನ್ನ ಊರಿಗೆ ಮರಳಿದನು. ಯಾವ ಪರಿವರ್ತನೆಯೂ ಅವನಲ್ಲಿ ಕಾಣಲಿಲ್ಲ.

ಗೌತಮನು ದುರ್ಗುಣಗಳನ್ನು ಬಿಡಲಿಲ್ಲ , ಆದರೆ ಹಂಸವು "ಅತಿಥಿ ದೇವೋಭವ" ಎಂಬ ಧರ್ಮಾಚರಣೆಯನ್ನು ಮೆರೆಯಿತು. ಸದ್ಗುಣಗಳಿಂದ ಉನ್ನತ ಸ್ಥಾನವನ್ನು ಪಡೆಯಿತು.


ಚಿತ್ರಕಥೆ

# ಕಲ್ಯಾಣ ವೇಂಕಟೇಶ್ವರ

ಕಥೆ: ತೆಲುಗು ಮೂಲ: ಶ್ರೀನಿವಾಸ ದೀಕ್ಷಿಕರು
ಅನುವಾದ: ಆರ್.ಕೆ.
ಚಿತ್ರಗಳು: ತುಲಸೀ ಪ್ರಸಾದ್

ನಾರಾಯಣವನಂನಲ್ಲಿ ಆಕಾಶರಾಜನು ತನ್ನ ಮಗಳು ಪದ್ಮಾವತಿಗೆ ಶ್ರೀ ವೆಂಕಟೇಶ್ವರನೊಂದಿಗೆ ವೈಭವವಾಗಿ ವಿವಾಹ ಮಾಡಿದನು. ನಂತರ ಆಕಾಶರಾಜನು ತನ್ನ ಅಳಿಯನೊಂದಿಗೆ...




ಇಬ್ಬರೂ ಹೋಗಿ ಅಗಸ್ತ್ಯ ಮಹರ್ಷಿಗೆ ನಮಸ್ಕರಿಸಿದರು. ಮಹರ್ಷಿ ಅವರನ್ನು ಆಶೀರ್ವದಿಸಿ.....
ಶ್ರೀನಿವಾಸಾ! ನೂತನ ವಧುವರರು ಆರು ತಿಂಗಳ ಕಾಲ ಪುಣ್ಯ ಕ್ಷೇತ್ರಗಳನ್ನು ದರ್ಶಿಸಬಾರದು.
ಅಂದರೆ....
ನೀವೀಗ ಶೇಷಾಚಲಕ್ಕೆ ಹೋಗಬಾರದು
ಹೌದಾ...!
ನೀವಿಬ್ಬರೂ ಈ ಆರು ತಿಂಗಳು ನನ್ನ ಆಶ್ರಮದಲ್ಲಿಯೇ ಇರಿ !
ಹಾಗೆಯೇ....!
ಆಶ್ರಮದಲ್ಲಿಯೇ ಇದ್ದು ಕಲ್ಯಾಣಿ ನದಿ ತೀರದಲ್ಲಿರುವ ಪ್ರಕೃತಿಯನ್ನು ನೋಡುತ್ತಾ, ವಿಹರಿಸುತ್ತಾ ಆರು ತಿಂಗಳು ಕಳೆದರು ಆ ದಂಪತಿಗಳು
ಮದುವೆಯೇ ಆಗದವರು ಬಂದು ಇಲ್ಲಿರುವ ನನ್ನನ್ನು ದರ್ಶಿಸಿದರೆ ಮದುವೆಯಾಗುತ್ತದೆ. ಇದು ನನ್ನ ಎರಡನೇ ವರ ಪದ್ಮಾ!
ಪದ್ಮಾ! ಇನ್ನು ಶೇಷಾಚಲಕ್ಕೆ ಹೋಗೋಣ. ಬೆಟ್ಟವನ್ನು ಹತ್ತಿ ಬರಲಾರದ ಭಕ್ತರು ಇಲ್ಲಿ ನನ್ನನ್ನು ದರ್ಶಿಸಿಕೊಳ್ಳಬಹುದು.
ಇದು ವರವೇ ನಾಥಾ
ಆ ದಂಪತಿಗಳು ಮೆಟ್ಟಿಲು ಹತ್ತಿ ಬೆಟ್ಟವನ್ನು ಸೇರಿದರು. ಆ ದಾರಿ ಶ್ರೀವಾರಿ ಮೆಟ್ಟಿಲು ಮಾರ್ಗವಾಯಿತು. ಅವರು ವಿಹರಿಸಿದ ಆ ಪ್ರಾಂತ್ಯವೆಲ್ಲಾ ಶ್ರೀನಿವಾಸಮಂಗಾಪುರಂ ಆಯಿತು. ಸ್ವಾಮಿ ಕಲ್ಯಾಣ ವೆಂಕಟೇಶ್ವರನಾದನು.

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...



ಈ ಚಿತ್ರದಲ್ಲಿ ಒಟ್ಟು 6 ವ್ಯತ್ಯಾಸಗಳಿವೆ

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | |
|---|---|---|---|---|---|
| ಧ | ಕ್ಕೆ | ಹಿ | ದ | ಕ್ಕೆ | ಹಿ |
| ರ | ಅ | ಉ | ಸಿ | ಕ | ರ |

ಉತ್ತರಗಳು:
ಅಧರಕ್ಕೆ ಕಹಿ ಉದರಕ್ಕೆ ಸಿಹಿ

## ಮಕ್ಕಳೇ ಇದನ್ನು ಹೊಂದಿಸಿ ಬರೆಯಿರಿ :

| | |
|---|---|
| 1. ಉತ್ತರಾದೇವಿ | ಅ) ದುರ್ಯೋಧನನ ತಾಯಿ |
| 2. ಸತ್ಯವತಿ ದೇವಿ | ಆ) ಅರ್ಜುನನ ತಾಯಿ |
| 3. ಕುಂತಿ ದೇವಿ | ಇ) ಘಟೋದ್ಗಜನ ತಾಯಿ |
| 4. ಹಿಡಿಂಬಾದೇವಿ | ಈ) ವೇದವ್ಯಾಸನ ತಾಯಿ |
| 5. ಗಾಂಧಾರಿ ದೇವಿ | ಉ) ಪರೀಕ್ಷಿತನ ತಾಯಿ |

ಉತ್ತರಗಳು : 1) ಉ 2) ಈ 3)ಆ 4) ಇ 5)ಅ

## ನಿಮಗಿದು ಗೊತ್ತಾ ಮಕ್ಕಳೇ ?

1. ಭೀಷ್ಮನ ಹೆಸರೇನು?
2. ಅಜ್ಞಾತವಾಸದಲ್ಲಿ ನಕುಲನ ಹೆಸರೇನು?
3. ಶತ್ರುಘ್ನನ ಪತ್ನಿಯ ಹೆಸರೇನು?
4. ವಿಭೀಷಣನ ಮಗಳು ಯಾರು?
5. ವಸುದೇವನ ಮೊದಲ ಪತ್ನಿ ಯಾರು?
6. ಗಜೇಂದ್ರನನ್ನು ಹಿಡಿದವರಾರು?
7. ಪ್ರಹ್ಲಾದನ ತಂದೆ ಯಾರು?

1) ದೇವವ್ರತ
2) ದಾಮಗ್ರಂಥಿ
3) ಶ್ರುತ ಕೀರ್ತಿ
4) ತ್ರಿಜಟ
5) ರೋಹಿಣಿ
6) ಮೊಸಳೆ
7) ಹಿರಣ್ಯಕಶ್ಯಪ


Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಪತಿ
# ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು



**2022 ಫೆಬ್ರವರಿ 21 ರಿಂದ 2022 ಮಾರ್ಚ್ 03 ರ ವರೆಗೆ**

**21-02-2022 ಸೋಮವಾರ**
ಹಗಲು: ---
ರಾತ್ರಿ: ಮೂಷಿಕ ವಾಹನದ ಮೇಲೆ ವಿನಾಯಕಸ್ವಾಮಿ ,ಅಂಕುರಾರ್ಪಣೆ

**22-02-2022 ಮಂಗಳವಾರ**
ಹಗಲು: ಪಲ್ಲಕಿ ಉತ್ಸವ,ಧ್ವಜಾರೋಹಣ,
ರಾತ್ರಿ: ಹಂಸ ವಾಹನ

**23-02-2022 ಬುಧವಾರ**
ಹಗಲು: ಸೂರ್ಯಪ್ರಭ ವಾಹನ
ರಾತ್ರಿ: ಚಂದ್ರಪ್ರಭ ವಾಹನ.

**24-02-2022 ಗುರುವಾರ**
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ

**25-02-2022 ಶುಕ್ರವಾರ**
ಹಗಲು: ಮಕರವಾಹನ
ರಾತ್ರಿ: ಶೇಷವಾಹನ

**26-02-2022 ಶನಿವಾರ**
ಹಗಲು: ಅಧಿಕಾರನಂದಿ ವಾಹನ
ರಾತ್ರಿ: ತಿರುಚ್ಚಿ ಉತ್ಸವ



**27-02-2022 ಭಾನುವಾರ**
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

**28-02-2022 ಸೋಮವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ತಿರುಚ್ಚಿ ಉತ್ಸವ

**01-03-2022 ಮಂಗಳವಾರ**
ಹಗಲು: ರಥೋತ್ಸವ,
ರಾತ್ರಿ: ನಂದಿವಾಹನ (ಮಹಾಶಿವರಾತ್ರಿ)

**02-03-2022 ಬುಧವಾರ**
ಹಗಲು: ಪುರುಷಾಮೃಗ ವಾಹನ
ರಾತ್ರಿ: ಕಲ್ಯಾಣೋತ್ಸವ, ಅಶ್ವವಾಹನ

**03-03-2022 ಗುರುವಾರ**
ಹಗಲು: ಸೂರ್ಯಪ್ರಭವಾಹನದಲ್ಲಿ ನಟರಾಜಸ್ವಾಮಿ,ತ್ರಿಶೂಲಸ್ನಾನ
ರಾತ್ರಿ: ಧ್ವಜಾವರೋಹಣ ರಾವಣಾಸುರ ವಾಹನ



SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
Printing on 25-01-2022 and Posting at Tirupati RMS.Regd. with the Registrar of Newspapers for
India under RNI. No. APKAN/2021/80589. Postal Regd.No.TRP/156/2021-2023"Licenced to Post
Without Prepayment No. PMGK/RNP/WPP-04(6)/2021-2023" Posting on 20th of Every Month

# ಶ್ರೀನಿವಾಸಮಂಗಾಪುರಂ
# ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
# ಬ್ರಹ್ಮೋತ್ಸವಗಳು

